ಸಂಪುಟ : Volume 13 ಸಂಚಿಕೆ : Issue 222 ಪುಟಗಳು : Pages 08 ಶನಿವಾರ 18 ಅಕ್ಟೋಬರ್ 2025 ₹2 PRGANO.120927(RNINO:KARKAN/2011/48371) BDR/054/2026-20274 www.mallammanudi.in mallammanudi@gmail.com 9448604450

ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಬಳ್ಳಾರಿ | ವಿಜಯನಗರ | ಕೊಪ್ಪಳ & ಬಾಗಲಕೋಟೆ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ತಿರಸ್ಕಾರಕ್ಕೆ ತಿರಸ್ಕಾರವೇ ಮದ್ದಲ್ಲ ಪ್ರೀತಿಯೇ ದಿವ್ಯಾಷಧ ‘ .

–ಗೌತಮ ಬುದ್ಧ.

2. ಕಿಡಿಗೇಡಿಗಳನ್ನು ಬಂಧಿಸಿ: ವಾಲದೊಡ್ಡಿ
4. ಹಬ್ಬವನ್ನು ಮುಂಜಾಗ್ರತಾ ಕ್ರಮ ವಹಿಸಿ,
8. ಉದ್ಯಾನವನಕ್ಕೆ ಅಧ್ಯಕ್ಷ ಎಸ್ ಇ

## ನವಂಬರನಲ್ಲಿ ಯಾವ ಕ್ರಾಂತಿಯಿಲ್ಲ:ಸಿಎಂ



ಮಲ್ಲಮ್ಮನುಡಿವಾರ್ತೆಮೈಸೂರು: ಅ.17:ರಾಜ್ಯದಲ್ಲಿನವೆಂಬರ್‌ನಲ್ಲಿ ಕ್ರಾಂತಿಯೂಆಗಲ್ಲ,ಭ್ರಾಂತಿಯೂ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸುವ ಮೂಲಕ ನವೆಂಬರ್‌ನಲ್ಲಿ ರಾಜ್ಯ ರಾಜಕೀಯದಲ್ಲಿಬದಲಾವಣೆಗಳಾಗುತ್ತವೆ ಎಂಬವರದಿಗಳನ್ನುತಳ್ಳಿಹಾಕಿದ್ದಾರೆ.

ಕ್ರಾಂತಿಎಂದರೆರೆವೊಲ್ಯೂಷನ್, ಬದಲಾವಣೆ ಯಾವತ್ತೂ ಕ್ರಾಂತಿ ಅಲ್ಲ, ವಾಟ್ ಯೂ ಮೀನ್ ಬೈ ಕ್ರಾಂತಿ ಎಂದು ಪ್ರಶ್ನೆ ಕೇಳಿದ ಮಾಧ್ಯಮದವರನ್ನೇಪ್ರಶ್ನಿಸಿದರು.

ಮೈಸೂರಿನಲ್ಲಿಸುದ್ದಿಗಾರರೊಂದಿಗೆ ಮಾತನಾಡಿದ ಸಂದರ್ಭದಲ್ಲಿ ನವೆಂಬರ್‌ನಲ್ಲಿಕ್ರಾಂತಿಯಾಗುತ್ತದೆ ಎಂಬ ಮಾತುಗಳನ್ನು ಅಲ್ಲಗಳೆದ ಅವರು, ಕ್ರಾಂತಿಯೂ ಆಗಲ್ಲ, ಭ್ರಾಂತಿಯೂ ಆಗಲ್ಲ ಎಂದರು. ಕ್ರಾಂತಿಕ್ರಾಂತಿಎಂದುಹೇಳುವವರಿಗೆ ಮಾಡಲು ಬೇರೆ ಕೆಲಸ ಇಲ್ಲ. ಸುಮ್ಮನೆಏನೇನೋಹೇಳುತ್ತಾರೆ. ಮಾಧ್ಯಮದವರುಆಹೇಳಿಕೆಗಳಿಗೆ ಪ್ರಚಾರ ಕೊಡುವುದನ್ನು ನಿಲ್ಲಿಸಿ, ನಿರ್ಲಕ್ಷ್ಯ ಮಾಡಿದರೆ ಆಗ ಕ್ರಾಂತಿ ಕ್ರಾಂತಿಎಂದುಹೇಳುತ್ತಿರುವವರು ಸುಮ್ಮನಾಗುತ್ತಾರೆ ಎಂದರು.

ಇನ್ಫೋಸಿಸ್ ನಾರಾಯಣ ಮೂರ್ತಿದಂಪತಿರಾಜ್ಯಸರ್ಕಾರದ ಹಿಂದುಳಿದವರ್ಗಗಳಆಯೋಗದಿಂದ ನಡೆಯುತ್ತಿರುವಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಗೆಮಾಹಿತಿನೀಡುವುದಿಲ್ಲ ಎಂದುನಿರಾಕರಿಸಿರುವುದುಭಾರೀ ಸುದ್ದಿಯಾಗಿದೆ.ಕಾಂಗ್ರೆಸ್‌ನಹಲವು ನಾಯಕರು ದಂಪತಿ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ.

ಇನ್ಫೋಸಿಸ್ ನವರೇನು ಬೃಹಸ್ಪತಿಗಳಾ,ನಾವುನಡೆಸುತ್ತಿರುವುದು ಹಿಂದುಳಿದವರಸಮೀಕ್ಷೆಯಲ್ಲ,ಅವರಿಗೆ ಅದು ಅರ್ಥವಾಗದಿದ್ದರೆ ನಾವು ಏನು ಮಾಡಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಳಿದರು.ಇದು ಹಿಂದುಳಿದವರ ಸಮೀಕ್ಷೆಯಲ್ಲ,ಇಡೀರಾಜ್ಯದಏಳು ಕೋಟಿಜನರುಸಾಮಾಜಿಕ,ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಎಂದು 20 ಸಲ ಹೇಳಿದ್ದೇವೆ. ಜಾಹಿರಾತು ಕೂಡ ಕೊಟ್ಟಿದ್ದೇವೆ.ನಮ್ಮಸರ್ಕಾರಶಕ್ತಿ, ಗೃಹಲಕ್ಷ್ಮಿ,ಭಾಗ್ಯಲಕ್ಷ್ಮಿಯೋಜನೆ ಜಾರಿಗೊಳಿಸಿದ್ದೇವೆ. ಅವುಗಳ ಲಾಭವನ್ನು ಮೇಲ್ಜಾತಿಯವರು ಪಡೆದುಕೊಳ್ಳುವುದಿಲ್ಲವೇ,ನಾರಾಯಣ ಮೂರ್ತಿ,ಸುಧಾಮೂರ್ತಿಯವರು ಇದು ಹಿಂದುಳಿದ ವರ್ಗದವರ

2ನೇ ಪುಟನೋಡಿ

## ಮಾಜಿ ಶಾಸಕ ಸುಭಾಷ್ ಗುತ್ತೇದಾರ್ ಮನೆ ಮೇಲೆ ಎಸ್‌ಐಟಿ ದಾಳಿ

ಮಲ್ಲಮ್ಮ ನುಡಿ ವಾರ್ತೆ ಆಳಂದ:ಅ.17: 2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಆಳಂದ ಕ್ಷೇತ್ರದಲ್ಲಿ ನಡೆದ ಮತಗಳ್ಳತನ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ, ಶುಕ್ರವಾರ ಆಳಂದ ಮಾಜಿ ಶಾಸಕ ಮತ್ತು ಬಿಜೆಪಿ ನಾಯಕ ಸುಭಾಷ್ ಗುತ್ತೇದಾರ್ ಅವರ ನಿವಾಸದ ಮೇಲೆ ದಾಳಿ ನಡೆಸಿದೆ.

ಉಪ ಪೊಲೀಸ್ ಅಧಿಕಾರಿ ಅಲ್ಸಾನ್ ಬಾಷಾ ನೇತೃತ್ವದ ಎಸ್‌ಐಟಿ ತಂಡ, 20 ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯೊಂದಿಗೆ ಕಲಬುರ್ಗಿಯಗುಬ್ಬಿಕಾಲೋನಿಯಲ್ಲಿರುವಗುತ್ತೇದಾರ್ ಅವರನಿವಾಸದ ಮೇಲೆ ದಾಳಿ ನಡೆಸಿ, ಪರಿಶೀಲನೆ ನಡೆಸಿದೆ.

ಮಾಜಿ ಶಾಸಕ ಸುಭಾಷ್ ಗುತ್ತೇದಾರ್ ಅವರಿಗೆ ಸಂಬಂಧಿಸಿದ ಮೂರು ಮನೆಗಳಮೇಲೆಇಂದುದಾಳಿನಡೆಸಲಾಗಿದೆಎಂದುಮೂಲಗಳುತಿಳಿಸಿವೆ.

ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷ ಹರ್ಷಾನಂದ ಗುತ್ತೇದಾರ್ ಮತ್ತುಸುಭಾಷ್‌ಗುತ್ತೇದಾರ್ ಅವರಪುತ್ರರಾದಸಂತೋಷ್ ಗುತ್ತೇದಾರ್ ಅವರನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿದೆ.

ಇದೇಪ್ರಕರಣಕ್ಕೆಸಂಬಂಧಿಸಿದಹಣಕಾಸಿನಹಗರಣದಲ್ಲಿಭಾಗಿಯಾಗಿದ್ದಾರೆಂದು ಹೇಳಲಾದ ಚಾರ್ಟರ್ಡ್ ಅಕೌಂಟೆಂಟ್ 2ನೇ ಪುಟನೋಡಿ

## ಮದ್ಯ ಸೇವನೆಯಿಂದ ದೂರವಿದ್ದು, ಗೌರವಯುತ ಜೀವನ ಸಾಗಿಸಿ: ಶರಣಪ್ಪ ಸಲದಾಪುರ



ಮಲ್ಲಮ್ಮ ನುಡಿ ವಾರ್ತೆ ಅಫಜಲಪುರ,ಅ17:ಮದ್ಯಪಾನ ಸೇವಿಸುವುದರಿಂದಅನಾರೋಗ್ಯ ಜತೆಗೆ ಸಮಾಜದಲ್ಲಿನಮ್ಮ ಗೌರವಕ್ಕೂಧಕ್ಕೆ ಬರುತ್ತದೆ. ಆದ್ದರಿಂದಮದ್ಯಪಾನ ತ್ಯಜಿಸುವಮೂಲಕಗೌರವಯುತ ಬದುಕುಸಾಗಿಸಲುಮುಂದಾಗಬೇಕು ಎಂದುಕರ್ನಾಟಕರಾಜ್ಯ ಮದ್ಯಪಾನ ಸಂಯಮಮಂಡಳಿಅಧ್ಯಕ್ಷಶರಣಪ್ಪ ಸಲದಾಪುರ ಸಲಹೆ ನೀಡಿದರು.

ಪಟ್ಟಣದ ಶ್ರೀಗುರುಮಳೇಂದ್ರ ಶಿವಾಚಾರ್ಯರಕಲ್ಯಾಣಮಂಟಪದಲ್ಲಿ ಧರ್ಮಸ್ಥಳ ಸಂಸ್ಥೆಯಿಂದ ಮದ್ಯ ವರ್ಜನ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿಸಿಗುವಮದ್ಯಗಳಲ್ಲಿ ಯಾವುದುಅಸಲಿಯಾವುದುನಕಲಿ ಎಂದು ಗುರುತಿಸಲು ಆಗದಷ್ಟು ಪರಿಸ್ಥಿತಿನಿರ್ಮಾಣವಾಗಿದೆ.ತಮ್ಮ ಸ್ವಾರ್ಥ ಸಾಧನೆಗಾಗಿ ಕೆಲ ಮದ್ಯ ಮಾರಾಟಗಾರರು ನಕಲಿ ಮದ್ಯ ಸರಬರಾಜು ಮಾಡುತ್ತಿರುವಶಂಕೆ ಇದೆ. ನಕಲಿಮದ್ಯ ಸೇವಿಸಿದವ್ಯಕ್ತಿಕೆಲವೇ ವರ್ಷಗಳಿಜೀವಬಿಡಬೇಕಾಗುತ್ತದೆ. ಕುಡಿತಕ್ಕೆ ಬಲಿಯಾಗುವ ವ್ಯಕ್ತಿಯ ಕುಟುಂಬಬೀದಿಗೆಬರುತ್ತದೆ. ಆದ್ದರಿಂದ ನಂಬಿದವರನ್ನು ಸಂಕಷ್ಟಕ್ಕೆ ತಳ್ಳದೇ ಮದ್ಯವನ್ನುತ್ಯಜಿಸಿನೆಮ್ಮದಿಯಾಗಿ ಬಾಳಲುಮುಂದಾಗಬೇಕುಎಂದು ತಿಳಿಸಿದರು.ನಾನು ಮದ್ಯಪಾನ ನಿಷೇಧಕ್ಕಾಗಿಬಹಳಷ್ಟುಹೋರಾಟಗಳನ್ನು ಮಾಡುತ್ತ ಬಂದಿದ್ದೇನೆ. ಇಂದು ನಾನು ಈ ಕಾರ್ಯಕ್ರಮದಲ್ಲಿ ಭಾಗಿಯಾಗುವುದರ ಉದ್ದೇಶ ಧರ್ಮಸ್ಥಳ ಸಂಸ್ಥೆಯವರು ಮದ್ಯ ವರ್ಜನ ಶಿಬಿರ ಮಾಡಿ ಸುಮಾರು 40 ಜನರ ಬದುಕನ್ನು ಹಸನು ಮಾಡಿದ್ದಾರೆ ಎನ್ನುವ ಖುಷಿಗಾಗಿ ಭಾಗಿದ್ದೇನೆ ಎಂದರು.

2ನೇ ಪುಟನೋಡಿ

## ತಾಯಿಯ ಕೊಲೆ: ಆರೋಪಿಯ ಬಂಧನ

ಮಲ್ಲಮ್ಮನುಡಿ ವಾರ್ತೆ ಬಾಗಲಕೋಟೆ,ಅ.17–ತಾಯಿಯನ್ನು ಕೊಲೆಗೈದು ಪರಾರಿಯಾಗಿದ್ದ ಆಕೆಯಮಗನನ್ನು ಕಲಾದಗಿಪೋಲಿಸರುಕೆಲವೇಸಮಯದಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ತಾಲೂಕಿನ ತುಳಸಿಗೇರಿ ಗ್ರಾಮದಲ್ಲಿ ಗುರುವಾರ ಈ ಘಟನೆ ನಡೆದಿದ್ದು, ವೆಂಕಪ್ಪ ಗಿರಿಸಾಗರ ಎಂಬಾತ ತನ್ನ ತಾಯಿ ಶಾವಕ್ಕಗಿರಿಸಾಗರ(58)ಅವಳನ್ನು ಆಯುಧದಿಂದಕುತ್ತಿಗೆಕೊಯ್ದು ಬೆನ್ನಿಗೆಚೂರಿ ಹಾಕಿ ಸಾಯಿಸಿ ಮನೆಯ ಬಾಗಿಲು ಮುಚ್ಚಿ ಪರಾರಿಯಾಗಿದ್ದ. ವಿಷಯ ತಿಳಿದ ಕಲಾದಗಿ ಪಿಎಸ್‌ಐ ತತಕ್ಷಣ ಕಾರ್ಯಾಚರಣೆ ಕೈಗೊಂಡು ಎರಡೇ ಗಂಟೆಯಲ್ಲಿ ವೆಂಕಪ್ಪನನ್ನು ಬಂಧಿಸುವಲ್ಲಿಯಶಸ್ವಿಯಾಗಿದ್ದಾರೆ. ಕುಡಿತದಚಟಕ್ಕೆಅಂಟಿಕೊಂಡಿದ್ದ ವೆಂಕಪ್ಪ ಸಾಲ ಮಾಡಿ ಸೈಕೋ ತರಹ ವರ್ತಿಸುತ್ತಿದ್ದ ಎನ್ನಲಾಗಿದೆ. ಘಟನೆ ನಡೆದ ಕೆಲಸಮಯದಲ್ಲೇಆರೋಪಿಯನ್ನು ಬಂಧಿಸುವಲ್ಲಿಯಶಸ್ವಿಯಾಗಿರುವಕಲಾದಗಿ ಪಿಎಸ್ ಐ ಪ್ರವೀಣ ಬೀಳಗಿ ಹಾಗೂ ಸಿಬ್ಬಂದಿ ಕಾರ್ಯಕ್ಕೆ ಹಿರಿಯ ಪೋಲಿಸ್ ಅಧಿಕಾರಿಗಳು, ತುಳಸಿಗೇರಿ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ರಾಯಚೂರಿನ ಪಿಡಿಓ ಅಮಾನತು

ಮಲ್ಲಮ್ಮನುಡಿವಾರ್ತೆರಾಯಚೂರು:ಅ.17:ರಾಷ್ಟ್ರೀಯಸ್ವಯಂಸೇವಕ ಸಂಘದಪಥಸಂಚನದಲ್ಲಿಭಾಗಿಯಾದಆರೋಪದಡಿಪಂಚಾಯತ್ ಅಭಿವೃದ್ಧಿ ಅಧಿಕಾರಿಯನ್ನು ಅಮಾನತು ಮಾಡಿ ಸರ್ಕಾರ ಆದೇಶಿಸಿದೆ.ಲಿಂಗಸುಗೂರು ತಾಲ್ಲೂಕಿನರೋಡಲಬಂಡಾಗ್ರಾಮದಪಿಡಿಒಪ್ರವೀಣ್‌ಕುಮಾರ್ ಅವರನ್ನು ಪಂಚಾಯತ್ ರಾಜ್ ಇಲಾಖೆ ಆಯುಕ್ತೆ ಡಾ.ಅರುಂಧತಿ ಅವರು ಇಲಾಖಾ ತನಿಖೆ ಕಾಯ್ದಿರಿಸಿ ಅಮಾನತು ಮಾಡಿದ್ದಾರೆ. ಇದೇ ಅಕ್ಟೋಬರ್12 ರಂದು ಲಿಂಗಸುಗೂರುಪಟ್ಟಣದಲ್ಲಿಆರ್‌ಎಸ್‌ಎಸ್‌ಶತಮಾನೋತ್ಸವದಹಿನ್ನೆಲೆಯಲ್ಲಿ ಪಂಥಸಂಚಲನ ಕಾರ್ಯಕ್ರಮ ನಡೆದಿತ್ತು. ಈ ಪಥಸಂಚಲನದಲ್ಲಿ ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಗಣವೇಷ ಧರಿಸಿ ಪ್ರವೀಣ್ ಭಾಗವಹಿಸಿದ್ದರು. ಕರ್ನಾಟಕಸಿವಿಲ್‌ಸೇವಾನಿಯಮಗಳಉಲ್ಲಂಘನೆಹಾಗೂಸರ್ಕಾರಿನೌಕರನ ತರವಲ್ಲದ ರೀತಿ ನಡೆದುಕೊಂಡಿದ್ದರಿಂದ ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ಕೌಶಲ್ಯ ತರಬೇತಿಗೆ ಬಂದರೆ ಯುವನಿಧಿ ಭತ್ಯೆ ನಿಲ್ಲಲ್ಲ: ಸುಳ್ಳು ಸುದ್ದಿಗಳಿಗೆ ಕಿವಿಗೊಡದಿರಲು ಸಿಎಂ ಕರೆ



ಮಲ್ಲಮ್ಮ ನುಡಿ ವಾರ್ತೆ ಮೈಸೂರುಅ17:ನಾವುನುಡಿದಂತೆ ನಡೆದಿದ್ದೇವೆ,ಈಗಲೂನಡೆಯುತ್ತಿದ್ದೇವೆ, ಮುಂದೆಯೂನಡೆಯುತ್ತವೆ. ಅಂತಹ ಸರ್ಕಾರನಮ್ಮ ಸರ್ಕಾರ. ಕೌಶಲ್ಯ ತರಬೇತಿಗೆ ಬಂದರೆ ಯುವನಿಧಿ ಭತ್ಯೆ ನಿಲ್ಲಿಸ್ತಾರೆ ಎನ್ನುವ ಸುಳ್ಳು ಸುದ್ದಿಗಳಿಗೆ ಕಿವಿಗೊಡಬೇಡಿ, ಉದ್ಯೋಗ ಸಿಕ್ಕ ಬಳಿಕ ಮಾತ್ರ ಉದ್ಯೋಗಪಡೆದವರಯುವನಿಧಿ ನಿಲ್ಲಿಸಲಾಗುವುದುಎಂದುಮುಖ್ಯಮಂತ್ರಿ ಸಿದ್ದರಾಮಯ್ಯಮತ್ತೆಸ್ಪಷ್ಟಪಡಿಸಿದರು. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತುಜೀವನೋಪಾಯಇಲಾಖೆ ಮೈಸೂರಿನಲ್ಲಿ ಆಯೋಜಿಸಿದ್ದ ಯುವಸಮೃದ್ಧಿಉದ್ಯೋಗಮೇಳ ವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿಗಳು, ಕೊಟ್ಟಮಾತು ತಪ್ಪಿ ನಡೆಯುವ ಸರ್ಕಾರ ನಮ್ಮ ಸರ್ಕಾರ ಅಲ್ಲ. ನಾವು ನುಡಿದಂತೆ ನಡೆಯುತ್ತಿದ್ದೇವೆ. ಕೇಂದ್ರ ಸರ್ಕಾರವು ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿ ಮಾತು ತಪ್ಪಿದರು. ಈ 11 ವರ್ಷದಲ್ಲಿ22 ಕೋಟಿಉದ್ಯೋಗ ಸೃಷ್ಟಿಸಬೇಕಿದ್ದಕೇಂದ್ರ ಸರ್ಕಾರವು ಸುಳ್ಳು ಹೇಳಿ ಉದ್ಯೋಗ ಸೃಷ್ಟಿ ಮಾಡುವಲ್ಲಿ ವಿಫಲವಾಯಿತು ಎಂದುಹೇಳಿದರು.ನಾವುಅವರಂತೆ ಸುಳ್ಳು ಹೇಳುವುದಿಲ್ಲ ಎಂದು ಸರ್ಕಾರದಿಂದ ಭರ್ತಿಯಾದ ಹುದ್ದೆಗಳ ಮತ್ತು ಉದ್ಯೋಗ ಮೇಳದಲ್ಲಿಭರ್ತಿಯಾದಹುದ್ದೆಗಳ ವಿವರಗಳನ್ನು ನೀಡಿದರು.

ಕಳೆದಎರಡೂವರೆವರ್ಷಗಳಲ್ಲಿ ನಮ್ಮ ಸರ್ಕಾರ ಬೆಂಗಳೂರಿನಲ್ಲಿ ನಡೆಸಿದಉದ್ಯೋಗಮೇಳದಿಂದಾಗಿ 58892ಮಂದಿಉದ್ಯೋಗಾಕಾಂಕ್ಷಿಗಳು ಉದ್ಯೋಗಮೇಳದಲ್ಲಿಭಾಗಿಯಾಗಿ ಅನುಕೂಲ, 2ನೇ ಪುಟನೋಡಿ

## ಕೃಷಿ ಹೊಂಡಕ್ಕೆ ಬಿದ್ದು ಮೂರು ಮಕ್ಕಳ ಸಾವು

ವಿಜಯಪುರ:ಅ.17:ಕೃಷಿಹೊಂಡಕ್ಕೆ ಬಿದ್ದುಮೂವರುಮಕ್ಕಳುಸಾವನ್ನಪ್ಪಿರುವ ಹೃದಯವಿದ್ರಾವಕಘಟನೆವಿಜಯಪುರ ತಾಲೂಕಿನಮಿಂಚನಾಳತಾಂಡಾದಲ್ಲಿ ನಡೆದಿದೆ.ಮೃತರನ್ನು ಸ್ವಪ್ನಾ ರಾಜು ರಾಠೋಡ್ (10), ಶಿವಂ ರಾಜು ರಾಠೋಡ್ (8) ಹಾಗೂ ಕಾರ್ತಿಕ ಈಶ್ವರ ರಾಠೋಡ್ (8) ಎಂದು ಗುರುತಿಸಲಾಗಿದೆ. ಮಿಂಚನಾಳ ತಾಂಡಾದ ಮಾದೇವ ನಗರದ ಈ ಮೂವರು ಮಕ್ಕಳು ಮನೆಯ ಸಮೀಪದ ಹೊಲದ ಹೊಂಡದಲ್ಲಿ ಮುಳುಗಿಮೃತಪಟ್ಟಿದ್ದಾರೆ.ಮಕ್ಕಳು ತುಂಬಹೊತ್ತಾದರೂಕಾಣಿಸದೇಇದ್ದಾಗ ಚಪ್ಪಲಿಗಮನಿಸಿ,ಹೊಂಡದಲ್ಲಿಶೋಧ ನಡೆಸಿದ ಬಳಿಕ ಅವರು ಮೃತ ಪಟ್ಟಿರುವುದು ಬೆಳಕಿಗೆ ಬಂದಿದೆ. ಈ ಪೈಕಿ ಸ್ವಪ್ನಾ, ಶಿವಂ ಒಂದೇ

2ನೇ ಪುಟನೋಡಿ

## ನಮ್ಮೆಲ್ಲರ ಭವಿಷ್ಯಕ್ಕೆ ಜೈವಿಕ ಇಂಧನ ಅತ್ಯಗತ್ಯ : ಎಸ್.ಇ.ಸುಧೀಂದ್ರ



ರಾಯಚೂರು ಅ 17 : ಜೈವಿಕ ಇಂಧನವು ನಮ್ಮೆಲ್ಲರ ಭವಿಷ್ಯದ ಇಂಧನವಾಗಿದೆ. ಈನಿಟ್ಟಿನಲ್ಲಿಕರ್ನಾಟಕರಾಜ್ಯ ಜೈವಿಕಇಂಧನ ಅಭಿವೃದ್ಧಿ ಮಂಡಳಿ ಕಾರ್ಯಯೋಜನೆ ರೂಪಿಸುತ್ತಿದ್ದು, ಕೇರೋಸಿನ್ ಈಗ ಯಾವ ರೀತಿಯಲ್ಲಿಮನೆಮನೆಗೆತಲುಪುತ್ತದೆಯೋಅದೇಮಾದರಿಯಲ್ಲಿಬೈಯೋ ಡಿಸೈಲ್‌ನ್ನುಕೂಡಮನೆಮನೆಗೆತಲುಪಿಸಲುಪ್ರಯತ್ನಮಾಡಲಾಗುವುದು ಎಂದುಕರ್ನಾಟಕರಾಜ್ಯ ಜೈವಿಕಇಂಧನಅಭಿವೃದ್ಧಿಮಂಡಳಿಯಅಧ್ಯಕ್ಷರಾದ ಎಸ್ ಇ ಸುಧೀಂದ್ರ ಅವರು ಹೇಳಿದರು.

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ (ಕೆಎಸ್‌ಬಿಡಿಬಿ) ಬೆಂಗಳೂರು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಮತ್ತು ಕರ್ನಾಟಕಸ್ಟೇಟ್‌ಕೌನ್ಸಿಲ್‌ಫಾರ್‌ಸಾಯನ್ಸ್ ಅಂಡ್ ಟೆಕ್ನಾಲಜಿ (ಕೆಎಸ್ ಸಿಎಸ್‌ಟಿ) ಇವರ ಸಹಯೋಗದಲ್ಲಿ ನಗರದ ಕೃಷಿ ವಿಶ್ವವಿದ್ಯಾಲಯದ ಆಡಳಿತ ಭವನದಲ್ಲಿನ ಸಭಾಂಗಣದಲ್ಲಿ ಅಕ್ಟೋಬರ್ 17ರಂದು ಬಿಆರ್ ಐಡಿಸಿ ಕೇಂದ್ರಗಳ ಪ್ರತಿನಿಧಿಗಳ ಮತ್ತು ಎನ್‌ಜಿಓ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು. 2ನೇ ಪುಟನೋಡಿ

## ಸರ್ಕಾರಿ ಜಾಗಗಳಲ್ಲಿ ನಮಾಜ್ ಮಾಡಲು ಅವಕಾಶ ಕೊಡಬೇಡಿ: ಸರ್ಕಾರಕ್ಕೆ ಯತ್ನಾಳ್ ಪತ್ರ



ಬೆಂಗಳೂರು:ಅ.17: ಸಾರ್ವಜನಿಕ ಸ್ಥಳಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದಚಟುವಟಿಕೆಗಳಿಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರ, ಸರ್ಕಾರಿಸ್ಥಳಗಳಲ್ಲಿ,ಸರ್ಕಾರಿ,ಅನುದಾನಿತ ಶಾಲೆಗಳಆವರಣಮತ್ತುಸಾರ್ವಜನಿಕ ಸ್ಥಳಗಳಲ್ಲಿಯಾವುದೇಧಾರ್ಮಿಕಅಥವಾ ರಾಜಕೀಯಕಾರ್ಯಕ್ರಮಕ್ಕೆಕಡ್ಡಾಯ ಅನುಮತಿಪಡೆಯಬೇಕುಎಂದುಹೇಳಿದೆ.

ಇದರಬೆನ್ನಲ್ಲೇ ವಿಜಯಪುರ ಶಾಸಕ ಬಸನಗೌಡ ಪಾಟೀಲ್? ಯತ್ನಾಳ್ ಅವರುಮುಖ್ಯಮಂತ್ರಿಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದು, ಸರ್ಕಾರದ ಅನುಮತಿಯಿಲ್ಲದೆ, ಸಾರ್ವಜನಿಕರಸ್ತೆ ಹಾಗೂಸರ್ಕಾರಿಆವರಣಗಳಲ್ಲಿನಮಾಜ್ ನಿಷೇಧಿಸಬೇಕುಎಂದುಒತ್ತಾಯಿಸಿದ್ದಾರೆ.

ಯಾವುದೇಅನುಮತಿಯಿಲ್ಲದೆರಸ್ತೆ ಹಾಗೂಸರ್ಕಾರಿಆವರಣಗಳಲ್ಲಿನಮಾಜ್ ಮಾಡುತ್ತಿರುವದೃಶ್ಯಗಳುಕಂಡುಬರುತ್ತಿವೆ. ಇಂತಹ ಚಟುವಟಿಕೆಗಳಿಂದ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ಅಡಚಣೆಉಂಟಾಗುತ್ತಿದೆ.ಇದುಭಾರತೀಯ ಸಂವಿಧಾನದ ಕಲಂ 19 ಮತ್ತು 21ರ ಅಡಿಯಲ್ಲಿಖಾತರಿಯಾದಮುಕ್ತಸಂಚಾರ ಹಾಗೂ ಭದ್ರತೆ ಎಂಬ ಮೂಲಭೂತ ಹಕ್ಕುಗಳಉಲ್ಲಂಘನೆಯಾಗಿದೆ. ಹೀಗಾಗಿ ಸರ್ಕಾರಿಕಚೇರಿಗಳುಅಥವಾಸರ್ಕಾರಿ ಅನುದಾನಿತ ಸಂಸ್ಥೆಗಳಲ್ಲಿ ನಮಾಜ್ ಮಾಡಲು ಅನುಮತಿ ನೀಡಬಾರದು ಎಂದು ಯತ್ನಾಳ್ ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.ಪೂರ್ವ ಅನುಮತಿಯಿಲ್ಲದೆ ರಸ್ತೆಯಲ್ಲಿ, ಪಾದಚಾರಿಮಾರ್ಗಗಳಲ್ಲಿಅಥವಾ ಸರ್ಕಾರಿ ಆವರಣದಲ್ಲಿ ನಮಾಜ್

2ನೇ ಪುಟನೋಡಿ






## ಕ್ರಿಕೇಟ್:ಟೆಸ್ಟ್ ಟ್ವೆಂಟಿಯ ಮೊದಲ ಸೀಸನ್ 2026ರ ಜನವರಿಯಲ್ಲಿ ಶುರು

## ಒಂದನೇ ಪುಟದಿಂದ

### ಯಾವ ಕ್ರಾಂತಿಯಿಲ್ಲ:ಸಿಎಂ

ಸಮೀಕ್ಷೆ ಎಂದು ಭಾವಿಸಿದರೆ ಅದು ತಪ್ಪು. ಮುಂದೆ ಕೇಂದ್ರ ಸರ್ಕಾರ ಜನಗಣತಿಮಾಡುತ್ತದೆ, ಆಗಅವರುಏನುಹೇಳುತ್ತಾರೆಎಂದುಕೇಳಿದರು. ಅವರಿಗೆ ತಪ್ಪು ಮಾಹಿತಿ ಇರಬಹುದು, ಏನಿದ್ದರೂ ಅವರ ಇಷ್ಟ ಎಂದು ಸಿಎಂ ಹೇಳಿದರು.

**ಆರ್ ಎಸ್ಎಸ್ ಸೇರಿದಂತೆ ಇತರೆ ಸಂಘ-ಸಂಸ್ಥೆಗಳ ಚಟುವಟಿಕೆಗಳಿಗೆ ನಿರ್ಬಂಧ**

ಶಾಲಾಆವರಣದಲ್ಲಿಸಂಘಸಂಸ್ಥೆಗಳಚಟುವಟಿಕೆಗಳಿಗೆನಿರ್ಬಂಧಹೇರುವ ಬಗ್ಗೆ2013ರಲ್ಲಿಜಗದೀಶ್‌ಶೆಟ್ಟರ್‌ಅವರುಮುಖ್ಯಮಂತ್ರಿಗಳಿದ್ದಸಂದರ್ಭದಲ್ಲಿ ಸರ್ಕಾರಿ ಆದೇಶ ಹೊರಡಿಸಿರುವ ಬಗ್ಗೆ ಮಾತನಾಡಿದ ಅವರು, ಕೇವಲ ಆರ್.ಎಸ್.ಎಸ್ ಚಟುವಟಿಕೆಗಳಿಗೆ ಮಾತ್ರವಲ್ಲ, ಎಲ್ಲಾ ಸಂಘ- ಸಂಸ್ಥೆಗಳ ಚಟುವಟಿಕೆಗಳ ಮೇಲೂ ಸರ್ಕಾರಿ ಆದೇಶ ಅನ್ವಯವಾಗುತ್ತದೆ. ಸರ್ಕಾರಿ ಶಾಲೆ, ಆಟದ ಮೈದಾನ, ಸರ್ಕಾರಿ ಸ್ಥಳಗಳು, ಉದ್ಯಾನವನಗಳಲ್ಲಿ, ಸರ್ಕಾರಿ ಅನುದಾನಿತಶಾಲೆಗಳಲ್ಲಿಚಟುವಟಿಕೆಗಳಿಗೆನಿರ್ಬಂಧಹೇರಲಾಗಿದೆಎಂದರು.

**ಬಂಡವಾಳ ಹೂಡಿಕೆ ಸಮಾವೇಶದಲ್ಲಿ ಕರ್ನಾಟಕಕ್ಕೆ ಪ್ರಥಮ ಸ್ಥಾನ**

ಆಂಧ್ರಪ್ರದೇಶದಲ್ಲಿ ವಿದೇಶಿ ಕಂಪನಿಗಳು ಹೂಡಿಕೆ ಮಾಡುತ್ತಿರುವ ಬಗ್ಗೆ ಆಂಧ್ರದ ಸಚಿವರೊಬ್ಬರು ಟ್ವೀಟ್ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಹೂಡಿಕೆದಾರರು ತಮಗೆ ಅನುಕೂಲಕರವಾದ ಪ್ರದೇಶಗಳಲ್ಲಿ ಬಂಡವಾಳ ಹೂಡುತ್ತಾರೆ. ಕರ್ನಾಟಕದಲ್ಲಿ ಬಹಳಷ್ಟು ಹೂಡಿಕೆದಾರರು ಬಂಡವಾಳಈಗಾಗಲೇಹೂಡಿಕೆಮಾಡಿದ್ದು, ಅವರಿಗೆಮೂಲಸೌಕರ್ಯಗಳ ಕೊರತೆಯಾಗಿರುವಬಗ್ಗೆದೂರಿದ್ದಾರೆಯೇ? ಐಫೋನ್‌ತಯಾರಿಕೆಯದೊಡ್ಡ ಹೂಡಿಕೆ ಕರ್ನಾಟಕದಲ್ಲಿಯೇ ಆಗಿದೆ. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಭಾರತದ ಹೂಡಿಕೆಯಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ ಎಂದರು.

**ಸರ್ಕಾರದ ವಿರುದ್ಧ ಉದ್ದೇಶಪೂರ್ವಕ ಆರೋಪ**

ಗುತ್ತಿಗೆದಾರರ ಸಂಘದ ಅಧ್ಯಕ್ಷರು ಕಾಂಗ್ರೆಸ್ ಸರ್ಕಾರದಲ್ಲಿಯೂ ಕಮಿಷನ್ ದಂಧೆ ನಡೆಯುತ್ತಿದೆ ಎಂದು ಆರೋಪಿಸಿರುವ ಬಗ್ಗೆ ಸಿಎಂ ಸಿದ್ದರಾಮಯ್ಯ, ಆರೋಪಮಾಡುತ್ತಿರುವವರುನ್ಯಾಯಾಲಯದಮೊರೆ ಹೋಗಲಿ. ಸರ್ಕಾರದವಿರುದ್ಧಉದ್ದೇಶಪೂರ್ವಕವಾಗಿಆರೋಪಿಸಲಾಗುತ್ತಿದೆ ಎಂದುಹೇಳಿದರು. ಬಿಹಾರರಾಜ್ಯದಚುನಾವಣೆಯಲ್ಲಿಇಂಡಿಯಾಬ್ಲಾಕ್ ಗೆಲ್ಲಲಿದೆ. ಜನಬದಲಾವಣೆಬಯಸುತ್ತಿದ್ದಾರೆ. ಬದಲಾವಣೆಆಗುತ್ತದೆಎಂಬ ನಂಬಿಕೆ ಇದೆ. ರಾಹುಲ್ ಗಾಂಧಿಯವರಪಾದಯಾತ್ರೆಯಸಂದರ್ಭದಲ್ಲಿ ಜನರಿಂದಅಭೂತಪೂರ್ವಪ್ರತಿಕ್ರಿಯೆಲಭಿಸಿದ್ದು, ಗೆಲುವುನಮ್ಮದಾಗಲಿದೆ ಎಂದರು.

### ಮನೆ ಮೇಲೆ ಎಸ್‌ಐಟಿ ದಾಳಿ

ಮಲ್ಲಿಕಾರ್ಜುನ ಮಹಾಂತಗೋಳ್ ಅವರ ನಿವಾಸದ ಮೇಲೂ ಎಸ್ ಐಟಿ ದಾಳಿ ನಡೆಸಿದೆ.

ಕಳೆದವಿಧಾನಸಭೆಚುನಾವಣೆಯಲ್ಲಿಕ್ಷೇತ್ರದಲ್ಲಿಮತದಾರರಸೇರ್ಪಡೆಗೆ ಮಲ್ಲಿಕಾರ್ಜುನಅವರು, ಅಕ್ರಂಎಂಬವ್ಯಕ್ತಿಗೆಡೀಲ್‌ಕೊಟ್ಟಿದ್ದರುಎನ್ನುವ ವಿಚಾರತಿಳಿದುಬಂದಿದೆ. ಹೀಗಾಗಿಎಸ್‌ಐಟಿಮಲ್ಲಿಕಾರ್ಜುನಅವರಮನೆ ಮತ್ತು ಕಚೇರಿ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಿದೆ.

ನಿನ್ನೆಯಷ್ಟೇಎಸ್‌ಐಟಿಅಧಿಕಾರಿಗಳುಕಲಬುರಗಿಯಲ್ಲಿಅಕ್ರಂಎನ್ನುವಾತನ ಮನೆ ಮೇಲೆ ದಾಳಿ ಮಾಡಿತ್ತು. ಈ ವೇಳೆ ರಾಶಿ ರಾಶಿ ವೋಟರ್ ಐಡಿಗಳು ಪತ್ತೆ ಆಗಿದ್ದವು. ಒಟ್ಟು 15 ಮೊಬೈಲ್ ಫೋನ್, 7 ಲ್ಯಾಪ್ ಟಾಪ್‌ಗಳನ್ನು ಎಸ್‌ಐಟಿಅಧಿಕಾರಿಗಳುಜಪ್ತಿಮಾಡಿಕೊಂಡಿದ್ದರು. ಇದರಬೆನ್ನಲ್ಲೇಇಂದು ಎಸ್‌ಐಟಿ, ಬಿಜೆಪಿ ಮಾಜಿ ಶಾಸಕರ ಮನೆ ಮೇಲೂ ದಾಳಿ ನಡೆಸಿದೆ.

2023ರ ವಿಧಾಸಭಾ ಚುನಾವಣೆ ವೇಳೆ ಆಳಂದ ಕ್ಷೇತ್ರದಲ್ಲಿ ಮತಗಳ್ಳತನ ನಡೆದಿದೆ ಎಂದು ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ದೂರು ನೀಡಿದ್ದು, ಈ ಸಂಬಂಧ ಎಫ್‌ಐಆರ್ ದಾಖಲಾಗಿತ್ತು.

### ಕಿವಿಗೊಡದಿರಲು ಸಿಎಂ ಕರೆ

ಅರಿವುಪಡೆದುಕೊಂಡಿದ್ದಾರೆ. ಇವರಲ್ಲಿ11507ಅಭ್ಯರ್ಥಿಗಳಿಗೆನೇಮಕಾತಿ ಪತ್ರನೀಡಲಾಗಿದೆ, 22819ಅಭ್ಯರ್ಥಿಗಳಹೆಸರನ್ನುಡಿಣಟಣಮಾಡಲಾಗಿದೆ ಎಂದುವಿವರಿಸಿದರು. ಜಿಲ್ಲೆಗಳಲ್ಲಿನಡೆದಉದ್ಯೋಗಮೇಳದಲ್ಲಿ120563 ಅಭ್ಯರ್ಥಿಗಳು ಭಾಗವಹಿಸಿ, 24391 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಲಾಗಿದೆ, 48232 ಅಭ್ಯರ್ಥಿಗಳ ಹೆಸರನ್ನು ಡಿಣ ಟಣ ಮಾಡಲಾಗಿದೆ ಎಂದು ಪಟ್ಟಿ ನೀಡಿದರು. ಹಿಂದಿನ ಸರ್ಕಾರ ಉದ್ಯೋಗಾಕಾಂಕ್ಷಿಗಳನ್ನು ಸಂಪೂರ್ಣ ನಿರ್ಲಕ್ಷಿಸಿತ್ತು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಈ ಎರಡೂವರೆವರ್ಷಗಳಲ್ಲಿಸರ್ಕಾರದಲ್ಲಿಖಾಲಿಇದ್ದ28000ಉದ್ಯೋಗಗಳನ್ನು ಈಗಾಗಲೇ ಭರ್ತಿ ಮಾಡಿದೆ. 35 ಸಾವಿರ ಹುದ್ದೆಗಳಿಗೆ ಅನುಮೋದನೆ ನೀಡಲಾಗಿದೆಎಂದುವಿವರಿಸಿದರು. ಉದ್ಯಮಗಳಬೇಡಿಕೆಗೆತಕ್ಕಂತೆಕೌಶಲ್ಯ ತರಬೇತಿ ನೀಡಿ ಉದ್ಯೋಗಸೃಷ್ಟಿಸುವ ಮಹತ್ತರ ಕಾರ್ಯದಲ್ಲಿ ಕಾಂಗ್ರೆಸ್ ಸರ್ಕಾರ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

### ಮೂರು ಮಕ್ಕಳ ಸಾವು

ಕುಟುಂಬದವರು. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಮೂವರು ಮಕ್ಕಳ ಮೃತದೇಹಗಳನ್ನು ಹೊರತೆಗೆದಿದ್ದಾರೆ. ವಿಜಯಪುರ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ. ಸಂಜೆ ಮಕ್ಕಳು ಕುರಿಗಳೊಂದಿಗೆ ಆಟವಾಡುತ್ತಾ ಕೃಷಿ ಹೊಂಡದ ಬಳಿ ತೆರಳಿದ್ದರು. ಆಟದ ವೇಳೆ ಕಾಲು ಜಾರಿ ಆಯತಪ್ಪಿ ಮೂವರು ಒಟ್ಟಿಗೆ ಕೃಷಿ ಹೊಂಡಕ್ಕೆ ಬಿದ್ದಿದ್ದಾರೆ. ಮೇಲೆ ಬರಲಾಗದೆ, ಈಜು ಬಾರದೇ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಅತ್ಯಗತ್ಯ: ಎಸ್.ಇ.ಸುಧೀಂದ್ರ

ಕಾಲ ಬದಲಾದಂತೆ ನಾವು ಕೂಡ ಬದಲಾಗಬೇಕಿದೆ. ಜನತೆಗೆ ಅಗತ್ಯ ಇರುವುದನ್ನು ಪೂರೈಸಲು ರಾಜ್ಯ ಸರ್ಕಾರವು ಬದ್ಧವಾಗಿದೆ. ನವ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಬಳಸಿಕೊಂಡು ಜನತೆಗೆ ಅನುಕೂಲ ಕಲ್ಪಿಸಬೇಕು ಎಂಬುದು ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಅವರದೂರದೃಷ್ಟಿಯಾಗಿದೆ. ಜೈವಿಕಇಂಧನಉತ್ಪಾದನೆಗೆಸಂಬಂಧಿಸಿದಂತೆ ಈಗಿರುವಸವಾಲುಗಳುಮತ್ತುಸಾಧ್ಯತೆಗಳಬಗ್ಗೆಮುಖ್ಯಮಂತ್ರಿಗಳೊಂದಿಗೆಹಾಗೂ ಕಾನೂನು ಸಚಿವರಾದ ಹೆಚ್.ಕೆ.ಪಾಟೀಲ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು, ಸಚಿವರಾದಪ್ರಿಯಾಂಕಖರ್ಗೆ ಅವರೊಂದಿಗೆಚರ್ಚಿಸಿದ್ದು ಹೊಸ ಜೈವಿಕ ಇಂಧನ ನೀತಿ ರೂಪಿಸುವ ಪ್ರಯತ್ನಕ್ಕೆ ಪ್ರೋತ್ಸಾಹ ನೀಡುವುದಾಗಿ ತಿಳಿಸಿದ್ದಾರೆ ಎಂದರು. ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ರೂಪಿಸುವ ಯಾವುದೇ ರೀತಿಯ ಯೋಜನೆಗಳಿಗೆ ಬಿಆರ್‌ಐಡಿಸಿ ಮತ್ತು ಎನ್‌ಜಿಓ ಹಾಗೂ ಇನ್ನಿತರರ ಸಹಕಾರ ಅಗತ್ಯವಾಗಿದೆ. ಜೈವಿಕ ಇಂಧನವನ್ನು ವಾಹನಗಳಿಗೆ ಸಹ ಬಳಸಬಹುದಾಗಿದೆ. ದಿನೇದಿನೆ ಜೈವಿಕ ಇಂಧನಕ್ಕೆ ಹೆಚ್ಚಿನ ಬೇಡಿಕೆ ಬರಲಿದ್ದು, ಇದಕ್ಕೆ ಬೇಕಾದ ಕಚ್ಚಾ ಸಾಮಗ್ರಿಯ ಉತ್ಪಾದನೆಯ ಬಗ್ಗೆ ನಾವು ಹೆಚ್ಚಿನ ಗಮನ ಹರಿಸಬೇಕಿದೆ. ಜೈವಿಕಇಂಧನತಯಾರಿಕೆಗೆಸಹಕಾರಿಯಾಗುವಹೊಂಗೆ, ಸುರಹೊನ್ನ ಮತ್ತು ಬೇವು ಬೆಳೆ ಬೆಳೆಯಲು ರೈತರಿಗೆ ಪ್ರೋತಾಹ ನೀಡಬೇಕಿದೆ ಎಂದರು. ಹೊಂಗೆ, ಸುರಹೊನ್ನ ಮತ್ತು ಬೇವು ಬೆಳೆಯ ಉಪ ಉತ್ಪನ್ನಗಳಿಂದ ಸೋಪು, ಪಿನಾಯಿಲ್ ಕೂಡ ತಯಾರಿಸಬಹುದಾಗಿದೆಎಂದರು. ಸಮಾರಂಭದಲ್ಲಿ ಕೃಷಿವಿಜ್ಞಾನಗಳವಿಶ್ವವಿದ್ಯಾಲಯದ ಕುಲಪತಿ ಎಂ.ಹನುಮಂತಪ್ಪ ಮಾತನಾಡಿದರು. ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರಾದ ಶಿವಶಂಕರ ಎಲ್ ಅವರು ಪ್ರಾಸ್ತಾವಿಕ ಮಾತನಾಡಿದರು. ಸಮಾರಂಭದಲ್ಲಿ ಸಂಶೋಧನಾ ನಿರ್ದೇಶಕರಾದ ಅಮರೇಗೌಡ, ಕಾರ್ಯನಿರ್ವಾಹಕ ಎಂಜಿನಿಯರ್ ದಿವಾಕರರಾವ್, ಡಾ. ಲೋಹಿತ್ ಬಿ.ಆರ್., ಜಯರಾಮ್, ಇವರುಜೈವಿಕಇಂಧನಉದ್ಯಾನವನದಸಂಯೋಜಕರಾದ ಡಾ ಶ್ಯಾಮರಾವ ಕುಲಕರ್ಣಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಬಸವರಾಜ ಹಾಗೂ ಬಿಆರ್‌ಐಡಿಸಿ ಕೇಂದ್ರದ 32 ಜಿಲ್ಲೆಗಳ ಪ್ರತಿನಿಧಿಗಳು ಹಾಗೂ ಎನ್‌ಜಿಓ ಪ್ರತಿನಿಧಿಗಳು ಇದ್ದರು. ಕೃಷಿ ವಿವಿಯ ಮುಖ್ಯ ವಿಜ್ಞಾನಿ ಮುನಿಸ್ವಾಮಿ ಎಸ್ ಅವರು ಸ್ವಾಗತಿಸಿದರು. ಆಕಾಶವಾಣಿ ವರದಿಗಾರರಾದ ಅಮರೇಶ ಅವರು ನಿರೂಪಿಸಿದರು.

## ಆರ್.ಎಸ್.ಎಸ್ ಕೂಸು ಈ ದೇಶವನ್ನು ಆಳುತ್ತಿದೆ: ಅಂಕುಶ ಗೋಕಲೆ




ಮಲ್ಲಮ್ಮ ನುಡಿ ವಾರ್ತೆ

ಬೀದರ್. ಅ. 17 : ಆರ್.ಎಸ್.ಎಸ್ ಕೂಸುಈದೇಶವನ್ನುಆಳುತ್ತಿದ್ದು, ಇದನ್ನು ಸಂಪೂರ್ಣವಾಗಿನಿಶೇಧಿಸಬೇಕೆಂದುಜನರ ಧ್ವನಿ ಸಂಘಟನೆ ರಾಜ್ಯಾಧ್ಯಕ್ಷ ಅಂಕುಶ ಗೋಖಲೆಹೇಳಿದರು. ನಗರದಜಿಲ್ಲಾಪತ್ರಿಕಾ ಭವನದಲ್ಲಿಶುಕ್ರವಾರ ಪತ್ರಿಕಾಗೋಷ್ಠಿ ಉದ್ದೇಶಿಸಿಮಾತನಾಡಿರುವಅವರು, ಈ ದೇಶದಸುಪ್ರಿಮ್‌ಕೋರ್ಟ್‌ಸಿಜೆಐಮೇಲೆ ಶುಎಸೆದವಕೀಲನನ್ನುಬಂಧಿಸಿಬಿಡುಗಡೆ ಮಾಡುವಮೂಲಕಈದೇಶದಲ;ಲಿಉನ್ನತ ಸ್ಥಾನದಲ್ಲಿರುವದಲಿತರನ್ನುನೋಡಲಿಕ್ಕೆ ಆಗದ ಸ್ಥಿತಿ ನಿರ್ಮಾಣವಾಗಿದೆ. ಇದು ಈ ದೇಶವನ್ನಾಳುತ್ತಿರುವ ಆರ್.ಎಸ್. ಎಸ್ ಕೂಸು ಪ್ರಧಾನಿ ಮೋದಿಯವರ ಅಧಿಕಾರದಲ್ಲಿ ನಡೆಯುತ್ತಿದೆ ಅಂದರೆ ಸಾಮಾನ್ಯದಲಿತನಪಾಡೇನು? ಎಂದು ಪ್ರಶ್ನಿಸಿದರು.

ಇತ್ತೀಚೆಗೆ ಸೋಲಾಪುರ ಮೂಲದ ವ್ಯಕ್ತಿ ದಾನಪ್ಪ ಎನ್ನುವವರು ರಾಜ್ಯದ ಗ್ರಾಮೀಣಾಭಿವೃದ್ಧಿಹಾಗೂಪಂಚಾಯತರಾಜ ಖಾತೆ ಸಚಿವರು ಹಾಗೂ ಈ ನಾಡಿನ ಓರ್ವದಲಿತಮುಖಂಡರಾದಪ್ರಿಯಾಂಕ್ ಖರ್ಗೆ ಅವರಿಗೆಕರೆಮಾಡಿಅವಾಚ್ಯಪದ ಬಳಕೆಮಾಡಿಬೆದರಿಕೆಹಾಕಿದ್ದನ್ನುಜನರ ಧ್ವನಿಸಂಘಟನೆತೀವ್ರವಾಗಿಖಂಡಿಸುತ್ತದೆ ಎಂದರು. 1940ರಲ್ಲಿಗೋಲವಾಲಕರ್ ಎಂಬವ್ಯಕ್ತಿಯುಒಬ್ಬನಾಯಕ, ಒಂದು ಸಿದ್ಧಾಂತ, ಒಂದುಭಾಷೆಹಾಗೂಒಂದು ಧರ್ಮಎಂದುಹೇಳುವಮೂಲಕಮತಿಯ ಹಿಂಸೆಗೆಪ್ರಚೋದನೆನೀಡಿದ್ದರು. ವಿ.ಡಿ ಸಾವರ್ಕರ್‌ವೇದದ ನಂತರ ಎಲ್ಲಕ್ಕಿಂತ ಪೂಜ್ಯನಿಯವಾದದ್ದುಮನಸ್ಮೃತಿಎಂದು ತಮ್ಮ ಉಮೆನ್ ಇನ್ ಮನುಸ್ಮೃತಿ ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಆರ್.ಎಸ್.ಎಸ್ ಒಂದು ನೊಂದಣಿ ಇಲ್ಲದ ಸಂಘಟನೆಯಾಗಿದೆ. ಇದರಲ್ಲಿ ಎಸ್.ಸಿ, ಎಸ್.ಟಿ, ಓ.ಬಿ.ಸಿ ಕೆಟೆಗರಿಯ ಯುವಜನರನ್ನು ಸಂಘಟನೆ ಹೆಸರಲ್ಲಿ ಸೇರಿಸಿಕೊಂಡುಅವರಿಗೆಜಾತಿಯತೆಯ ತರಬೇತಿನೀಡುತ್ತಿದ್ದಾರೆ. ಇತ್ತೀಚೀನಗ್ವಾಲಿಯರ್ ಮೂಲದನಿವಾಸಿವಕೀಲಅನಿಲಮಿಶ್ರಾ ಎಂಬುವವರುಡಾ.ಅಂಬೇಡ್ಕರ್‌ಅವರನ್ನು ಬ್ರಿಟಿಷರ ಏಜೆಂಟ್ ಎಂದು ಕರೆಯುವ ಮೂಲಕ ಬಹುತ್ವವಿರುವ ಈ ದೇಶದ ಸಂವಿಧಾನಕ್ಕಿಂತಮನುಸ್ಮೃತಿ, ಹಿಂದುತ್ವ ದೊಡ್ಡದುಎಂಬುದನ್ನುಸಾಬಿತುಮಾಡಲು ಹೊರಟುಬಸವಣ್ಣನವರತತ್ವಾದರ್ಶಗಳಿಗೆ ತಿಲಾಂಜಲಿ ಇಡಲು ಆರ್.ಎಸ್.ಎಸ್ ಕೂಸುಗಳುಮುಂದಾಗಿರುವುದುದೊಡ್ಡ ದುರಂತ ಎಂದರು.

ರಾಜ್ಯ ಸರ್ಕಾರ ಗುರುವಾರ ಸಚಿವ ಸಂಪುಟ ಸಭೆಯಲ್ಲಿ ಆರ್.ಎಸ್.ಎಸ್ ನ್ನು ನಿಶೇಧಿಸದೆ ಅಡ್ಡ ಗೋಡೆ ಮೇಲೆ ದೀಪ ಇಟ್ಟಂತೆ ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಕ್ರಮಮಾಡಕೂಡದೆಂಬುದನ್ನು ಹೇಳುವ ಮೂಲಕ ಮೃದು ಧೋರಣೆ ತಾಳಿರುವುದುನೋಡಿದರೆಕಾಂಗ್ರೆಸ್‌ನಲ್ಲೂ ಸಹ ಆರ್.ಎಸ್.ಎಸ್ ಕೂಸುಗಳಿವೆ ಎಂಬುದು ಸಾಬಿತಾಗಿದೆ ಎಂದರು.

ಪ್ರಜಾಪ್ರಭುತ್ವ ಹಾಗೂ ಬಹುತ್ವಕ್ಕೆ ತದ್ವಿರೂದ್ಧವಾದ ಆರ್.ಎಸ್.ಎಸ್ ಸಂಘಟನೆಯನ್ನು ಕೂಡಲೇಸಂಪೂರ್ಣ ಬ್ಯಾನ್ ಮಾಡುವುದರ

ಜೊತೆಗೆಸರ್ವೋಚ್ಛನ್ಯಾಯಾಲಯದ ಮುಖ್ಯನ್ಯಾಯಮೂರ್ತಿಗೊಗೊಯಿ ಅವರಮೇಲೆಶುಎಸೆದವರಿಗೂಸಚಿವ ಪ್ರಿಯಂಕ ಖರ್ಗೆ ಅವರಿಗೂ ಬೆದರಿಕೆ ಹಾಕಿದವರಿಗೆಅತ್ಯಂತಕಠಿಣಕಾನೂನು ಜರುಗಿಸಬೇಕು. ಗ್ವಾಲಿಯರ ವಕೀಲ ಮಿಶ್ರಾಗೂ ತಕ್ಕ ಶಾಸ್ತಿ ಆಗಬೇಕೆಂದು ಗೋಖಲೆ ಆಗ್ರಹಿಸಿದರು.

ಸಂಘಟನೆಯ ಜಿಲ್ಲಾಧ್ಯಕ್ಷ ರಾಜ ಕುಮಾರಶಿಂಧೆ, ಮುಖಂಡರಾದತಿಪ್ಪಣ್ಣ ವಾಲಿ, ಎಮ್.ಡಿ ಜಮಿಲಖಾನ್, ರವಿ ಕೋಟೀರ್, ಮಾರುತಿಕಾಂಬಳೆ, ದತ್ತಾತ್ರಿ ನಾಗವಂಶಿ, ಬಾಬಾ ಪಟೇಲ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಖರ್ಗೆಯವರಿಗೆ ಬೆದರಿಕೆ ಹಾಕಿದ ಕಿಡಿಗೇಡಿಗಳನ್ನು ಬಂಧಿಸಿ: ವಾಲದೊಡ್ಡಿ



ಮಲ್ಲಮ್ಮ ನುಡಿ ವಾರ್ತೆ

ಬೀದರ್. ಅ. 17 : ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಕರೆ ಮಾಡಿ ಬೆದರಿಕೆ ಹಾಕಿದ ಕಿಡಿಗೇಡಿಗಳನ್ನು ಬಂಧಿಸಿಕಠಿಣಶಿಕ್ಷೆಗೊಳಪಡಿಸಬೇಕೆಂದುಕರ್ನಾಟಕಭೀಮಸೇನೆರಾಜ್ಯಕಾರ್ಯಾಧ್ಯಕ್ಷ ವಿಷ್ಣುವರ್ಧನ ವಾಲದೊಡ್ಡಿ ಒತ್ತಾಯಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಸೋಲಾಪುರದ ನಿವಾಸಿ ದಾನಪ್ಪ ಎನ್ನುವ ಕಿಡಿಗೇಡಿ ಆರ್. ಎಸ್.ಎಸ್ ಹೆಸರು ಹೇಳಿಕೊಂಡು ಈ ರೀತಿ ಬೆದರಿಕೆ ಹಾಕಿದ್ದು ಅಕ್ಷಮ್ಯ ಅಪರಾಧ. ನಿಮಗೆಆರ್.ಎಸ್.ಎಸ್ ಇಂತಹದನ್ನುಕಲಿಸುತ್ತದೆಎಂಬಾಯ್ತು. ಹಾಗಾಗಿಪ್ರಿಯಾಂಕ ಖರ್ಗೆ ಅವರುಆರ್.ಎಸ್.ಎಸ್‌ಸಂಘಟನೆಯನ್ನುಬ್ಯಾನ್‌ಮಾಡುವಂತೆತಿಳಿಸಿದ್ದಾರೆ. ಅವರ ಮಾತಿಗೆ ನಮ್ಮ ಸಂಪೂರ್ಣ ಬೆಂಬಲವಿದ್ದು,

ಈ ಸಂಘಟನೆಯನ್ನು ರಾಜ್ಯ ಸರ್ಕಾರ ಸಂಪೂರ್ಣವಾಗಿ ಬ್ಯಾನ್ ಮಾಡಬೇಕು ಇಲ್ಲದಿದ್ದಲ್ಲಿ ಜಿಲ್ಲೆಯ ಎಲ್ಲ ದಲಿತಪರ ಸಂಘಟನೆಗಳು ಸೇರಿ ಉಗ್ರ ಹೋರಾಟ ನಡೆಸುವುದಾಗಿ ವಾಲದೊಡ್ಡಿ ಎಚ್ಚರಿಸಿದರು.

ಸಂಘಟನೆಯಪದಾಧಿಕಾರಿಗಳಾದಸಂದೀಪ, ಪುರೊತ್ತಮಪತ್ರಿಕಾಗೋಷ್ಠಿಯಲ್ಲಿದ್ದರು.

## ಎಸ್ ಕೆ ಫೌಂಡೆಶನ್ ಉದ್ಘಾಟನೆ ನಾಳೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಅ.17:ಭಾಲ್ಕಿಪಟ್ಟಣದತಹಸೀಲ್ ಕಛೇರಿಪಕ್ಕದಲ್ಲಿರುವಪುರಭವನದಲ್ಲಿನಾಳೆ ಭಾನುವಾರಅ.19ರಂದುಮುಂಜಾನೆ11.30 ಗಂಟೆಗೆ ಎಸ್ ಕೆ ಫೌಂಡೆಶನ್ ಉದ್ಘಾಟನಾ ಸಮಾರಂಭ ನಡೆಯಲಿದೆ.

ನಾಡೋಜಡಾ.ಬಸವಲಿಂಗಪಟ್ಟದ್ದೇವರ ದಿವ್ಯ ಸಾನಿಧ್ಯದಲ್ಲಿ ಮತ್ತು ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ನೇತೃತ್ವದಲ್ಲಿ ಬೀದರನ ಸಂಸದ ಸಾಗರ ಖಂಡ್ರೆ, ಎಸ್ ಕೆ ಫೌಂಡೆಶನ್' ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬೀದರ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ಐಪಿಎಸ್, ಜಿಲ್ಲಾ ಪರಿಶಿಷ್ಟ ಪಂಗಡಕಲ್ಯಾಣಅಧಿಕಾರಿಗಳಾದ ಗಿರೀಶರಂಜೋಳಕರ್, ತಾಲೂಕುಸಮಾಜಕಲ್ಯಾಣ ಇಲಾಖೆಯಸಹಾಯಕನಿರ್ದೇಶಕಸದಾನಂದಹಾಗರಗಿ, ನಿವೃತ್ತಪ್ರಾಂಶುಪಾಲಅಶೋಕ ರಾಜೋಳೆ, ಎಸ್ ಕೆ ಫೌಂಡೆಶನ್ ಅಧ್ಯಕ್ಷ ಸಾಹೀಲ್ ಮಾಸುಲ್ದಾರ , ಉಪಾಧ್ಯಕ್ಷ ಕನಕ ಬಿರಾದಾರ, ಕಾರ್ಯದರ್ಶಿ ರಾಹುಲಮೇತ್ರೆ ಸೇರಿದಂತೆ ಫೌಂಡೆಶನ್ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ . ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಬೇಕು ಎಂದು ಎಸ್ ಕೆ ಫೌಂಡೆಶನ್ ಸದಸ್ಯ ರೋಹನ ಶಿಂದೆ ತಿಳಿಸಿದ್ದಾರೆ.

## ಗ್ಯಾರಂಟಿ ಅನುಷ್ಠಾನ ಸಮಿತಿ ವತಿಯಿಂದ ಜಾಗೃತಿ ಅಭಿಯಾನ



ಮಲ್ಲಮ್ಮ ನುಡಿ ವಾರ್ತೆ

ಬೀದರ್. 17 : ರಾಜ್ಯ ಸರ್ಕಾರದ ಜನಪರ ಕಾರ್ಯಕ್ರಮಗಳಾದ ಗ್ಯಾರಂಟಿ ಯೋಜನೆಗಳನ್ನು ಪ್ರತಿಮನೆಗೂತಲುಪಿಸುವನಿಟ್ಟಿನಲ್ಲಿಮಾನ್ಯ ★ಮಾಜಿ ಶಾಸಕರಾದ ಸನ್ಮಾನ್ಯ ಶ್ರೀ ಅಶೋಕ ಖೇಣಿ★ ಸರ್ ರವರ ಮಾರ್ಗದರ್ಶನದಲ್ಲಿ ಬೀದರ ದಕ್ಷಿಣ ಕ್ಷೇತ್ರದ ತಾಲ್ಲೂಕ ಪಂಚ ಗ್ಯಾರಂಟಿ ಉಪಾಧ್ಯಕ್ಷರಾದ ಶ್ರೀ ರಾಜಕುಮಾರ ಮಡಕಿ ಹಾಗೂ ಸದಸ್ಯರ ನೇತೃತ್ವದಲ್ಲಿ ನಮ್ಮ ನಡೆ ಹಳ್ಳಿ ಕಡೆ ಕಾರ್ಯಕ್ರಮವನ್ನು ಬೀದರ ದಕ್ಷಿಣ ವಿಧಾನಸಭಾ ಕ್ಷೇತ್ರದ ಹೊಕ್ರಾಣಾ.ಬಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಹೊಕ್ರಾಣಾ.ಕೆ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ಪಂಚ್ ಗ್ಯಾರಂಟಿ ಯೋಜನೆಗಳಾದ,

ಅನ್ನಭಾಗ್ಯ ಯೋಜನೆ: ಪಡಿತರ ಚೀಟಿ ತಿದ್ದುಪಡಿಗೆ ಸಂಬಂಧಿಸಿದಂತೆಗ್ರಾಮಒನ್‌ಕೇಂದ್ರಗಳಲ್ಲಿಎದುರಾಗುತ್ತಿದ್ದ ತೊಂದರೆಗಳನ್ನುನಿವಾರಿಸುವಲ್ಲಿತಂಡವುಸಕ್ರಿಯವಾಗಿ ಕೆಲಸಮಾಡಿದೆ. ಅಲ್ಲದೆ, ಕಳ್ಳಸಾಗಣಿಕೆಯಂತಹಪ್ರಕರಣಗಳ ಬಗ್ಗೆಯೂನಿಗಾವಹಿಸಿ, ಅಧಿಕಾರಿಗಳಗಮನಕ್ಕೆತರುತ್ತಿದೆ. ಯುವನಿಧಿ: ಈ ಯೋಜನೆ ಪದವೀಧರರು ಮತ್ತು ಡಿಪ್ಲೋಮಾ ಮುಗಿಸಿದ ಯುವಕರಿಗೆ ಯೋಜನೆಯ ಕುರಿತು ಪೂರ್ಣ ಮಾಹಿತಿ ಇಲ್ಲದಿರುವ ಕಾರಣ, ಸಮಿತಿಯುಕಾಲೇಜುಗಳಲ್ಲಿಮತ್ತುಗ್ರಾಮಮಟ್ಟದಲ್ಲಿ ವಿಶೇಷ ಪ್ರಚಾರ ಆಂದೋಲನಗಳನ್ನು ನಡೆಸುತ್ತಿದೆ. ನೋಂದಣಿ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತಿದೆ. ಮತ್ತು ಗೃಹ ಲಕ್ಷ್ಮಿ, ಶಕ್ತಿ ಯೋಜನೆ, ಗೃಹ ಜ್ಯೋತಿ, ಯೋಜನಗಳ ಮಹತ್ವದ ಬಗ್ಗೆ ಮನೆ ಮನೆಗೆ ತೆರಳಿ ಜನರಲ್ಲಿತಿಳಿಸಲಾಯಿತು. ಈಸಂದರ್ಭದಲ್ಲಿಕಮಿಟಿಯ ಸದಸ್ಯರಾದಉದಯಕುಮಾರಚಟನಳ್ಳಿ, ಶಿವಕುಮಾರ ಕುತ್ತಾಬಬಾದ್, ಸೇವಾದಳ್ ಅಧ್ಯಕ್ಷರಾದ ಮೋಹಿನ್ ಪಠಾಣ್, ಮುಖಂಡರಾದ ಶಿವಕುಮಾರ ಪಾಟೀಲ್, ಮೊಹಮ್ಮದ್ ಸಮೀಉದ್ದಿನ್, ಸಂಗಯ್ಯ ಸ್ವಾಮಿ, ಇಬ್ರಾಹಿಂಸೇರಿಅನೇಕಗ್ರಾಮಸ್ಥರುಪಾಲ್ಗೊಂಡಿದರು.

## ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಅ.17 : ಆಹಾರನಾಗರೀಕ ಸರಬರಾಜುಮತ್ತುಗ್ರಾಹಕರವ್ಯವಹಾರಗಳ ಇಲಾಖೆವತಿಯಿಂದಕರ್ನಾಟಕಅಗತ್ಯ ವಸ್ತುಗಳಸಾರ್ವಜನಿಕವಿತರಣಾಪದ್ಧತಿ ನಿಯಂತ್ರಣದಆದೇಶದನ್ವಯಬೀದರ ಜಿಲ್ಲೆಯ ಔರಾದ(ಬಿ) ತಾಲ್ಲೂಕಿನ ಕೊಳ್ಳುರುಮತ್ತುಕಮಲನಗರತಾಲ್ಲೂಕಿನ ಡೊಣಗಾಂವ(ಎಂ)ಗ್ರಾಮಗಳಲ್ಲಿಹೊಸ ನ್ಯಾಯಬೆಲೆಅಂಗಡಿಗಳನ್ನುತೆರೆಯಲು ಅರ್ಹಸಂಘಸಂಸ್ಥೆಗಳಿಂದಅರ್ಜಿಗಳು ಆಹ್ವಾನಿಸಲಾಗಿದೆ ಎಂದು ಬೀದರ ಆಹಾರನಾಗರೀಕಸರಬರಾಜುಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅರ್ಹಸಂಸ್ಥೆಗಳುನಿಗಧಿತ ಅರ್ಜಿನಮೂನೆಯನ್ನುಸಂಬಂಧಪಟ್ಟ ತಹಸಿಲ್ದಾರ ಕಛೇರಿಗಳಲ್ಲಿ (ಆಹಾರ ಶಾಖೆ) ಮತ್ತು ಉಪ ನಿರ್ದೇಶಕರ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರವ್ಯವಹಾರಗಳಇಲಾಖೆಬೀದರ ಅವರ ಕಾರ್ಯಾಲಯದಿಂದ ಪಡೆದು ಭರ್ತಿಮಾಡಿಸೂಕ್ತದಾಖಲೆಗಳೊಂದಿಗೆ ದಿನಾಂಕ: 16-11-2025 ರೊಳಗಾಗಿ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಸಂಬಂಧಿಸಿದತಾಲ್ಲೂಕುತಹಸಿಲ್ದಾರರಿಗೆ, ಆಹಾರಸಿಬಂದ್ದಿಯವರಿಗೆಅಥವಾಉಪ ನಿರ್ದೇಶಕರುಆಹಾರನಾಗರಿಕಸರಬರಾಜು ಮತ್ತುಗ್ರಾಹಕರವ್ಯವಹಾರಗಳಇಲಾಖೆ ಬೀದರಇವರನ್ನುಕಛೇರಿಯವೇಳೆಯಲ್ಲಿ ಸಂಪರ್ಕಿಸಿಮಾಹಿತಿಪಡೆದುಕೊಳ್ಳಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

**ಅಂಗನವಾಡಿ ಕಾರ್ಯಕರ್ತೆ, ಸಹಾಯಕಿರ ನೇಮಕಾತಿ 2023-24**

## ಮಧ್ಯವರ್ತಿಗಳ ಅಮೀಷಕ್ಕೆ ಒಳಗಾಗದಿರಲು ಅಭ್ಯರ್ಥಿಗಳಲ್ಲಿ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಅ.17 : ಬೀದರಜಿಲ್ಲೆಯ ಬೀದರ, ಭಾಲ್ಕಿ, ಬಸವಕಲ್ಯಾಣ, ಹುಮನಾಬಾದಹಾಗೂಸಂತಪೂರ(ಔ) ಶಿಶುಅಭಿವೃದ್ಧಿಯೋಜನಾವ್ಯಾಪ್ತಿಯಲ್ಲಿನ ವಿವಿಧಗ್ರಾಮಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ವ್ಯಾಪ್ತಿಯಲ್ಲಿಖಾಲಿಇರುವಒಟ್ಟು148 ಅಂಗನವಾಡಿಕಾರ್ಯಕರ್ತೆಹಾಗೂ 270ಅಂಗನವಾಡಿಸಹಾಯಕಿಯರ ಗೌರವಸೇವೆಹುದ್ದೆಗಳಿಗೆ2023-24ನೇ ಸಾಲಿನಲ್ಲಿಅರ್ಜಿಆಹ್ವಾನಿಸಲಾಗಿದ್ದು, ಈ ಹುದ್ದೆಗಳ ನೇಮಕಾತಿಯು ನಿಯಮಾನುಸಾರಕೈಗೊಳ್ಳಲಾಗುತ್ತಿದ್ದು, ಯಾವುದೇ ಅವ್ಯವಹಾರಗಳಿಗೆ ಅವಕಾಶವಿರುವುದಿಲ್ಲ.

ಅಭ್ಯರ್ಥಿಗಳುಸಲ್ಲಿಸಿರುವಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು ನಿಯಮಾನುಸಾರತಾಲ್ಲೂಕಾಮಟ್ಟದ ಪರಿಶೀಲನಾಸಮಿತಿಸಭೆಯಲ್ಲಿಎಲ್ಲಾ ಅರ್ಜಿಗಳನ್ನುಪರಿಶೀಲನೆಮಾಡಿ, ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಸಭೆಯಲ್ಲಿ ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಲಾಗಿರುತ್ತದೆ. ಹಾಗೂಕೆಲವು ಅಭ್ಯರ್ಥಿಗಳ ವಾಸಸ್ಥಳ ಕುರಿತು ಆಕ್ಷೇಪಣೆಗಳುಬಂದಿದ್ದು, ವಾಸಸ್ಥಳಗಳ ನೈಜ್ಯತೆಗಾಗಿಸಂಬಂಧಪಟ್ಟತಹಸೀಲ್ದಾರರು ಇವರಿಗೆಕೋರಲಾಗಿರುತ್ತದೆ. ಅದರಂತೆ ಸದರಿಯವರ ವರದಿಯ ಮೇರೆಗೆ ಅಭ್ಯರ್ಥಿಗಳಆಯ್ಕೆಮಾಡಲಾಗಿರುತ್ತದೆ. ಮುಂದುವರೆದುದಿನಾಂಕ:06-10-2025 ರಂದು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರುಅಂಗನವಾಡಿಕಾರ್ಯಕರ್ತೆ/ ಸಹಾಯಕಿಯರಜಿಲ್ಲಾಮಟ್ಟದಆಯ್ಕೆ ಸಮಿತಿಬೀದರರವರಅಧ್ಯಕ್ಷತೆಯಲ್ಲಿ ನಡೆದಸಭೆಯಲ್ಲಿಜಿಲ್ಲಾಧಿಕಾರಿಗಳು ಸೂಚಿಸಿರುವಂತೆ ವಾಸಸ್ಥಳ ಕುರಿತು ಇರುವ ಕೆಲವು ಗೊಂದಲಗಳನ್ನು ಪರಿಶೀಲನೆಮಾಡಲುಸಂಬಂಧಪಟ್ಟ ಜಿಲ್ಲಾಮಟ್ಟದಅಧಿಕಾರಿಗಳಿಗೆಹಾಗೂ ತಾಲ್ಲೂಕುಗಳ ಆಯುಕ್ತರುಗಳಿಗೆ ವಾಸಸ್ಥಳ ನೈಜ್ಯತೆ ಕುರಿತು ವರದಿ ಸಲ್ಲಿಸಲುಪತ್ರ ಬರೆಯಲಾಗಿರುತ್ತದೆ.

ಅರ್ಜಿಸಲ್ಲಿಸಿರುವಅಭ್ಯರ್ಥಿಗಳು ಕಛೇರಿಯಅಧಿಕಾರಿಗಳು/ಸಿಬ್ಬಂದಿಗಳಿಗೆ ಅಥವಾಮಧ್ಯವರ್ತಿಗಳಿಗೆಹಾಗೂ ಏಜೆಂಟ್‌ರುಗಳಿಗೆ ಹಣವನ್ನು ನೀಡದೇ ಯಾವುದೇ ಆಮಿಷಕ್ಕೆ ಒಳಗಾಗಬಾರದೆಂದು ಬೀದರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು

## ವಿದ್ಯಾರ್ಥಿಗಳು, ಉಪನ್ಯಾಸಕರಿಂದ ರಕ್ತದಾನ



ಮಲ್ಲಮ್ಮ ನುಡಿ ವಾರ್ತೆ

ಬೀದರ್.ಅ. 17 : ಇಲ್ಲಿಯ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಶುಕ್ರವಾರಹಮ್ಮಿಕೊಂಡಿದ್ದಶಿಬಿರದಲ್ಲಿವಿದ್ಯಾರ್ಥಿಗಳುಹಾಗೂ ಉಪನ್ಯಾಸಕರು ಸೇರಿ 18 ಮಂದಿ ರಕ್ತದಾನ ಮಾಡಿದರು.

ಬೀದರ್ ರಕ್ತನಿಧಿ ಕೇಂದ್ರದ ಸಿಬ್ಬಂದಿ ರಕ್ತ ಸಂಗ್ರಹಿಸಿದರು. 18 ಯುನಿಟ್ ರಕ್ತ ಸಂಗ್ರಹವಾಯಿತು.

ರಕ್ತದಾನಮಾನವೀಯಕಾರ್ಯವಾಗಿದೆ. ಅರ್ಹರುಕನಿಷ್ಠ ವರ್ಷಕ್ಕೆ ಒಮ್ಮೆಯಾದರೂ ರಕ್ತದಾನ ಮಾಡಬೇಕು ಎಂದು ಉದ್ಘಾಟನೆ ನೆರವೇರಿಸಿದ ಬಿ.ಆರ್.ಐ.ಎಂ.ಎಸ್. ಪಥಾಲಜಿ ವಿಭಾಗದ ಡಾ. ಸಿದ್ಧಾರ್ಥ ಸೂರ್ಯವಂಶಿ ಹೇಳಿದರು.

ರಕ್ತದಾನ, ಶ್ರಮದಾನಮೊದಲಾದಶಿಬಿರಗಳುವಿದ್ಯಾರ್ಥಿಗಳಲ್ಲಿ ಸಾಮಾಜಿಕ ಹೊಣೆಗಾರಿಕೆಯ ಅರಿವು ಮೂಡಿಸುತ್ತವೆ ಎಂದು ನಗರಸಭೆ ಸದಸ್ಯ ಶಶಿಧರ ಹೊಸಳ್ಳಿ ತಿಳಿಸಿದರು.

ರಕ್ತದಾನದಿಂದ ತುರ್ತು ಅವಶ್ಯಕತೆ ಇರುವವರ ಜೀವ ಉಳಿಸಬಹುದು ಎಂದು ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ವಿಜಯಕುಮಾರ ಎಸ್. ಜಾಧವ್ ಹೇಳಿದರು.

ರೆಡ್ ಕ್ರಾಸ್ ಘಟಕದ ಸಂಯೋಜಕ ಉಮೇಶ ತೇಗಂಪುರೆ, ವಕೀಲ್ ಪಟೇಲ್ ಉಪಸ್ಥಿತರಿದ್ದರು. ಎನ್.ಎಸ್.ಎಸ್. ಸಂಯೋಜಕ ಅರುಣ ಮೋಕಾಶಿ ಸ್ವಾಗತಿಸಿದರು. ಸಚಿನ್ ಜಿರೋಬೆ ವಂದಿಸಿದರು.

ಕಾಲೇಜಿನ ಎಲ್ಲ ವಿಭಾಗಗಳ ಮುಖ್ಯಸ್ಥರು, ಬೋಧಕ, ಬೋಧಕೇತರಸಿಬ್ಬಂದಿಹಾಗೂವಿದ್ಯಾರ್ಥಿಗಳುಹಾಜರಿದ್ದರು.

## ಒಂದನೇಪುಟದಿಂದ

### ಅವಕಾಶ ಕೊಡಬೇಡಿ: ಸರ್ಕಾರಕ್ಕೆ ಯತ್ನಾಳ್ ಪತ್ರ

ಮಾಡದಂತೆನೋಡಿಕೊಳ್ಳಲುಮುಖ್ಯಮಂತ್ರಿಸಿದ್ದರಾಮಯ್ಯ ಅವರುರಾಜ್ಯಾದ್ಯಂತ ಎಲ್ಲಾಜಿಲ್ಲಾಧಿಕಾರಿಗಳುಮತ್ತುಪೊಲೀಸ್‌ಆಯುಕ್ತರಿಗೆಸೂಕ್ತನಿರ್ದೇಶನನೀಡಬೇಕೆಂದು ಯತ್ನಾಳ್ ಮನವಿ ಮಾಡಿದ್ದಾರೆ. ಕರ್ನಾಟಕ ಪೊಲೀಸ್ ಕಾಯ್ದೆ ಮತ್ತು ಸಂಬಂಧಿತ ಸಂಚಾರ ನಿಯಮಾವಳಿಗಳ ಅಡಿಯಲ್ಲಿ ಸಾರ್ವಜನಿಕ ಸ್ಥಳಗಳನ್ನು ಧಾರ್ಮಿಕ ಉದ್ದೇಶಗಳಿಗೆ ಅನಧಿಕೃತವಾಗಿ ಬಳಸುವುದನ್ನು ತಡೆಗಟ್ಟಲು ಸ್ಪಷ್ಟವಾದ ಔಯನ್ನು ಸರ್ಕಾರ ರೂಪಿಸಬೇಕು. ಆ ಮೂಲಕ ಧರ್ಮನಿರಪೇಕ್ಷತೆ, ಕಾನೂನಿನ ಸಮಾನತೆ ಮತ್ತು ಸಾರ್ವಜನಿಕ ಶಿಸ್ತಿನ ಬಗ್ಗೆ ತನ್ನ ಬದ್ಧತೆಯನ್ನು ದೃಢಪಡಿಸಬೇಕು ಎಂದು ಯತ್ನಾಳ್ ಆಗ್ರಹಿಸಿದ್ದಾರೆ.

### ಜೀವನ ಸಾಗಿಸಿ: ಶರಣಪ್ಪ ಸಲದಾಪುರ

ಮನುಷ್ಯನಿಗೆ ಸಂಸ್ಕಾರ ಅತಿ ಎತ್ತರಕ್ಕೆ ಕೊಂಡೊಯ್ಯುತ್ತದೆ. ಇದರ ಸದುಪಯೋಗ ನಾವು ಪಡೆದುಕೊಳ್ಳಬೇಕು ಎಂದು ಹೇಳಿದರು. ಧರ್ಮಸ್ಥಳ ಸಂಸ್ಥೆದು ಪ್ರಾದೇಶಿಕ ನಿರ್ದೇಶಕರಾದದಿನೇಶಪ್ರಾಚಾರಿಮಾತನಾಡಿ, ಧರ್ಮಸ್ಥಳಸಂಸ್ಥೆಯಿಂದಪ್ರತಿದಿನವೂ ಸಾಮಾಜಿಕ ಒಳಿತನ್ನು ಬಯಸುವ ಏಕೈಕ ಸಂಸ್ಥೆಯಾಗಿದೆ. ಸಂಸ್ಥೆಯಿಂದ 1989 ನೇ ಮದ್ಯವರ್ಜನಶಿಬಿರವೂಅಫಜಲಪುರತಾಲೂಕಿನಲ್ಲಿನಡೆಯುತ್ತಿದೆ. ಇದುಸಾಮಾಜಿಕ ಸ್ವಾಸ್ಥತೆಯನ್ನುಕಾಪಾಡುವಬಳ್ಳೆಯಭಾವಅಷ್ಟೇಸತತಒಂದುವಾರದಿಂದಶಿಬಿರದಲ್ಲಿ ಭಾಗಿಯಾದ40ಜನರುಸಂಪೂರ್ಣವಾಗಿಮದ್ಯತ್ಯಜಿಸಿದ್ದಾರೆ. ಯಾವತ್ತಿಗೂ ಅವರು ಅದನ್ನು ಮುಟ್ಟುವುದಿಲ್ಲ ಎಂಬ ಭರವಸೆ ಇದೆ ಎಂದರು.

## ಇಂದು ಬೀದರನಲ್ಲಿ ಮಾಲಿನ್ಯ ನಿಯಂತ್ರಣ ಸುವರ್ಣ ಮಹೋತ್ಸವ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಅ.17 : ಪರಿಸರಸಂರಕ್ಷಣೆಮತ್ತುಮಾಲಿನ್ಯ ನಿಯಂತ್ರಣಮಾಡಲುಕಂಕಣಬದ್ಧರಾಗಿರುವಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ 50 ವರ್ಷ ತುಂಬಿದಪ್ರಯುಕ್ತಶನಿವಾರ(ಅಕ್ಟೊಬರ್18)ಬೀದರ್ ನಲ್ಲಿಸುವರ್ಣಮಹೋತ್ಸವಕಾರ್ಯಕ್ರಮನಡೆಯಲಿದೆ.

ಮಾಜಿಪ್ರಧಾನಿದಿವಂಗತಇಂದಿರಾಗಾಂಧಿ1974ರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧೀನದಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿಗಳನ್ನು ಸ್ಥಾಪಿಸಿ ಮಾಲಿನ್ಯ ನಿಯಂತ್ರಣಕ್ಕೆ ಮುನ್ನುಡಿ ಬರೆದರು. ಈಗ ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣಮಂಡಳಿ50 ವರ್ಷಪೂರೈಸಿರಾಜ್ಯಾದ್ಯಂತಸುವರ್ಣಮಹೋತ್ಸವ ಆಚರಿಸಿಕೊಳ್ಳುತ್ತಿದೆ. ಪರಿಸರಸಂರಕ್ಷಣೆಮತ್ತುಮಾಲಿನ್ಯ ನಿಯಂತ್ರಣದಬಗ್ಗೆಜಾಗೃತಿಮೂಡಿಸುವುದುಸುವರ್ಣ ಮಹೋತ್ಸವದ ಗುರಿಯಾಗಿದೆ.

ಅರಣ್ಯ, ಜೀವಿಶಾಸ್ತ್ರಮತ್ತುಪರಿಸರಖಾತೆಸಚಿವಈಶ್ವರ್ ಖಂಡ್ರೆ ಅವರುಕಾರ್ಯಕ್ರಮವನ್ನುಉದ್ಘಾಟಿಸಲಿದ್ದಾರೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿಎಂ ನರೇಂದ್ರಸ್ವಾಮಿ ಪ್ರಾಸ್ತಾವಿಕ ಭಾಷಣ ಮಾಡಿದ್ದಾರೆ. ಪೌರಾಡಳಿತ ಮತ್ತು ಹಜ್ ಖಾತೆಯ ಸಚಿವ ರಹೀಮ್ ಖಾನ್ ಉಪಸ್ಥಿತರಿರುತ್ತಾರೆ.

ಶ್ರೀಮತಿಇಂದಿರಾಗಾಂಧಿಅವರುಮಾಲಿನ್ಯನಿಯಂತ್ರಣ ಮಂಡಳಿಗಳನ್ನುಸ್ಥಾಪನೆಮಾಡಿರುವುದುಮಾತ್ರವಲ್ಲ, ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಹಲವು ಕಾಯಿದೆಗಳನ್ನು ಜಾರಿಗೆ ತಂದರು. 1972ರಲ್ಲಿ ರಾಷ್ಟ್ರೀಯ ಪರಿಸರ ಯೋಜನೆ ಮತ್ತು ಸಮನ್ವಯ ಸಮಿತಿ ರಚಿಸಿದರು. ಅದೇ ವರ್ಷ ಅಳಿವಿನಂಚಿನಲ್ಲಿರುವಪ್ರಾಣಿ-ಪಕ್ಷಿಗಳಪ್ರಭೇದಗಳನ್ನು ರಕ್ಷಿಸಲುವನ್ಯಜೀವಿಸಂರಕ್ಷಣಾಕಾಯ್ದೆ-1972 ಅನ್ನು ಜಾರಿಗೆ ತಂದರು. 1973ರಲ್ಲಿ ಅಳಿವಿನಂಚಿನಲ್ಲಿರುವ ಹುಲಿಗಳನ್ನು ಮತ್ತು ಅವುಗಳ ಆವಾಸಸ್ಥಾನಗಳನ್ನು ರಕ್ಷಿಸಲುಪ್ರಾಜೆಕ್ಟ್‌ಟೈಗರ್ ಎಂಬವನ್ಯಜೀವಿಸಂರಕ್ಷಣಾ ಯೋಜನೆಯನ್ನುರೂಪಿಸಿದರು. 1974ರಲ್ಲಿಜಲಮಾಲಿನ್ಯ ನಿಯಂತ್ರಣಕಾಯ್ದೆಯನ್ನುಜಾರಿಗೆತಂದರು. ಇದಕ್ಕೂ ಮೊದಲು 1972ರಲ್ಲಿ ವಿಶ್ವಸಂಸ್ಥೆಯ ಸ್ಟಾಕ್‌ಹೋಮ್ ಸಮ್ಮೇಳನಉದ್ದೇಶಿಸಿಮಾತನಾಡಿದಇಂದಿರಾಗಾಂಧಿ ಇಡೀಜಗತ್ತಿಗೆಮೊದಲಬಾರಿಗೆಪರಿಸರಸಂರಕ್ಷಣೆಯ ಪಾಠಮಾಡಿದರು. ಹಾಗಾಗಿಸುವರ್ಣಮಹೋತ್ಸವದ ವೇಳೆ ಮಾಲಿನ್ಯ ನಿಯಂತ್ರಣ ಮಂಡಳಿಗೆ ಇಂದಿರಾ ಗಾಂಧಿಅವರಕೊಡುಗೆಗಳನ್ನುಸ್ಮರಿಸಿಕೊಳ್ಳಲಾಗುತ್ತದೆ ಮತ್ತು ಅವರು ತಂದ ಕಾಯಿದೆಗಳ ಬಗ್ಗೆ ಯುವಕರಿಗೆ ತಿಳಿಸಿಕೊಡಲಾಗುತ್ತದೆ. ರಾಜ್ಯದ 15 ಕಡೆ ಸುವರ್ಣ ಮಹೋತ್ಸವದ ಬೃಹತ್ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆಯಾದರೂ ರಾಜ್ಯದ ಎಲ್ಲಾ ಜಿಲ್ಲೆಗಳನ್ನೂ ಒಳಗೊಳ್ಳಲಾಗಿದೆ. ಜಿಲ್ಲಾ ಮಟ್ಟದಲ್ಲಿ ಮಾತ್ರವಲ್ಲದೆವಿಧಾನಸಭಾಕ್ಷೇತ್ರ ಮಟ್ಟದಲ್ಲೂಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಹತ್ತು-ಹಲವು ರೀತಿಯಕಾರ್ಯಕ್ರಮಗಳನ್ನುಹಮ್ಮಿಕೊಳ್ಳಲಾಗಿದೆ. ಭವಿಷ್ಯದ ದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವಕೆಲಸಕ್ಕೆಹೆಚ್ಚುಒತ್ತುನೀಡಲಾಗಿದೆ. ಪರಿಸರ ಸಂರಕ್ಷಣೆಯಲ್ಲಿವಿದ್ಯಾರ್ಥಿಗಳಪಾಲ್ಗೊಳ್ಳುವಿಕೆಹೆಚ್ಚಿಸಲು ಅವರಿಗೆ ಚಿತ್ರಕಲೆ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. ವಿಧಾನಸಭಾ ಕ್ಷೇತ್ರವಾರು ನಡೆಯುತ್ತಿರುವ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಜಿಲ್ಲಾ ಮಟ್ಟದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ 3 ಸಾವಿರ ರೂಪಾಯಿ ಬಹುಮಾನ ನೀಡಲಾಗುವುದು. ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಪರಿಸರ ಕಾಳಜಿ, ಸಂರಕ್ಷಣೆಯ ಸಂದೇಶ ಸಾರುವ ಉತ್ತಮ ರಿಲ್ಸ್ ಗೆ 50 ಸಾವಿರ ರೂಪಾಯಿ ಪ್ರಥಮ ಬಹುಮಾನ, 25 ಸಾವಿರ ರೂಪಾಯಿ ದ್ವಿತೀಯ ಬಹುಮಾನ ಹಾಗು 10 ಸಾವಿರ ರೂಪಾಯಿ ತೃತೀಯ ಬಹುಮಾನ ನೀಡಲಾಗುವುದು. ಈಹಿನ್ನೆಲೆಯಲ್ಲಿಜಿಲ್ಲಾಮಟ್ಟದಲ್ಲಿ ಪರಿಸರಉಳಿವಿಗಾಗಿಹಾಗುಮಾಲಿನ್ಯನಿಯಂತ್ರಣಕ್ಕಾಗಿ ಎಲೆ ಮರೆಯ ಕಾಯಿಗಳಂತೆ ಕೆಲಸ ಮಾಡುತ್ತಿರುವ ವ್ಯಕ್ತಿ ಮತ್ತು ಸಂಘ ಸಂಸ್ಥೆಗಳನ್ನು ಗುರುತಿಸಿ 'ಇಂದಿರಾ ಪ್ರಿಯದರ್ಶಿನಿ ಪರಿಸರ ಪ್ರಶಸ್ತಿ' ನೀಡಲಾಗುವುದು. ಇದಕ್ಕೆಂದೇ ಜಿಲ್ಲಾಧಿಕಾರಿಗಳು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು

# ಸಮೀಕ್ಷೆಯಿಂದ ಬಿಟ್ಟು ಹೋದವರು ಹತ್ತಿರದ ಪಂಚಾಯತಿ, ಸ್ಥಳೀಯ ಸಂಸ್ಥೆಗೆ ಭೇಟಿ ನೀಡಿ ಸಮೀಕ್ಷೆಗೆ ಒಳಪಡಬಹುದು-ಡಿ.ಸಿ. ಬಿ.ಫೌಜಿಯಾ ತರನ್ನುಮ್ ಮನವಿ


ಮಲ್ಲಮ್ಮ ನುಡಿ ವಾರ್ತೆ



ಕಲಬುರಗಿ,ಅ.17-ಪ್ರಸ್ತುತರಾಜ್ಯದಾದ್ಯಂತ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಮನೆ-ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ಕಾರ್ಯ ಇದೇ ಅಕ್ಟೋಬರ್ 18ಕ್ಕೆ ಮುಕ್ತಾಯವಾಗಲಿದ್ದು, ನಾನಾ ಕಾರಣದಿಂದ ಸಮೀಕ್ಷೆಯಿಂದ ಹೊರಗುಳಿದವರು ಸಮೀಪದ ಗ್ರಾಮ ಪಂಚಾಯತಿ, ನಗರ-ಸ್ಥಳೀಯ ಸಂಸ್ಥೆ, ತಹಶೀಲ್ದಾರ ಹಾಗೂ ತಾಲೂಕ ಪಂಚಾಯತ್ ಕಚೇರಿಗೆ ಭೇಟಿ ನೀಡಿ ಸಮೀಕ್ಷೆಗೆ ಒಳಪಡಬಹುದಾಗಿದೆ. ಸಮೀಕ್ಷೆಯಲ್ಲಿ ಭಾಗಿಯಾಗಲು ಇಚ್ಛಿಸುವ ಜಿಲ್ಲೆಯ ಯಾವುದೇ ಕುಟುಂಬ ಅಥವಾ ಕುಟುಂಬದ ಸದಸ್ಯರು ಹತ್ತಿರದ ಗ್ರಾಮ ಪಂಚಾಯತ, ಪಟ್ಟಣ ಪಂಚಾಯತಿ-ಪುರಸಭೆ, ತಾಲ್ಲೂಕು ಪಂಚಾಯತ ಅಥವಾ ತಹಶೀಲ್ದಾರರ ಕಛೇರಿಗೆ ಭೇಟಿ ನೀಡಿ ಅಲ್ಲಿರುವ ಗಣತಿದಾರರನ್ನು ಕಂಡು ಸಮೀಕ್ಷೆಗೆ ಒಳಪಡಬಹುದಾಗಿದೆ ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಜಿಲ್ಲೆಯ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಸಮೀಕ್ಷೆಗೆ ಒಳಗಾಗುವರು ಆಧಾರ ಕಾರ್ಡ್, ಮತದಾರರ ಗುರುತಿನ ಚೀಟಿ ಮತ್ತು ಪಡಿತರ ಚೀಟಿ (ಲಭ್ಯವಿದ್ದಲ್ಲಿ) ಹಾಗೂ 6 ವರ್ಷದ ಕೆಳಗಿನ ಮಕ್ಕಳಿದ್ದಲ್ಲಿ ಜನ್ಮ ದಿನಾಂಕ ಅಥವಾ ಜನನ ಪ್ರಮಾಣ ಪತ್ರ ದಾಖಲೆಗಳನ್ನು ಗಣತಿದಾರರ ಮಾಹಿತಿ ನೀಡಿ ಸಮೀಕ್ಷೆಗೆ ಒಳಪಡಬೇಕು ಎಂದು ಅವರು ತಿಳಿಸಿದ್ದಾರೆ.

## ಸಂಸ್ಕಾರದಿಂದ ಸಂಸ್ಕೃತಿ ಉಳಿವು ಬೆಳವಣಿಗೆ ಸಾಧ್ಯ : ಶ್ರೀ ರಂಭಾಪುರಿ ಜಗದ್ಗುರುಗಳು



ಮಲ್ಲಮ್ಮ ನುಡಿ ವಾರ್ತೆ

ಕಲಬುರ್ಗಿ- ಅಕ್ಟೋಬರ್ 17- ಪರಿಶುದ್ಧ ಮತ್ತು ಪವಿತ್ರವಾದ ಜೀವನ ರೂಪಿತಗೊಳ್ಳಲು ಸಂಸ್ಕಾರ ಬಹಳ ಮುಖ್ಯ. ಜೀವನವನ್ನು ಸುಂದರ ಶುದ್ಧಗೊಳಿಸುವುದೇ ಸಂಸ್ಕಾರದ ಗುರಿ. ಸಂಸ್ಕಾರದಿಂದ ಸತ್ಯ ಸಂಸ್ಕೃತಿ ಉಳಿವು ಬೆಳವಣಿಗೆ ಸಾಧ್ಯವೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ನಗರದ ಹೊಸ ಜೇವರ್ಗಿ ರಸ್ತೆಯಲ್ಲಿರುವ ಖಮಿತಕರ ಮಂಗಲ ಕಾರ್ಯಾಲಯದಲ್ಲಿ ಜರುಗಿದ ಜನಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಆಧುನಿಕಯುಗದಲ್ಲಿ ಮಾನವೀಯ ಸಂಬಂಧಗಳು ಶಿಥಿಲಗೊಳ್ಳುತ್ತಿವೆ. ಬದುಕಿನ ಹಿರಿಮೆ ಮತ್ತು ರಹಸ್ಯವನ್ನು ಬೋಧಿಸುವುದೇ ಧರ್ಮದ ಗು-ರಿಯಾಗಿದೆ. ಧರ್ಮದ ದಿಕ್ಸೂಚಿ ಇಲ್ಲದೇ ಹೋದರೆ ಬದು-ಕಿಗೆ ಅರ್ಥವೇ ಇಲ್ಲ. ಧರ್ಮ ದರ್ಶನಗಳ ಅರಿವಿಗಾಗಿ ಆಧ್ಯಾತ್ಮದ ಚಿಂತನೆ ಬಹಳಷ್ಟು ಅವಶ್ಯಕವಾಗಿದೆ. ದೇವರು, ಧರ್ಮ ಮತ್ತು ಗುರುವನ್ನು ಯಾವತ್ತೂ ಮರೆಯಬಾರದೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ. ಬದುಕಿನ ಶ್ರೇಯಸ್ಸಿಗೆ ಧರ್ಮಾಚರಣೆ ಅವಶ್ಯಕವೆಂದರು.

ಕೆಲ್ಲೂರು ಹಿರೇಮಠದ ಬಸಯ್ಯಸ್ವಾಮಿ ರಚಿಸಿದ "ತತ್ವಭರಿತ ಭಜನಾಮೃತ" ಕೃತಿಯನ್ನು ಶ್ರೀನಿವಾಸ ಸರಡಗಿಯ ಡಾ॥ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಬಿಡುಗಡೆ ಮಾಡಿ ಸಂಪತ್ತು ಬೆಳೆದಂತೆ ಸಂಸ್ಕೃತಿ ಬೆಳೆಯಬೇಕು. ಶ್ರದ್ಧೆಯಿದ್ದರೆ ಧರ್ಮ ಸಂಸ್ಕೃತಿ ಉಳಿಯಲು ಸಾಧ್ಯ. ಸಂಸ್ಕಾರದಿಂದ ಬದುಕು ಸಮೃದ್ಧಗೊಳ್ಳುವುದೆಂದರು.

ಮದ್ದರ್ಕಿ ಹಿರೇಮಠದ ಶೀಲವಂತ ಶಿವಾಚಾರ್ಯರು ನಾಲ್ಕು ವೀರಮಾಹೇಶ್ವರ ಜಂಗಮ ವಟುಗಳಿಗೆ ಶಿವದೀಕ್ಷಾ ಅಯ್ಯಾಚಾರ ನೆರವೇರಿಸಿ ಮಂತ್ರೋಪದೇಶ ಮಾಡಿದರು. ಚವದಾಪುರಿ ಮಠದ ಡಾ. ಅಭಿನವ ರಾಜಶೇಖರ ಶಿವಾಚಾರ್ಯರು, ಸಿದ್ಧನಕೊಳ್ಳದ ಡಾ॥ ಶಿವಕುಮಾರ ಶಿವಾಚಾರ್ಯರು ಆಂದೋಲಾದ ಸಿದ್ಧಲಿಂಗ ಸ್ವಾಮಿಗಳು ಪಾಲ್ಗೊಂಡು ನುಡಿ ನಮನ ಸಲ್ಲಿಸಿದರು. ಬೆಳಗುಂಪ ಹಿರೇಮಠದ ಅಭಿನವ ಪರ್ವತೇಶ್ವರ ಶಿವಾಚಾರ್ಯರು ತಮ್ಮ ಉಪದೇಶಾಮೃತದಲ್ಲಿ ವೀರಶೈವ ಧರ್ಮದಲ್ಲಿ ಆದರ್ಶ ಮೌಲ್ಯಗಳನ್ನು ಪ್ರತಿಪಾದಿಸಿದ್ದಾರೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ದಶಧರ್ಮ ಸೂತ್ರಗಳನ್ನು ಅರಿತು ಆಚರಿಸಿ ಜೀವನ ಸಾರ್ಥಕಪಡಿಸಿಕೊಳ್ಳಬೇಕೆಂದರು.

ಕಲಬುರ್ಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ, ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ ನರಿಬೋಳ, ಶಿವಶರಣಪ್ಪ ಸೀರಿ, ಕಲ್ಲೂರ ಜಗಶೆಟ್ಟಿಗೌಡ ಮಾಲಿಪಾಟೀಲ, ಪ್ರೇಮನಗೌಡ ಮೋಲೀಸ ಪಾಟೀಲ, ಸಿದ್ಧಣ್ಣ ದೇಸಾಯಿ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಬಸಯ್ಯಸ್ವಾಮಿ ಹಿರೇಮಠ-ಶ್ರೀಮತಿ ಮಹಾಂತಮ್ಮನವರ ಅಮೃತ ಮಹೋತ್ಸವ ನಿಮಿತ್ಯ ತುಲಾಭಾರ ಸಮಾರಂಭ ಜರುಗಿತು. ಎಂ.ಕೆ.ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು.

ವಿಜಯಕುಮಾರ ರೋಣದ ಸ್ವಾಗತಿಸಿದರು. ಬಂಡಯ್ಯ ಶಾಸ್ತ್ರಿಗಳು ಸುಂಟನೂರು ನಿರೂಪಿಸಿದರು. ರುದ್ರಯ್ಯ ಹಿರೇಮಠ ಪರಿವಾರದವರು ಕಾರ್ಯಕ್ರಮವನ್ನು ಸಂಯೋಜಿಸಿ ಶ್ರೇಯಸ್ಸಿಗೆ ಶ್ರಮಿಸಿದರು. ಸಮಾರಂಭದ ನಂತರ ಅನ್ನದಾಸೋಹ ಜರುಗಿತು.

## ರಾಜ್ಯ ಮಾಹಿತಿ ಆಯುಕ್ತರಾದ ಬಿ ವೆಂಕಟಸಿಂಗ್ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಅಕ್ಟೋಬರ್ 17 (ಕರ್ನಾಟಕ ವಾರ್ತೆ): ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮಾಹಿತಿ ಆಯುಕ್ತರಾದ ಬಿ ವೆಂಕಟಸಿಂಗ್ ಅವರು ಅಕ್ಟೋಬರ್ 19 ರಿಂದ ರಾಯಚೂರು ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಅಕ್ಟೋಬರ್ 19ರಂದು ಬೆಳಗ್ಗೆ 11 ಗಂಟೆಗೆ ಬೆಂಗಳೂರಿನಿಂದ ನಿರ್ಗಮಿಸಿ ರಾತ್ರಿ 8 ಗಂಟೆಗೆ ಮಂತ್ರಾಲಯಕ್ಕೆ ಆಗಮಿಸಿ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ವಾಸ್ತವ್ಯ ಮಾಡುವರು.

ಅಕ್ಟೋಬರ್ 20ರಂದು ಬೆಳಗ್ಗೆ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ದಿವ್ಯದರ್ಶನ ನಂತರ ಬೆಳಗ್ಗೆ 10 ಗಂಟೆಗೆ ಮಂತ್ರಾಯಲದಿಂದ ನಿರ್ಗಮಿಸಿ ಮಧ್ಯಾಹ್ನ 2 ಗಂಟೆಗೆ ರಾಯಚೂರು ನಗರಕ್ಕೆ ಆಗಮಿಸಿ ವಾಸ್ತವ್ಯ ಮಾಡುವರು.

ಅಕ್ಟೋಬರ್ 21ರಂದು ಬೆಳಗ್ಗೆ 7 ಗಂಟೆಗೆ ರಾಯಚೂರಿನಿಂದ ನಿರ್ಗಮಿಸಿ ಕಲಬುರಗಿಗೆ ಪ್ರಯಾಣಿಸಿ ಬೆಳಗ್ಗೆ 10.30ಕ್ಕೆ ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವರು. ಸಂಜೆ 5.30ಕ್ಕೆ ಕಲಬುರಗಿಯಿಂದ ನಿರ್ಗಮಿಸಿ ರಾಯಚೂರು ನಗರಕ್ಕೆ ಆಗಮಿಸಿ ವಾಸ್ತವ್ಯ ಮಾಡುವರು.

ಅಕ್ಟೋಬರ್ 23ರಂದು ಬೆಳಗ್ಗೆ 10 ಗಂಟೆಗೆ ರಾಯಚೂರಿನಿಂದ ನಿರ್ಗಮಿಸಿ ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸಿ ಅಕ್ಟೋಬರ್ 24ರಿಂದ ಕರ್ನಾಟಕ ಮಾಹಿತಿ ಆಯೋಗದ ಕೇಂದ್ರ ಕಚೇರಿಯಲ್ಲಿ ರಾಜ್ಯ ಮಾಹಿತಿ ಆಯುಕ್ತರು ನಡೆಸುವ ಪ್ರಕರಣಗಳ ವಿಚಾರಣೆಯಲ್ಲಿ ಭಾಗಿಯಾಗುವರು ಎಂದು ಕರ್ನಾಟಕ ಮಾಹಿತಿ ಆಯೋಗದ ಶಾಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಾದೇಶಿಕ ಆಯುಕ್ತರಿಂದ ಅಕ್ಟೋಬರ್ 18ರಂದು ಸಭೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಅಕ್ಟೋಬರ್ 17- ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್ ಅವರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 18ರಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿ ತಯಾರಿಸುವ ಕುರಿತು ಸಭೆ ನಡೆಯಲಿದೆ. ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಮಾಹಿತಿಯೊಂದಿಗೆ ಹಾಜರಾಗಲು ಅಪರ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ವಕ್ಫ್ ಆಸ್ತಿಗಳ ದಾಖಲೆಗಳನ್ನು ಉಮೀದ್ ಪೋರ್ಟಲ್‌ದಲ್ಲಿ ದಾಖಲಿಸಲು ಡಿಸೆಂಬರ್ 5 ಕೊನೆಯ ದಿನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಅ.17-ಕಲಬುರಗಿ ಜಿಲ್ಲೆಯಲ್ಲಿರುವ ಎಲ್ಲಾ ವಕ್ಫ್ ಸಂಸ್ಥೆಗಳ ಅಧ್ಯಕ್ಷರು, ಮುತ್ತವಲ್ಲಿಗಳು, ಆಡಳಿತಾಧಿಕಾರಿಗಳು ಹಾಗೂ ಕೇರ್ ಟೇಕರ್‌ಗಳು ಉಮೀದ್ ಪೋರ್ಟಲ್‌ನಲ್ಲಿ ಮೇಕರ್ ಆಗಿ ನೋಂದಣಿ ಮಾಡಿಕೊಂಡು ತಮಗೆ ಸಂಬಂಧಪಟ್ಟ ವಕ್ಫ್ ಸಂಸ್ಥೆಗಳ ವಿವರವನ್ನು ದಾಖಲಾತಿಗಳೊಂದಿಗೆ ಉಮೀದ್ ಪೋರ್ಟಲ್‌ನಲ್ಲಿ ನೋಂದಾಯಿಸಲು 2025ರ ಡಿಸೆಂಬರ್ 5 ಕೊನೆಯ ದಿನವಾಗಿದೆ ಎಂದು ಕಲಬುರಗಿ ಜಿಲ್ಲಾ ವಕ್ಫ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅದರಂತೆ ಜಿಲ್ಲೆಯ ಎಲ್ಲಾ ವಕ್ಫ್ ಸಂಸ್ಥೆಗಳ ಅಧ್ಯಕ್ಷರು, ಮುತ್ತವಲ್ಲಿಗಳು, ಆಡಳಿತಾಧಿಕಾರಿಗಳು, ಕೇರ್ ಟೇಕರ್‌ಗಳು ಉಮೀದ್ 2025 ಮತ್ತು ಅದರ ನಿಯಮಗಳ ಅಡಿಯಲ್ಲಿ ನಿಗದಿಪಡಿಸಿದ ದಾಖಲೆಗಳನ್ನು ಆನ್‌ಲೈನ್ ಮೂಲಕ ಉಮೀದ್ ಪೋರ್ಟಲ್‌ನಲ್ಲಿ ಸ್ವತಃ ಸಲ್ಲಿಸಲು ಅಥವಾ ಕಲಬುರಗಿ ಜಿಲ್ಲಾ ವಕ್ಫ್ ಕಚೇರಿಗೆ ಭೇಟಿ ನೀಡಿ, ಸಂಬಂಧಪಟ್ಟ ವಕ್ಫ್ ಸಂಸ್ಥೆ ಮತ್ತು ವಕ್ಫ್ ಆಸ್ತಿಗಳ ಮಾಹಿತಿಯನ್ನು ಉಮೀದ್ ಪೋರ್ಟಲ್‌ನಲ್ಲಿ ಸಲ್ಲಿಸಬೇಕೆಂದು ಅವರು ತಿಳಿಸಿದ್ದಾರೆ.

## ಅಕ್ಟೋಬರ್ 18 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಅ.17-ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದಲ್ಲಿ ಬರುವ 11ಕೆ.ವಿ. ಪೋಲೀಸ್ ಕಾಲೋನಿ ಫೀಡರ್ ವ್ಯಾಪ್ತಿಯಲ್ಲಿನ ನಿರ್ವಹಣಾ ಕಾರ್ಯಕೈಗೊಳ್ಳುವ ಪ್ರಯುಕ್ತ ಇದೇ ಆಗಸ್ಟ್ 18ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಜೆಸ್ಕಾಂನೊಂದಿಗೆ ಸಹಕರಿಸುವಂತೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರರು(ವಿ) ಪ್ರಕಟಣೆಯಲ್ಲಿ ಕೋರಿದ್ದಾರೆ. ಪೋಲಿಸ್ ಕಾಲೋನಿ ಫೀಡರ್: ಎಮ್.ಎಸ್.ಐ, ಡಿಗ್ರಿ ಕಾಲೇಜ್, ರಾಜಾಪುರ್, ನಾಯ್ಡು ಲೇಔಟ್, ಪಿ.ಡಬ್ಲ್ಯೂ.ಡಿ.ಕ್ವಾರ್ಟರ್ಸ್, ಕುವೆಂಪು ನಗರ, ಪೊಲೀಸ್ ಭವನ, ನೃಪತುಂಗಾ ಕಾಲೋನಿ, ಪ್ರಶಾಂತನಗರ-ಬಿ, ಶಾಹಾಬಾದ ಶಕ್ತಿನಗರ, ಗರ್ಲ್ಸ್ ಹಾಸ್ಟೇಲ್, ಏಶಿಯನ್ ಮಾಲ್, ಜಗತ್, ಹನುಮಾನ ದೇವಸ್ಥಾನ, ಗೊಲ್ಲರ್ ಗಲ್ಲಿ, ಜಗತ್ ಅಪ್ಪರ ಆಂಡ್ ಲೊವರ್ ಲೇನ್, ಮೈಲಾರಲಿಂಗ ದೇವಾಲಯ, ಪಿ.ಎಲ್.ಡಿ. ಬ್ಯಾಂಕ್, ಬಂಜಾರಾ ಲೇಔಟ್, ರಾಜಾಪೂರ್ ಜಿಡಿಎ, ಅಂಬೇಡ್ಕರ ಹಾಸ್ಟೆಲ್ ಹಾಗೂ ಸುತ್ತ ಮುತ್ತಲ್ಲಿನ ಪ್ರದೇಶಗಳು.

## ವೀರಭದ್ರಪ್ಪ ನಾಟೀಕಾರ ನೇತೃತ್ವದಲ್ಲಿ ಶಹಾಬಾದ್ ರಸ್ತೆಯ ಬಳಿ ಮಾನವ ಸರಪಳಿ ನಡೆಸಿ ಬೃಹತ್ ಪ್ರತಿಭಟನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಶಹಬಾದ್ ತಾಲೂಕಿನ ಮುತ್ತಗಿ ಗ್ರಾಮದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿಗೆ ಅವಮಾನ ಮಾಡಿದ ದುಷ್ಕರ್ಮಿಗಳನ್ನು ಬಂಧಿಸಿ ಕಾನೂನು ಕ್ರಮಕ್ಕೆ ಆಗ್ರಹಿಸಿ ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ಸೇವಾ ಸಂಘದ ದಕ್ಷಿಣ ಮತಕ್ಷೇತ್ರದ ತಾಲೂಕಾ ಅಧ್ಯಕ್ಷ ವೀರಭದ್ರಪ್ಪ ನಾಟೀಕಾರ ನೇತೃತ್ವದಲ್ಲಿ ಶಹಾಬಾದ್ ರಸ್ತೆಯ ಬಳಿ ಮಾನವ ಸರಪಳಿ ನಡೆಸಿ ಬೃಹತ್ ಪ್ರತಿಭಟಿಸಲಾಯಿತು.

ವೀರಭದ್ರಪ್ಪ ನಾಟೀಕಾರ ಮಾತನಾಡಿ ಈ ದೇಶದ 12ನೇ ಶತಮಾನದ ಸಮತಾವಾದಿ, ಮಾನವತಾವಾದಿ, ಸ್ವೀವಾದಿ, ಕ್ರಾಂತಿಕಾರಿ ವಚನಕಾರ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರ ಮೂರ್ತಿಗೆ ಶಾಹಬಾದ ತಾಲೂಕಿನ ಮುತ್ತಗಾ ಗ್ರಾಮದಲ್ಲಿ ದಿನಾಂಕ: 08-10-2025ರಂದು ಅವಮಾನ ಮಾಡಲಾಗಿದೆ. ಈ ದೇಶದಲ್ಲಿ ತಮ್ಮ ವಚನಗಳ ಮೂಲಕ ಕ್ರಾಂತಿಕಾರಿ ಬದಲಾವಣೆ ಮಾಡಿದ ಇಂಥಹ ಮಹಾಪುರುಷರ ವಿಚಾರಗಳು ಮೈಗೂಡಿಸುವ ನಿಟ್ಟಿನಲ್ಲಿ ನಾವುಗಳು ಯೋಚಿಸಬೇಕು. ಅವರು ಈ ದೇಶದ ಆಸ್ತಿ ಅವರನ್ನು ಅವಮಾನಿಸಿದರೆ ಇಡಿ ದೇಶಕ್ಕೆ ಅವಮಾನಿಸಿದಂತೆ ಆಗುತ್ತೆ. ಹಾಗಾಗಿ ಇದೊಂದು ಹೇಯ ಕೃತ್ಯವಾಗಿದೆ ಈ ಕೃತ್ಯ ನಡೆಸಿದ ಕಿಡಿಗೇಡಿಗಳನ್ನು ಕೂಡಲೇ ಪತ್ತೆಹಚ್ಚಿ ಬಂದಿಸಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಆ ಪುತ್ಥಳಿಯ ದುರಸ್ತಿ ಕಾರ್ಯ ಕೈಗೊಳ್ಳಬೇಕು ಮತ್ತು ಇಂತಹ ಅನುಹಾಪುರುಷರ ಪುತ್ಥಳಿಗಳಿಗೆ ಅವಮಾನ ಮಾಡುವ ಕೆಲಸಗಳು ಹೆಚ್ಚಾಗುತ್ತಿವೆ ಹಾಗಾಗಿ ಕೂಡಲೇ ಸರ್ಕಾರ ಎಲ್ಲಾ ಪುತ್ಥಳಿಗಳ ಹತ್ತಿರಾ ಸಿಸಿಟಿವಿಗಳು ಕೂಡಿಸಬೇಕು ಹಾಗೂ ದಿನಾಲು ರಾತ್ರಿ ಪೊಲೀಸ್ ಗಸ್ತು ಹಾಕಬೇಕು. ಎಂದು ಹೇಳಿದರು.

ಈ ಸಂದರ್ಭದಲ್ಲಿ ಗುಂಡಪ್ಪ ಎಂ. ಭಂಕೂರ, ದಶರಥ ತೆಗನೂರ, ರಾಕೇಶ ಜಮಾದಾರ, ಮದನ ಯಾಗಾಪೂರ, ವಿಜಯಕುಮಾರ ನಾಟಿಕರ, ಗಣಪತಿ ಮಾಣಿಕ, ರಾಮಲಿಂಗಗೌಡ ಸಾಹೇಬಗೌಡ, ರಾಜು ಧರ್ಮಾಪೂರ, ವಿಶ್ವ-ರಾಧ್ಯ ಲಿಂಗಪ್ಪ ತಳವಾರ, ಬೆಳ್ಳೆಪ್ಪ ಇಂಗನಕಲ್, ಪ್ರೇಮ ಕೋಲಿ, ಜಗನ್ನಾಥ ಹತ್ತಿ, ಪಿತಂಬರ ಕೋಲಿ, ಬಸಣ್ಣ ನಿಂಬರ್ಗಿ, ಮಲ್ಲಿಕಾರ್ಜುನ ಈರಣ್ಣ, ಸುಧಾಕರ ಶಂಕರ, ನಾಗರಾಜ ಕೋಲಿ, ಹಣಮಂತ ನಾಯಕೋಡಿ ಸೇರಿದಂತೆ ಇತರರು ಇದ್ದರು.

# ಈಶಾನ್ಯ ಶಿಕ್ಷಕರ ಮತದಾರರ ಪಟ್ಟಿ ಪರಿಷ್ಕರಣೆ: ಕಲಬುರಗಿ ಜಿಲ್ಲೆಯಲ್ಲಿ ಕಳೆದ ಬಾರಿಗಿಂತ ಮತದಾರರ ನೋಂದಣಿ ಹೆಚ್ಚಾಗಬೇಕು-ಜಹೀರಾ ನಸೀಮ್

ಮಲ್ಲಮ್ಮ ನುಡಿ ವಾರ್ತೆ




ಕಲಬುರಗಿ,ಅ.17-ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿ ಪರಿಷ್ಕರಣೆ ನಡೆಯುತ್ತಿದ್ದು, ವಿಭಾಗದ ಕೇಂದ್ರ ಸ್ಥಾನವಾಗಿರುವ ಕಲಬುರಗಿ ಜಿಲ್ಲೆಯಲ್ಲಿ ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ಶಿಕ್ಷಕ ಮತದಾರರು ನೊಂದಣಿಯಾಗುವಂತೆ ಅಧಿಕಾರಿಗಳು ಹೆಚ್ಚು ಮುತುವರ್ಜಿ ವಹಿಸಬೇಕು ಎಂದು ಕ್ಷೇತ್ರದ ಮತದಾರರ ನೋಂದಣಾಧಿಕಾರಿಯಾಗಿರುವ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್ ಸೂಚಿಸಿದರು.

ಶುಕ್ರವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಪ್ರಗತಿ ಪರಿಶೀಲನೆ ನಡೆಸಿದ ಅವರು, ಕಳೆದ ಬಾರಿ ಜಿಲ್ಲೆಯಲ್ಲಿ 41 ಮತದಾನ ಕೇಂದ್ರ ಸ್ಥಾಪಿಸಿದ್ದು, 9,529 ಮತದಾರರು ನೊಂದಣಿ ಮಾಡಿಕೊಂಡಿದ್ದರು. ಈ ಬಾರಿ ಮತದಾರರ ಸಂಖ್ಯೆ ಹೆಚ್ಚಾಗಬೇಕು ಎಂದರು.

ಕಲಬುರಗಿ ನಗರದಲ್ಲಿಯೇ ಶೇ.75ರಷ್ಟು ಜಿಲ್ಲೆಯ ಮತದಾರರಿರುವುದರಿಂದ ಮಹಾನಗರ ಪಾಲಿಕೆ ಆಯುಕ್ತರು ಮತ್ತು ಸಹಾಯಕ ಆಯುಕ್ತರು ಸ್ಥಳೀಯರು ಹೆಚ್ಚು ನೋಂದಣಿಯಾಗುವಂತೆ ನೋಡಿಕೊಳ್ಳಬೇಕು. ದಿನದಿಂದ ದಿನಕ್ಕೆ ಶಾಲಾ-ಕಾಲೇಜುಗಳ ಸಂಖ್ಯೆ ಹೆಚ್ಚಿದರಿಂದ ಮತದಾರರ ಸಂಖ್ಯೆ ಸಹ ಹೆಚ್ಚಾಗಬೇಕಲ್ವೆ ಎಂದ ಅವರು, ವಿಶೇಷವಾಗಿ ಶಾಲಾ-ಕಾಲೇಜಿಗೆ ಹೋಗಿ ಅಕ್ಟೋಬರ್ 27 ಮತ್ತು 30 ಹಾಗೂ ನವೆಂಬರ್ 3ರಂದು ಮಿಂಚಿನ ನೋಂದಣಿ ಅಭಿಯಾನ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕೇವಲ ಪ್ರೌಢ ಶಾಲೆ, ಪಿ.ಯು. ಕಾಲೇಜು, ಪದವಿ ಕಾಲೇಜು ಕೇಂದ್ರಿಕರಿಸದೆ ಡಿ.ಪಿ.ಎ.ಆರ್ ಇಲಾಖೆ ಅಧಿಸೂಚಿಸಿರುವ 12 ವಿಭಾಗದಲ್ಲಿನ ವಿವಿಧ ಶಾಲೆ-ಕಾಲೇಜುಗಳನ್ನು ಸಂಪರ್ಕಿಸಿ ಶಿಕ್ಷಕರಿಂದ ಅರ್ಜಿ ಭರ್ತಿ ಮಾಡಿಸಿಕೊಳ್ಳಬೇಕು. ನರ್ಸಿಂಗ್ ಕಾಲೇಜು, ಇಂಜಿನೀಯರಿಂಗ್, ಮೆಡಿಕಲ್ ಕಾಲೇಜು ಸಹ ಹೆಚ್ಚಾಗಿರುವುದರಿಂದ ಈ ಕಡೆಯೂ ಸಹ ಗಮನ ಹರಿಸಬೇಕು ಎಂದ ಅವರು, ಇನ್ನು ಸ್ವೀಕೃತ ಅರ್ಜಿಗಳನ್ನು ಕಾಲಮಿತಿಯಲ್ಲಿ ವಿಲೇವಾರಿ ಮಾಡಬೇಕಿರುವುದರಿಂದ ನೋಂದಣಿಗೆ ಕೊನೆ ದಿನವಾದ ನವೆಂಬರ್ 6ರ ವರೆಗೆ ಕಾಯದೆ ಕೂಡಲೆ ಕಾರ್ಯಪ್ರವೃತ್ತರಾಗಬೇಕು ಎಂದರು.

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮಾತನಾಡಿ, ಜಿಲ್ಲೆಯಾದ್ಯಂತ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ 875 ಪ್ರೌಢ ಶಾಲೆ ಮತ್ತು 268 ಪದವಿ ಪೂರ್ವ ಕಾಲೇಜು ಹಾಗೂ ಸರ್ಕಾರಿ ಮತ್ತು ಅನುದಾನಿತ 32 ಪದವಿ ಕಾಲೇಜುಗಲಿದ್ದು, ಡಿ.ಡಿ.ಪಿ.ಐ, ಡಿ.ಡಿ.ಪಿ.ಯು ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ಈ ಸಂಸ್ಥೆಗಳಲ್ಲಿ ಮತದಾರರ ನೋಂದಣಿಗೆ ಹೆಚ್ಚಿನ ಜವಾಬ್ದಾರಿ ಹೊರಬೇಕು. ತಹಶೀಲ್ದಾರರು, ತಾಲೂಕಾ ಪಂಚಾಯತ್ ಇ.ಓ ಹಾಗೂ ಬಿ.ಇ.ಓ ಶಾಲಾ-ಕಾಲೇಜಿಗೆ ಭೇಟಿ ನೀಡಿ ನೋಂದಣಿ ಕಾರ್ಯ ಚುರುಕಾಗುವಂತೆ ನೋಡಿಕೊಳ್ಳಬೇಕು. ನರ್ಸಿಂಗ್, ಮೆಡಿಕಲ್ ಕಾಲೇಜಿಗೆ ಪಿ.ಡಿ.ಓ ಗಳನ್ನು ನೋಡಲ್ ಅಧಿಕಾರಿಯನ್ನಾಗಿಸಿ ನೇಮಿಸಿ ನೋಂದಣಿಯಾಗುವಂತೆ ನೋಡಿಕೊಳ್ಳಬೇಕು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸಹಾಯಕ ಆಯುಕ್ತರಾದ ಸಾಹಿತ್ಯ, ಪ್ರಭುರೆಡ್ಡಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ಡಿ.ಡಿ.ಪಿ.ಯ ಸೂರ್ಯಕಾಂತ ಮದಾನೆ, ಡಿ.ಡಿ.ಪಿ.ಯು ಸುರೇಶ ಅಕ್ಕಣ್ಣ, ಕಾಲೇಜು ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕ ರಾಜೇಂದ್ರ ಶಿಂಧೆ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮುನಾವರ ದೌಲಾ ಸೇರಿದಂತೆ ತಾಲೂಕಿನ ತಹಶೀಲ್ದಾರರು, ತಾಲೂಕಾ ಪಂಚಾಯತ್ ಇ.ಓ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಿದ್ದರು.

## 'ಹೊಯ್ಸಳ' ಹಾಗೂ 'ಕೆಳದಿ ಚೆನ್ನಮ್ಮ' ಶೌರ್ಯ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ


ಕಲಬುರಗಿ,ಅ.17-ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಮಕ್ಕಳ ದಿನಾಚರಣೆ-2025ರ ಪ್ರಯುಕ್ತ ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯ ಪ್ರಜ್ಞೆಯಿಂದ ಇತರರ ಪ್ರಾಣದ ರಕ್ಷಣೆಗಾಗಿ ಧೈರ್ಯ ಸಾಹಸ ಪ್ರದರ್ಶಿಸಿದ 6 ರಿಂದ 18 ವರ್ಷದೊಳಗಿನ ಬಾಲಕರಿಗೆ "ಹೊಯ್ಸಳ" ಮತ್ತು ಬಾಲಕಿಯರಿಗೆ "ಕೆಳದಿ ಚೆನ್ನಮ್ಮ" ಶೌರ್ಯ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತಿದ್ದು, ಇದಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಪ್ರಕರಣವು 01-08-2024 ರಿಂದ 31-07-2025ರ ವರೆಗೆ ನಡೆದಿರಬೇಕು. ದಿನಾಂಕ:01-08-2007ರಂದು ಹಾಗೂ ನಂತರದ ಜನಿಸಿದ ಮಕ್ಕಳು ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ತಲಾ 10,000 ರೂ.ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿರುತ್ತವೆ.

ಇದೇ ಸಂದರ್ಭದಲ್ಲಿ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 05 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ ತಲಾ 25,000 ರೂ. ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಸಂಸ್ಥೆಗಳಿಗೆ ತಲಾ 1,00,000 ರೂ. ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುತ್ತದೆ.

ಈ ಹಿಂದೆ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿತ್ತು. ಆದರೆ ಈವರೆಗೆ ಯಾವುದೇ ಅರ್ಜಿಗಳು ಸ್ವೀಕೃತಗೊಂಡಿರುವುದಿಲ್ಲ. ಮತ್ತೊಮ್ಮೆ ಅರ್ಜಿ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಮಕ್ಕಳು/ವ್ಯಕ್ತಿಗಳು ಪ್ರಶಸ್ತಿಗಾಗಿ ನಿಗದಿಪಡಿಸಿರುವ ಅರ್ಜಿ ನಮೂನೆಯನ್ನು ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಯಿಂದ ಪಡೆದು (ಕನ್ನಡ ಭಾಷೆಯಲ್ಲಿ) 2025ರ ಅಕ್ಟೋಬರ್ 23ರ ಸಂಜೆ 5 ಗಂಟೆಯೊಳಗಾಗಿ ಅವಶ್ಯಕ ದಾಖಲಾತಿಗಳೊಂದಿಗೆ ಭರ್ತಿ ಮಾಡಿ ದ್ವಿಪ್ರತಿಯನ್ನು ಸದರಿ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

## ಸೈದಾಪುರ: ಭಗವಾನ ಮಹಾವೀರ ಶಾಲೆಯ ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಸೈದಾಪುರ:ಅ.17: ಪಟ್ಟಣದ ಶ್ರೀ ಭಗವಾನ ಮಹಾವೀರ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ವಿದ್ಯಾರ್ಥಿಗಳು 2025-26ನೇ ಸಾಲಿನ ಜಿಲ್ಲಾ ಮಟ್ಟದ ಕ್ರೀಡಾಕೂಟದ ವೈಯಕ್ತಿಕ ಕ್ರೀಡೆಗಳಲ್ಲಿ ಭಾಗವಹಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿಭಾಗದಲ್ಲಿ ಪ್ರಶಾಂತ, ಉದ್ದ ಜಿಗಿತ ಪ್ರಥಮ, ಪ್ರೇಮಾ.ಎನ್ 800ಮೀ ಓಟ, 3 ಕಿ.ಮೀ ನಡಿಗೆ ಪ್ರಥಮ, ಗಣೇಶ ಹ್ಯಾಮರ ಥ್ರೋ-ಪ್ರಥಮ, ಸುನೀಲ್ ಹ್ಯಾಮರ ಥ್ರೋ ದ್ವಿತೀಯಾ, ನಂದಿನಿ ಹ್ಯಾಮರ್ ಥ್ರೋ-ಪ್ರಥಮ, ಶಾಹೀದ್ 100ಮೀ ಓಟ ಪ್ರಥಮ, ಮನೋಜ 100 ಮೀ ಓಟ ದ್ವಿತೀಯ, ಅರುಣಕುಮಾರ 400ಮೀ ಓಟ ದ್ವಿತೀಯ, ದೀಪಕಕುಮಾರ 800 ಮೀ-ಪ್ರಥಮ, ಸಲೀಂ 800ಮೀ-ದ್ವೀತಿಯ, ಅಜಯ 400ಮೀ ಪ್ರಥಮ, ಯಶ್‌ರಾಜ 400ಮೀ-ದ್ವಿತೀಯ, ಬಾಲರಾಜ 100ಮೀ,600ಮೀ-ಪ್ರಥಮ, ರೀಕ್ಷೀತಾ ಹ್ಯಾಮರ ಥ್ರೋ- ದ್ವಿತೀಯ, ಪರಶುರಾಮ ಎತ್ತರ ಜಿಗಿತ 200ಮೀ, ಉದ್ದ ಜಿಗಿತ-ದ್ವಿತೀಯ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಹಾಗೂ ವಿದ್ಯಾರ್ಥಿಗಳ ಈ ಉನ್ನತ ಸಾಧನೆಗೆ ಕಾರಣಿಭೂತರಾದ ದೈಹಿಕ ಶಿಕ್ಷಕರ ವೃಂದಕ್ಕೆ, ಅಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು, ಪ್ರಾಂಶುಪಾಲರು, ಹಾಗೂ ಸಹ ಶಿಕ್ಷಕರು ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದರು.

## ಅಕ್ಟೋಬರ್ 18 ರಂದು ಗ್ರಾಹಕರ ಸಂಪರ್ಕ ಸಭೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಅ.17-ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತದಿಂದ ಕಲಬುರಗಿ ಎಲ್ಲಾ ಜೆಸ್ಕಾಂ ನಗರ ಉಪ ವಿಭಾಗಗಳ ವ್ಯಾಪ್ತಿಗೆ ಬರುವ ಗ್ರಾಹಕರಿಗಾಗಿ ಇದೇ ಅಕ್ಟೋಬರ್ 18 ರಂದು ಗ್ರಾಹಕರ ಸಂಪರ್ಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಕಲಬುರಗಿ ಜೆಸ್ಕಾಂ ನಗರ ಉಪವಿಭಾಗ-1ಕ್ಕೆ ಸಂಬಂಧಿಸಿದಂತೆ ಅಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಕಲಬುರಗಿ ನಗರದ ಸುಪರ್ ಮಾರ್ಕೇಟಿನ ನಗರ ಉಪ ವಿಭಾಗ-1ರ ಕಾರ್ಯ ಮತ್ತು ಪಾಲನೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಚೇರಿಯಲ್ಲಿ ಹಾಗೂ ಕಲಬುರಗಿ ಜೆಸ್ಕಾಂ ನಗರ ಉಪ ವಿಭಾಗ-2ಕ್ಕೆ ಸಂಬಂಧಿಸಿದಂತೆ ಅಂದು ಮಧ್ಯಾಹ್ನ 3 ರಿಂದ ಸಂಜೆ 5.30 ಗಂಟೆಗೆ ನಗರ ಉಪ ವಿಭಾಗ-2ರ ಕಾರ್ಯ ಮತ್ತು ಪಾಲನೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಚೇರಿಯಲ್ಲಿ ಜರುಗಲಿದೆ.

ಕಲಬುರಗಿ ಜೆಸ್ಕಾಂ ನಗರ ಉಪ ವಿಭಾಗ-3ಕ್ಕೆ ಸಂಬಂಧಿಸಿದಂತೆ ಅಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ನಗರ ಉಪ ವಿಭಾಗ-3ರ ಕಾರ್ಯ ಮತ್ತು ಪಾಲನೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಚೇರಿಯಲ್ಲಿ ಹಾಗೂ ಕಲಬುರಗಿ ನಗರ ಉಪ ವಿಭಾಗ-4ಕ್ಕೆ ಸಂಬಂಧಿಸಿದಂತೆ ಅಂದು ಮಧ್ಯಾಹ್ನ 3 ರಿಂದ ಸಂಜೆ 5.30 ಗಂಟೆಯವರೆಗೆ ನಗರ ಉಪ ವಿಭಾಗ-4ರ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಚೇರಿಯಲ್ಲಿ ಜರುಗಲಿದೆ.

ಈ ಗ್ರಾಹಕರ ಸಂಪರ್ಕ ಸಭೆಯಲ್ಲಿ ಗ್ರಾಹಕರು ತಮ್ಮ ಯಾವುದೇ ತರಹದ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಸಲ್ಲಿಸಬಹುದಾಗಿದೆ.

ಮೇಲ್ಕಂಡ ದಿನದಂದು ನಡೆಯುವ ಈ ಗ್ರಾಹಕರ ಕುಂದು ಕೊರತೆ ಸಭೆಯಲ್ಲಿ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ವಿದ್ಯುತ್‌ಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ. ಎಂದು ಅವರು ತಿಳಿಸಿದ್ದಾರೆ.

## ಪ್ರಿಯಾಂಕ್ ಖರ್ಗೆ ಅವರಿಗೆ ಜೀವ ಬೆದರಿಕೆ:ಝಡ್ ಶ್ರೇಣಿಯ ಭದ್ರತೆ ಒದಗಿಸಲು ಆಗ್ರಹ

ಮಲ್ಲಮ್ಮ ನುಡಿ ವಾರ್ತೆ



ಹುಮನಾಬಾದ:ಸಾರ್ವಜನಿಕ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿರ್ಬಂಧಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಬೆದರಿಕೆ ಕರೆಗಳು ಬರುತ್ತಿವೆ. ಹೀಗಾಗಿ ಅವರಿಗೆ ಝಡ್ ಶ್ರೇಣಿಯ ಭದ್ರತೆ ಒದಗಿಸಬೇಕು ಎಂದು ಕಲಬುರ್ಗಿ ಪ್ರಿಯಾಂಕ್ ಖರ್ಗೆ ಅಭಿಮಾನಿಗಳ ಸಂಘ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಧಾಕರ್ ಭಾಸ್ಕರ್ ಅವರು ಆಗ್ರಹಿಸಿದ್ದಾರೆ. ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ನಿರ್ಬಂಧಿಸಬೇಕೆಂಬ ಸಚಿವ ಪ್ರಿಯಾಂಕ್ ಖರ್ಗೆ ಅವರ ಪ್ರಸ್ತಾಪದ ಬಳಿಕ ಅವರಿಗೆ ಬರುತ್ತಿರುವ ಜೀವ ಬೆದರಿಕೆ ನಿರಂತರವಾಗಿ ಕರೆಗಳ ಕುರಿತು ಸ್ವತಃ ಸಚಿವರೇ ಆಡಿಯೋ ಸಾಕ್ಷಿ ಬಹಿರಂಗಪಡಿಸಿದ್ದಾರೆ. ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ಅವ್ಯಾಚ ಶಬ್ದಗಳು ಹಾಗೂ ನಿಂದನೆಗಳು ಕುರಿತು ಅಸವದಾನಿಕ ಪದಗಳು ಕುರಿತು ತೀವ್ರವಾಗಿ ಸುಧಾಕರ ಭಾಸ್ಕರ್ ಖಂಡಿಸಿದ್ದಾರೆ. ಆ ಆರ್‌ಎಸ್‌ಎಸ್ ಕಾರ್ಯಕರ್ತನಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಒತ್ತಾಯಿಸಿದ್ದಾರೆ.

# ಜಿಲ್ಲಾ ಮಟ್ಟದ ಯುವಜನೋತ್ಸವ ಹಾಗೂ ವಿಜ್ಞಾನ ಮೇಳ ಪ್ರದರ್ಶನ

## ಕಾರ್ಯಕ್ರಮ ಆಯೋಜನೆ: ಹೆಸರು ನೋಂದಣಿಗೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಅ.16-2025-26ನೇ ಸಾಲಿನ ಕಲಬುರಗಿ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಇದೇ ಅಕ್ಟೋಬರ್ 28 ರಂದು ಬೆಳಿಗ್ಗೆ 9.30 ಗಂಟೆಗೆ ಕಲಬುರಗಿ ಹೊಸ ಆರ್.ಟಿ.ಓ. ಕಚೇರಿ ಹತ್ತಿರದ ಸರ್ಕಾರಿ ಮಹಾವಿದ್ಯಾಲಯ(ಸ್ವಾಯತ್ತ) ದಲ್ಲಿ ಹಾಗೂ ಇದೇ ಅಕ್ಟೋಬರ್ 29 ರಂದು ವಿಜ್ಞಾನ ಮೇಳ ಪ್ರದರ್ಶನ ಕಾರ್ಯಕ್ರಮವನ್ನು ಕಲಬುರಗಿ ಜಿಲ್ಲಾ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿದೆ ಎಂದು ಕಲಬುರಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ. ಸಾಂಸ್ಕೃತಿಕ ಸ್ಪರ್ಧೆಗಳ ವಿವರ ಇಂತಿದೆ: ಜಾನಪದ ನೃತ್ಯ (ತಂಡ), ಜಾನಪದ ಗೀತೆ (ತಂಡ) ಪ್ರಾದೇಶಿಕ ಭಾಷೆಯಲ್ಲಿ, ಕಥೆ ಬರೆಯುವುದು (Story Writing) ವೈಯಕ್ತಿಕ) (1000 ಪದಗಳಿಗೆ ಮೀರದಂತೆ) ಹಿಂದಿ/ಆಂಗ್ಲ/ಪ್ರಾದೇಶಿಕ ಭಾಷೆಯಲ್ಲಿ ಹಾಗೂ ಚಿತ್ರಕಲೆ (Painting) A3 Size i.e (ವೈಯಕ್ತಿಕ) 11.7"x16.5", Declamation (ಘೋಷಣೆ) ಹಿಂದಿ ಮತ್ತು ಆಂಗ್ಲ ಭಾಷೆಯಲ್ಲಿ ಇರಬೇಕು ಮತ್ತು ಸ್ಪರ್ಧೆಗಳು ಸಿದ್ದಪಡಿಸಿಕೊಂಡಿರುವ ವಿಷಯಗಳ ಬಗ್ಗೆ 7 ನಿಮಿಷಗಳ ಭಾಷಣ ಮಾಡಬೇಕು. ಕವಿತೆ ಬರೆಯುವುದು (ಕಆಜಣಡಿಥಿ) (ವೈಯಕ್ತಿಕ) ಹಿಂದಿ/ ಆಂಗ್ಲ/ ಪ್ರಾದೇಶಿಕ ಭಾಷೆಯಲ್ಲಿ ಹಾಗೂ ವಿಜ್ಞಾನ ಮೇಳ ಪ್ರದರ್ಶನ: (Exhibition of Science Mela) ರಾಜ್ಯ ಮಟ್ಟದವರೆಗೆ ಮಾತ್ರ ಆಯೋಜಿಸಲಾಗುತ್ತದೆ.

ಈ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಸ್ಪರ್ಧಾಳುಗಳು 2025ರ ಅಕ್ಟೋಬರ್ 24ರೊಳಗಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ವಯೋಮಿತಿ 15 ರಿಂದ 29 ವರ್ಷದೊಳಗಿನವರಿಗೆ ಯುವಕ/ಯುವತಿಯರು ವಯಸ್ಸಿನ ದೃಢೀಕರಣಕ್ಕಾಗಿ ಆಧಾರ ಕಾರ್ಡ್ ಅಥವಾ ಜನ್ಮ ದಿನಾಂಕ ಇರುವ ಸರ್ಕಾರಿ ಪ್ರಮಾಣ ಪತ್ರವನ್ನು ಹಾಗೂ ಸ್ವಯಂ ಬ್ಯಾಂಕ್ ಖಾತೆಯ ಝರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಕಲಬುರಗಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಶಾಲಾ-ಕಾಲೇಜು ವಿದ್ಯಾರ್ಥಿಗಳು/ವಿದ್ಯಾರ್ಥಿನಿಯರು ಹಾಗೂ ಸಂಘ-ಸಂಸ್ಥೆಗಳು, ಯುವಕ/ಯುವತಿ ಮಂಡಳಿಗಳು ಇನ್ನಿತರೆ ಸಂಸ್ಥೆಗಳು ಹಾಗೂ ಸ್ಪರ್ಧಾಳುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಅವರು ತಿಳಿಸಿದ್ದಾರೆ.

ಈ ಮೇಲ್ಕಂಡ ಸ್ಪರ್ಧೆಗಳಲ್ಲಿ ಭಾಗವಹಿಸುವರ ಸಂಖ್ಯೆ, ಸ್ಪರ್ಧೆಯ ಸಮಯ ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯನ್ನು ಕಚೇರಿ ಸಮಯದಲ್ಲಿ ಹಾಗೂ ಮೊಬೈಲ್ ಸಂಖ್ಯೆ 9844029235, 7795188841 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

# ಆರ್ಥಿಕ ಸಾಕ್ಷರತಾ ಕಾರ್ಯಕ್ರಮ



**ಮಲ್ಲಮ್ಮ ನುಡಿ ವಾರ್ತೆ**

ರಾಯಚೂರು:ಅ.17:'ಮೈಕ್ರೋ ಫೈನಾನ್ಸ್ ಇಂಡಸ್ಟ್ರಿ ನೆಟ್‌ವರ್ಕ್ (ಒಈಖಓ)(ಇದು – ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಮಾನ್ಯತೆಪಡೆದಒಃಈಅಮೈಕ್ರೋಫೈನಾನ್ಸ್ ಸಂಸ್ಥೆಗಳ, ರಾಷ್ಟ್ರೀಯ ಮಟ್ಟದ 'ಸ್ವಯಂ ನಿಯಂತ್ರಣ ಸಂಸ್ಥೆ') ವತಿಯಿಂದರಾಯಚೂರುಜಿಲ್ಲೆಂ ಯಲ್ಲಿಮೈಕ್ರೋ ಫೈನಾನ್ಸ್ ಜಾಗೃತಿ ಕಾರ್ಯಕ್ರಮದಅಡಿಯಲ್ಲಿ'ಆರ್ಥಿಕಸಾಕ್ಷರತಾ ಕಾರ್ಯಕ್ರಮ'ಆಯೋಜಿಸಲಾಗಿತ್ತು. ಆರ್ಥಿಕ ವಿಷಯಗಳ ಬಗ್ಗೆ ಜನರಿಗೆ ಉತ್ತಮ ತಿಳುವಳಿಕೆಯನ್ನು ನೀಡುವುದುಹಾಗೂಔಪಚಾರಿಕ ಹಣಕಾಸು ಸಂಸ್ಥೆಗಳ ಬಗ್ಗೆ ಸಾರ್ವಜನಿಕರ ತಿಳುವಳಿಕೆಯನ್ನುವೃದ್ಧಿಸುವುದುಈಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದ್ದುಈಕೆಳಗಿನಅಂಶಗಳನ್ನು ಒಳಗೊಂಡಿತ್ತು:

•ಕರ್ನಾಟಕ ಸೂಕ್ಷ್ಮ ಸಾಲ ಮತ್ತು ಸಣ್ಣಸಾಲ (ಬಲವಂತದ ಕ್ರಮಗಳ ತಡೆಗಟ್ಟುವಿಕೆ) ಸುಗ್ರೀವಾಜ್ಞೆ,2025, ಅನ್ವಯಿಸುವಿಕೆಮತ್ತುನಿಬಂಧನೆಗಳು.

• ವಿವಿಧ ರೀತಿಯ ಹಣಕಾಸು ಸಂಸ್ಥೆಗಳು – ಅಂದರೆ, ಆರ್‌ಬಿಐ ನಿಯಂತ್ರಿತ ಘಟಕಗಳು, ರಾಜ್ಯ ನೋಂದಾಯಿತಹಣಕಾಸುಸಂಸ್ಥೆಗಳು, ಎಲ್ಲಿಯೂನೋಂದಾಯಿಸದಹಣಕಾಸು ಸಂಸ್ಥೆಗಳ ಬಗ್ಗೆತಿಳುವಳಿಕೆಮತ್ತು ಔಪಚಾರಿಕಹಣಕಾಸುಸಂಸ್ಥೆಗಳಿಂದ ಸಾಲ ಪಡೆಯುವುದರಿಂದದೊರೆಕಬಹುದಾದ ಪ್ರಯೋಜನಗಳು.

• ಮೈಕ್ರೋಫೈನಾನ್ಸ್ – ಗುಣಲಕ್ಷಣಗಳು, ಉದ್ದೇಶಹಾಗೂ ಖಃಖನಿಂದಸಾಲಗಳನ್ನುಪಡೆಯುವ ಮತ್ತುಮರುಪಾವತಿಸುವಪ್ರಕ್ರಿಯೆಗೆ ಸಂಬಂಧಿಸಿದಂತೆ ನೀಡಿರುವ ಮಾರ್ಗಸೂಚಿಗಳು.

•ಉಳಿತಾಯಮತ್ತುಹೂಡಿಕೆಗಳು: ಉಳಿತಾಯ ಯೋಜನೆಗಳು ಮತ್ತು ಹೂಡಿಕೆ ಆಯ್ಕೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದು.

• ಸಾಲಗಳು: ಸಾಲಗಳನ್ನು ತೆಗೆದುಕೊಳ್ಳುವಮತ್ತುಮರುಪಾವತಿ ಮಾಡುವ ಬಗ್ಗೆ ಮಾರ್ಗದರ್ಶನ ನೀಡುವುದು.

•ಆಯವ್ಯಯ(ಬಜೆಟ್)ಮಾಡುವುದು: ಬಜೆಟ್ ಮಾಡುವುದು ಮತ್ತು ಖರ್ಚುಗಳನ್ನುನಿಯಂತ್ರಿಸುವುದು ಹೇಗೆ ಎಂದು ಕಲಿಸುವುದು.

•ವಿಮೆ: ವಿವಿಧ ರೀತಿಯ ವಿಮಾ ಯೋಜನೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲು.

•ವಂಚನೆತಡೆಗಟ್ಟುವಿಕೆ:ಹಣಕಾಸಿನ ವಂಚನೆಗಳನ್ನುತಪ್ಪಿಸಲುಅಗತ್ಯವಾದ ಮುನ್ನೆಚ್ಚರಿಕೆಗಳ ಬಗ್ಗೆ ಶಿಕ್ಷಣವನ್ನು ಒದಗಿಸುವುದು.

•ಅಡಮಾನಪಡೆಯುವಹಾಗುಪಡೆಯದಸಾಲಗಳುಮತ್ತುಮೈಕ್ರೋ ಫೈನಾನ್ಸ್‌ಗೆತಪ್ಪಾಗಿ ಅರ್ಥೈಸುವ – ತಳುಕುಹಾಕುವಸಾಲಗಳು

•ಮೂರುಹಂತದಗ್ರಾಹಕಕುಂದು– ಕೊರತೆ ಪರಿಹಾರ ಕಾರ್ಯವಿಧಾನ – ಸಾಲ ನೀಡುವ ಸಂಸ್ಥೆ, ಒಈಖಓ ಮತ್ತು ಖಃಖಹಂತದಲ್ಲಿ

ಈ ಕಾರ್ಯಕ್ರಮದಲ್ಲಿಶ್ರೀಮಂಜುನಾಥಎಮ್ ಎಸ್ಸಹಾಯಕ ಉಪಾಧ್ಯಕ್ಷರುಮೈಕ್ರೋಫೈನಾನ್ಸ್ ಇಂಡಸ್ಟ್ರಿನೆಟ್ವರ್ಕನವರುಪ್ರತಿಯೊಬ್ಬ ವ್ಯಕ್ತಿಯಜೀವನದಲ್ಲಿಆರ್ಥಿಕಸಾಕ್ಷರತೆ–ಯ ಮಹತ್ವವನ್ನು ಒತ್ತಿ ಹೇಳಿದರು ಮತ್ತು ಒಈಖಓ ಸದಸ್ಯರಾಗಿರುವ ಎಲ್ಲಾಮೈಕ್ರೋಫೈನಾನ್ಸ್‌ಕಂಪನಿಗಳು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ನಿಯಂತ್ರಿಸಲ್ಪಡುತ್ತವೆ ಎಂಬುದನ್ನು ಸ್ಪಷ್ಟಪಡಿಸಿದರು. ಕರ್ನಾಟಕ ಕಿರು (ಮೈಕ್ರೋ) ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ಅಧ್ಯಾದೇಶ2025 ಅನಿಯಂತ್ರಿತ ಘಟಕಗಳ ಕಾರ್ಯಾಚರಣೆಗಳನ್ನು ನಿಯಂತ್ರಿಸುವ ಉದ್ದೇಶವನ್ನು ಹೊಂದಿದೆಮತ್ತುಈಸುಗ್ರೀವಾಜ್ಞೆಯು ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ನೋಂದಾಯಿಸಲಾದ ಬ್ಯಾಂಕ್‌ಗಳು, ಸಣ್ಣ ಹಣಕಾಸು ಬ್ಯಾಂಕುಗಳು, ಬ್ಯಾಂಕೇತರ ಹಣಕಾಸು ಕಂಪನಿ ಮೈಕ್ರೋಫೈನಾನ್ಸ್ ಸಂಸ್ಥೆಗಳು (ಓಃಈಅ–ಒಈಖ) ಮತ್ತು ಓಃಈಅ ಗಳಿಗೆ ಅನ್ವಯಿಸುವುದಿಲ್ಲಎಂಬುದನ್ನುತಿಳಿಸಿದರು.ಹಣಕಾಸು ಪದ್ಧತಿಗಳ ಕುರಿತು ಗ್ರಾಮಸ್ಥರಿಗೆ ಅಮೂಲ್ಯವಾದಸಲಹೆಯನ್ನುನೀಡುತ್ತಾ, ಸಾಲಗಾರರು ಮರುಪಾವತಿಯಲ್ಲಿ ತೊಂದರೆಗಳನ್ನುಎದುರಿಸುತ್ತಿದ್ದರೆ ಅಥವಾ ಸೇವೆಗಳಿಗೆಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳನ್ನು ಹೊಂದಿದ್ದರೆ ಮತ್ತು ನಿಯಂತ್ರಿತ ಸಂಸ್ಥೆಯು ಒದಗಿಸಿದ ಪರಿಹಾರವು ತೃಪ್ತಿಕರವಾಗಿಲ್ಲದಿದ್ದರೆ,ಸಾಲಗಾರರು ಒಈಖಓ ನ ಗ್ರಾಹಕರ ಕುಂದು–ಕೊರತೆ ಪರಿಹಾರ ಕಾರ್ಯವಿಧಾನ ಅಥವಾ ಜಿಲ್ಲಾಡಳಿತ ಅಥವಾ ಖಃಖ ಸಹಾಯವಾಣಿಯನ್ನು ಸಂಪರ್ಕಿಸಬಹುದು ಎಂದು ಹೇಳಿದರು.

ರಾಯಚೂರುಸೈಬರ್‌ಕ್ರೈಮ್ ವಿಭಾಗದಆರಕ್ಷಕಸಹಾಯಕಉಪನಿರೀಕ್ಷಕರಾದಶ್ರೀವೆಂಕಟಗಿರಿಯವರು ಒಈಖಓ ಸಂಸ್ಥೆಯ ಈ ಕಾರ್ಯಾಗಾರವನ್ನುಶ್ಲಾಘಿಸಿಇಂಥಹಾಕಾರ್ಯಕ್ರಮಗಳಿಂದಾಗಿಮಹಿಳಾ ಸಾಲಗಾರರು ಸಾಲಗಳನ್ನು ಪಡೆಯುವಾಗ ತಿಳುವಳಿಕೆಯುಳ್ಳನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಅವರು ಹಣಕಾಸು, ಜೀವನೋಪಾಯ, ಕುಟುಂಬ ಮತ್ತು ಸಾಮಾಜಿಕ ಭದ್ರತಾ ಅಂಶಗಳ ಕುರಿತುಉತ್ತಮ ಮಾರ್ಗಗಳನ್ನುಅನ್ವೇಷಿಸುತ್ತಾರೆಎಂದರು. ಇತ್ತೀಚಿನದಿನಗಳಲ್ಲಿಇಂಟರ್ನೆಟ್ ಹಾಗುಸೈಬರ್ ಅಪರಾಧಗಳುಹೆಚ್ಚುತ್ತಿರುವುದರಕುರಿತುಸಂಪೂರ್ಣ ಮಾಹಿತಿನೀಡಿ ಅಂತಹ ವಂಚನೆಗಳಿಂದತಮ್ಮನ್ನುರಕ್ಷಿಸಿಕೊಳ್ಳಲುಜನಸಾಮಾನ್ಯರುಅನುಸರಿಸಬೇಕಾದಕ್ರಮಗಳನ್ನುಮನದಟ್ಟುಮಾಡಿಕೊಟ್ಟರು. ಮುಂದುವರೆದುಸಾಲಗಾರರು ಮತ್ತು ಸಂಸ್ಥೆಗಳುಒಬ್ಬರಿಗೊಬ್ಬರುಸಹಕಾರಿಯಾಗಿನಿಯಮಾನುಸಾರಕಾರ್ಯನಿರ್ವಹಿಸುವ ಹಾಗೂ ಸಮಯಕ್ಕೆಸರಿಯಾಗಿಸಾಲಮರುಪಾವತಿಮಾಡುವಅಗತ್ಯತೆ, ವಿವಿಧಸಹಾಯವಾಣಿಸಂಖ್ಯೆಗಳಾದ 112,1098,1090ಕುರಿತುತಿಳುವಳಿಕೆನೀಡಿಸಾರ್ವಜನಿಕರಸೇವೆಗೆಪೊಲೀಸ್ ಸದಾಸಿದ್ಧ ಎಂದುಹೇಳಿದರು. ಕ್ರೆಡಿಟ್ ಆಕ್ಸಸ್ ಗ್ರಾಮೀಣ್ ಲಿಮಿಟೆಡ್ ಸಂಸ್ಥೆಯವಿಭಾಗೀಯಮುಖ್ಯಸ್ಥರಾದಶ್ರೀಶಿವಲಿಂಗಯ್ಯನವರುಮಾತನಾಡಿಮೈಕ್ರೋಫೈನಾನ್ಸ್ ನಿಂದಮಹಿಳೆಯರಿಗಾಗುತ್ತಿರುವಉಪಯೋಗಗಳನ್ನುವಿವರಿಸಿದರು. ಮುಂದುವರಿದುಮಹಿಳೆಯರುಸಾಲವನ್ನುಅವಶ್ಯಕತೆಯಿದ್ದರೆಮಾತ್ರಪಡೆಯಬೇಕು ಹಾಗೂ ಮೈಕ್ರೋಫೈನಾನ್ಸ್ ಸಾಲಗಳನ್ನುಆದಾಯೋತ್ಪನ್ನಚಟುವಟಿಕೆಗಳಿಗೆಬಳಸಿಜೀವನಮಟ್ಟವನ್ನುಸುಧಾರಿಸಿಕೊಳ್ಳಬೇಕು ಎಂದು ಕಿವಿಮಾತುಹೇಳಿದರು,ಮುಂದುವರೆದುಹಣಕಾಸಿನಶಿಸ್ತಿನಅಗತ್ಯತೆ ತಿಳಿಸಿಪಡೆದಸಾಲವನ್ನುಸರಿಯಾದಸಮಯಕ್ಕೆಮರುಪಾವತಿಸುವುದು ಮತ್ತುಅವಶ್ಯಕತೆಯಿದ್ದಾಗ ಖಃಖ ನಿಯಂತ್ರಿತಸಂಸ್ಥೆಗಳಿಂದ ಸಾಲಪಡೆಯುವುದುಸೂಕ್ತ ಎಂದು ಅಭಿಪ್ರಾಯವ್ಯಕ್ತಪಡಿಸಿದರು.

ಶ್ರೀಶರಣಪ್ಪಚಿಂಚೋಳಿಪ್ರಾದೇಶಿಕ ವ್ಯವಸ್ಥಾಪಕರುಕ್ರೆಡಿಟ್ ಅಕ್ಸಸ್‌ಗ್ರಾಮೀಣ್ ಲಿಮಿಟೆಡ್ ಸಂಸ್ಥೆ ಇವರುಮಾತನಾಡಿ, ಈಆರ್ಥಿಕಸಾಕ್ಷರತಾ ಕಾರ್ಯಕ್ರಮವು ಸಮಾಜದ ಕೆಳಸ್ತರದಲ್ಲಿ ವಾಸಿಸುವ ಮತ್ತುದೂರದಪ್ರದೇಶಗಳಲ್ಲಿವಾಸಿಸುವ ಜನರನ್ನು ಆರ್ಥಿಕ ಸೇವೆಗಳೊಂದಿಗೆ ಸಂಪರ್ಕಿಸುವ ಪ್ರಯತ್ನವಾಗಿದೆ ಮತ್ತು ಹಣಕಾಸಿನ ವಹಿವಾಟುಗಳು, ಹೂಡಿಕೆಗಳು, ವಿಮೆ ಕುರಿತಾಗಿಮತ್ತು ವಂಚನೆಗಳನ್ನು ತಪ್ಪಿಸುವ ಬಗ್ಗೆ ಅರಿವು ಮೂಡಿಸುತ್ತದೆಎಂದರು. ಪಿರಮಾಳ್ ಫೈನಾನ್ಸ್,ಬಿಎಫ್‌ಐಎಲ್, ಐಡಿಎಫ್ಸಿ, ಎನ್ ಒ ಸಿಪಿಎಲ್, ಇನ್ನಿತರೆಮೈಕ್ರೋಫೈನಾನ್ಸ್‌ಸಂಸ್ಥೆಗಳ ಅಧಿಕಾರಿಗಳುಹಾಗುಇತರಗಣ್ಯರು ಈ ಕಾರ್ಯಕ್ರಮದಲ್ಲಿಉಪಸ್ಥಿತರಿದ್ದು ಆರ್ಥಿಕ ಸಾಕ್ಷರತೆಯ ಮಹತ್ವವನ್ನು ಒತ್ತಿಹೇಳಲುವಿವಿಧಚಟುವಟಿಕೆಗಳನ್ನು ಸಹ ಆಯೋಜಿಸಲಾಗಿತ್ತು.

ಪ್ರಸ್ತುತಮೈಕ್ರೋಫೈನಾನ್ಸ್ಕುರಿತಾಗಿತಪ್ಪುಮಾಹಿತಿನೀಡಿಗ್ರಾಹಕರುಸಾಲಮರುಪಾವತಿಮಾಡಲುವಿಳಂಬಮಾಡುತ್ತಿರುವವಿಷಯಗಳಕುರಿತಾಗಿಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲ ಅಧಿಕಾರಿಗಳು ಸಾರ್ವಜನಿಕರನ್ನು ಎಚ್ಚರಿಸಿದರು. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಡಿಸೆಂಬರ್ 11, 2023 ರ ಪತ್ರಿಕಾ ಪ್ರಕಟಣೆಆಧರಿಸಿ "ಸಾಲ ಮನ್ನಾ ಕುರಿತು ಅನಧಿಕೃತ ಪ್ರಚಾರಗಳ ವಿರುದ್ಧ ಆರ್‌ಬಿಐ ಎಚ್ಚರಿಕೆನೀಡುತ್ತದೆ ಎಂದು ಸ್ಪಷ್ಟವಾಗಿ ತಿಳಿಸಲಾಯಿತು."ಸಾರ್ವಜನಿಕರು ಇಂತಹ ಸುಳ್ಳು ಮತ್ತು ದಾರಿತಪ್ಪಿಸುವ ಪ್ರಚಾರಗಳಿಗೆ ಬಲಿಯಾಗದಂತೆ ಮತ್ತು ಅಂತಹ ಘಟನೆಗಳನ್ನು ಪೊಲೀಸ್ ಆಡಳಿತಕ್ಕೆ ವರದಿ ಮಾಡಲು ಎಚ್ಚರಿಸಿ ಇಂತಹ ದಾರಿ ತಪ್ಪಿಸುವ ಅಪಪ್ರಚಾರ ಮಾಡುವ ಜನ ಮತ್ತು ಸಂಘಟನೆಗಳಿಂದ ನಿಮ್ಮ ಭವಿಷ್ಯ ಹಾಳು ಮಾಡಿಕೊಳ್ಳಬೇಡಿಎಂದುಕಿವಿಮಾತುಹೇಳಿದರು. ಈಕಾರ್ಯಕ್ರಮವನ್ನುಕ್ರೆಡಿಟ್ ಆಕ್ಸಸ್ ಗ್ರಾಮೀಣ್ ಲಿಮಿಟೆಡ್ ಸಂಸ್ಥೆಯುಪ್ರಾಯೋಜಿಸಿದ್ದುಜಿಲ್ಲೆಯಲ್ಲಿಕಾರ್ಯನಿರ್ವಹಿಸುತ್ತಿರುವ ಖಃಖ ನೊಂದಾಯಿತಎಲ್ಲಾಮೈಕ್ರೋಫೈನಾನ್ಸಂಸ್ಥೆಗಳೂತಮ್ಮನ್ನುಈ ಕಾರ್ಯಕ್ರಮದಲ್ಲಿತೊಡಗಿಸಿಕೊಂಡಿದ್ದರು.

## ತುರ್ತು ಪರಿಸ್ಥಿತಿಯಲ್ಲಿ ವ್ಯಕ್ತಿಯ ಆರೋಗ್ಯ ಸುರಕ್ಷತೆಗೆ ಮನೋಸ್ಥೈರ್ಯ ಅಗತ್ಯ: ನ್ಯಾ.ಹೆಚ್ ಎ. ಸಾತ್ವೀಕ್ ಸಲಹೆ



**ಮಲ್ಲಮ್ಮ ನುಡಿ ವಾರ್ತೆ**

ರಾಯಚೂರು ಅಕ್ಟೋಬರ್ 17: ಮಾನವೀಯ ತುರ್ತು ಪರಿಸ್ಥಿತಿಗಳಲ್ಲಿ ಪ್ರತಿಯೊಬ್ಬರ ಮಾನಸಿಕ ಆರೋಗ್ಯ ಕಾಪಾಡುವ ಹೊಣೆಗಾರಿಕೆ ಎಲ್ಲರದಾಗಿದ್ದು, ಈ ದಿಶೆಯಲ್ಲಿ ಅಕಾಲಿಕವಾಗಿ ಎದುರಾಗುವ ನೈಸರ್ಗಿಕ ವಿಪತ್ತು, ಮಾನವೀಯ ಸಂಕಷ್ಟಗಳು, ಸಾರ್ವಜನಿಕ ಆರೋಗ್ಯ ತುರ್ತು ಸನ್ನಿವೇಶಗಳಲ್ಲಿ ಬೆಂಬಲ ಆರೈಕೆಯನ್ನು ನಾವೆಲ್ಲರೂ ನೀಡೋಣ ಎಂದು ಗೌರವಾನ್ವಿತ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹನುಮಂತ ಎ ಸಾತ್ವಿಕ್ ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ, ರೀಮ್ಸ್ ಸಂಯೋಗದೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಅಕ್ಟೋಬರ್ 17ರಂದು ನಡೆದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ವರ್ಷಗಳಲ್ಲಿ ನೈಸರ್ಗಿಕ ವಿಪತ್ತುಗಳು, ಯುದ್ಧ, ಸಂಘರ್ಷಗಳು ಹಾಗೂ ಎಲ್ಲಡೆ ವ್ಯಾಪಕವಾಗಿ ಕಂಡುಬರುವ ಸಾಂಕ್ರಾಮಿಕ ರೋಗಗಳ ಸನ್ನಿವೇಶಗಳಲ್ಲಿ ಮಾನಸಿಕ ಸ್ಥೈರ್ಯ ನೀಡುವ ಕೆಲಸ ಮಾಡುವ ಹೊಣೆಗಾರಿಕೆ ಎಲ್ಲರದ್ದಾಗಿದೆ. ನಾವು ನಿರ್ಲಕ್ಷಿಸುವ ವಿಷಯಗಳಲ್ಲಿ ಮಾನಸಿಕ ಆರೋಗ್ಯವು ಒಂದಾಗಿದ್ದು, ಇವತ್ತು ಕಾನೂನಿನ ಮೂಲಕ ಅಂತಹ ವ್ಯಕ್ತಿಗಳಿಗೆ ಬೆಂಬಲ ನೀಡುವ ಕಾರ್ಯ ಮಾಡಲಾಗುತ್ತಿದ್ದು ಇದರ ಸದುಪಯೋಗ ಪಡೆಯಲು ಹೆಚ್ಚಿನ ಜಾಗೃತಿ ನೀಡಲು ಅವರು ಸಲಹೆ ಮಾಡಿದರು.

ಜಿಲ್ಲಾ ಮಾನಸಿಕ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ನಂದಿತಾ ಎಮ್ ಎನ್ ಅವರು ಪ್ರಾಸ್ತಾವಿಕ ಮಾತನಾಡಿ, ಜಿಲ್ಲೆಯಾದ್ಯಂತ ಮಾನಸಿಕ ಆರೋಗ್ಯ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಪ್ರಾಥಾಮಿಕ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿಯೇ ಮಾನಸಿಕ ಆರೋಗ್ಯ ಸೇವೆಗಳನ್ನು ಒದಗಿಸುತ್ತಿದ್ದೇವೆ. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಇದನ್ನು ನಿಯಮಿತ ನಡೆಸುತ್ತಿದ್ದೇವೆ. ಮನೋಚೈತನ್ಯ ಕಾರ್ಯಕ್ರಮ ಮೂಲಕ ತಾಲೂಕಾ ಮಟ್ಟದ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಆಪ್ತಸಮಾಲೋಚನೆ, ಸಲಹೆ, ಚಿಕಿತ್ಸೆ ನೀಡುವ ಜೊತೆಗೆ ತುರ್ತು ಪರಿಸ್ಥಿತಿಗಳಿಗೆ ತಕ್ಕಂತೆ ತುರ್ತು ಮಾನಸಿಕ ಆರೈಕೆ ಯೋಜನೆಯ ಕುರಿತು ಶಾಲಾ–ಕಾಲೇಜುಗಳಲ್ಲಿ ಜೀವನ ಕೌಶಲ್ಯ ಶಿಕ್ಷಣ, ಒತ್ತಡ ನಿರ್ವಹಣಾ ತರಬೇತಿ ನೀಡಲಾಗುತ್ತಿದೆ. ಜೊತೆಗೆ ಪತ್ರಿಕಾ, ವಿದ್ಯುನ್ಮಾನ ಮಾಧ್ಯಮಗಳ ಮೂಲಕವು ಮಾಹಿತಿಯನ್ನು ಹಂಚಿಕೊಂಡು ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಮನೋರೋಗ ತಜ್ಞರಾದ ಡಾ.ಮನೋಹರ ಪತ್ತಾರ ಉಪನ್ಯಾಸ ನೀಡಿದರು. ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ್ ಅಧ್ಯಕ್ಷತೆ ವಹಿಸಿದ್ದರು. ರೀಮ್ಸ್ ಪ್ರಭಾರಿ ಡೀನ್ ಡಾ.ಅರವಿಂದ್ ಸಂಗಾವಿ, ಜಿಲ್ಲಾ ರೋಗವಾಹಕ ಆಶ್ರೀತರೋಗಗಳ ನಿಯಂತ್ರಣಾಧಿಕಾರಿ ಡಾ.ಚಂದ್ರಶೇಖರಯ್ಯ ಸ್ವಾಮಿ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ಶಿವಕುಮಾರ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಮಹಮ್ಮದ್ ಶಾಕೀರ್, ಸೇರಿದಂತೆ ತಾಲೂಕು ಅರೋಗ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿಗಳು, ಆಡಳಿತ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ ಸ್ವಾಗತಿಸಿ ವಂದಿಸಿದರು.

## ಆಸಕ್ತಿಯಿಂದ ವಿದ್ಯಾಭ್ಯಾಸ ಮಾಡಿದಲ್ಲಿ ಯಶಸ್ಸು ಕಟ್ಟಿಟ್ಟಬುತ್ತಿ – ಬಿರಾದಾರ




**ಮಲ್ಲಮ್ಮ ನುಡಿ ವಾರ್ತೆ**

ಭಾಲ್ಕಿ: ವಿದ್ಯಾರ್ಥಿಗಳು ಆಸಕ್ತಿಯಿಂದ ವಿದ್ಯಾಭ್ಯಾಸ ಮಾಡಿದಲ್ಲಿ, ವಿದ್ಯಾರ್ಥಿ ಜೀವನದಲ್ಲಿ ಯಶಸ್ಸು ಕಟ್ಟಿಟ್ಟ ಬುತ್ತಿಯಾಗಿದೆ ಎಂದು ಸರ್ಕಾರಿ ಪ.ಪೂ ಕಾಲೇಜಿನ ಪ್ರಾಂಶುಪಾಲ ಸುಖದೇವ ಬಿರಾದಾರ ಅಭಿಪ್ರಾಯಪಟ್ಟರು.

ಪಟ್ಟಣದ ಕೆ.ಎಸ್.ಪಿ ಶಿಕ್ಷಣ ಸಂಸ್ಥೆಯ ಛತ್ರಪತಿ ಶಿವಾಜಿ ಮಹಾವಿದ್ಯಾಲಯದಲ್ಲಿ ಗುರುವಾರ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಮತ್ತು ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿಗಳ ಸತ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಪದವಿಯಲ್ಲಿ ಎಲ್ಲಾ ವಿಶಯಗಳು ಸಮಾನಾದ ಮಹತ್ವ ಪಡೆದಿವೆ. ಯಾವುದೇ ವಿಷಯದಲ್ಲಿ ವಿದ್ಯಾಭ್ಯಾಸ ಮಾಡಿದರೂ, ಆಸಕ್ತಿಯಿಂದ ಮಾಡಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಆಸಕ್ತಿಯಿಂದ ವಿದ್ಯಾಭ್ಯಾಸ ಮಾಡಿದಲ್ಲಿ ಮಾತ್ರ ಯಶಸ್ಸು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಛತ್ರಪತಿ ಶಿವಾಜಿ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ.ನೀಲಕಂಠ ಕಾಳೆ, ವಿದ್ಯಾರ್ಥಿಗಳು ಜೀವನದಲ್ಲಿ ಮಹತ್ತರವಾದ ಸಾಧನೆ ಮಾಡಬೇಕು. ಅದಕ್ಕಾಗಿ ಸದಾ ಪ್ರಯತ್ನಶೀಲರಾಗಿರಬೇಕು. ಸತತ ಪ್ರಯತ್ನವೇ ಯಶಸ್ಸಿನ ಗುಟ್ಟು. ಹೀಗಾಗಿ ವಿದ್ಯಾರ್ಥಿಗಳು ಪ್ರಯತ್ನಶೀಲರಾಗಿ ವಿದ್ಯಾಭ್ಯಾಸ ಮಾಡಿ ಉತ್ತಮ ಸಾಧಕರಾಗಬೇಕು ಎಂದು ಹೇಳಿದರು.

ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಜಯರಾಜ ದಾಬಶೆಟ್ಟಿ ಮಾತನಾಡಿ, ಕಾಲೇಜಿನ ವಿದ್ಯಾರ್ಥಿಗಳಲ್ಲಿ ಆಲಿಸುವಿಕೆಯ ಕೊರತೆಯಾಗಿದೆ. ಉಪನ್ಯಾಸಕರ ಪಾಠಗಳನ್ನು ಮನಸ್ಸಿಟ್ಟು ಆಲಿಸಬೇಕು, ಅಂದಾಗ ಮಾತ್ರ ಉತ್ತಮ ಅಂಕ ಗಳಿಸಲು ಸಾಧ್ಯ ಎಂದು ಹೇಳಿದರು.

ಉಪನ್ಯಾಸಕ ಬಾಲಾಜಿ ತಾಡಮಲ್ಲೆ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿನಿಯರಾದ ಪದ್ಮಶ್ರೀ ಸೋಮನಾಥ ಮತ್ತು ಸ್ವೇತಾ ಚಂದ್ರಕಾಂತ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ| ಮೀನಾಕ್ಷಿ ಕಾಳೆ, ಪಿ.ಯು.ಕಾಲೇಜಿನ ಪ್ರಾಚಾರ್ಯ ಡಿ.ಜಿ.ಬಿರಾದಾರ, ನಿವೃತ್ತ ಪ್ರಾಚಾರ್ಯ ಶಾಮರಾವ ಕಾದೆಪೂರೆ, ಪ್ರೊ|ಅಶೋಕ ಭಂಡಾರಿ ಉಪಸ್ಥಿತರಿದ್ದರು. ಐಶ್ವರ್ಯ ಸ್ವಾಗತಗೀತೆ ಹಾಡಿದರು. ಬಾಲಾಜಿ ಸ್ವಾಗತಿಸಿದರು. ಭಂಡಾರಿ ನಿರೂಪಿಸಿದರು. ಕಾದೆಪೂರೆ ವಂದಿಸಿದರು.

ಸತ್ಕಾರ: ಇದೇವೇಳೆ 90%ಕ್ಕಿಂತ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಾದ ಪದ್ಮಶ್ರೀ ಸೋಮನಾಥ, ಶ್ರೀದೇವಿ ಪುಂಡಲಿಕ, ಮಾಲಾಶ್ರೀ ಬಾಲಾಜಿ, ದೀಪಿಕಾ ಸಂಜೀವಕುಮಾರ, ಸ್ವಾತಿ ಕಿಶನರಾವ, ಮಾಹೇಶ್ವರಿ ಶಿವಾಜಿ, ರಾಧಾ ಪಾಟೀಲ, ಲಕ್ಷ್ಮೀ ಗಜಾನಂದ, ಐಶ್ವರ್ಯ ಸಂಜೀವಕುಮಾರ, ಸ್ವೇತಾ ಚಂದ್ರಕಾಂತ, ವಿಕಾಸ ಮಾಧವ ರವರಿಗೆ ಸನ್ಮಾನಿಸಿ ಗೌರವಿಸಲಾಯಿತು.

## ಟಿಪ್ಪು ಸುಲ್ತಾನ್ ಸಂಘದಿಂದ ಸನ್ಮಾನ



**ಮಲ್ಲಮ್ಮ ನುಡಿ ವಾರ್ತೆ**

ಲಿಂಗಸೂಗೂರು:ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ ಅವರಿಗೆ ಟಿಪ್ಪು ಸುಲ್ತಾನ್ ಸಂಘದಿಂದ ಸನ್ಮಾನಿಸಲಾಯಿತು

ಈ ಸಂದರ್ಭದಲ್ಲಿ ಸಂಘದ ತಾಲೂಕು ಅಧ್ಯಕ್ಷ ಅಲ್ಲಾಭಕ್ಷ ಮನಿಯರ ನೇತೃತ್ವದಲ್ಲಿ ವಿಧಾನ ಪರಿಷತ ಸದಸ್ಯರಾದ ಸಲೀಮ್ ಅಹಮ್ಮದ್ ಅವರಿಗೆ ಆತ್ಮೀಯವಾಗಿ ಸನ್ಮಾನಿಸಲಾಯಿತು

ಶಾಹಿದ್ ಹವಾಲ್ದಾರ್, ಫಜಲ್, ಮನಿಯಾರ ವಾಸೀಮ್, ರಿಯಾಜ್, ಆಶಿಕ್ ಸೇರಿದಂತೆ ಹಲವು ಟಿಪ್ಪು ಸುಲ್ತಾನ್ ಸಂಘದ ಯುವ ಸದಸ್ಯರು ಉಪಸ್ಥಿತರಿದ್ದರು.

## ಜಿಲ್ಲಾ ಪಂಚಾಯತ್ ಆಡಳಿತ ಭವನದಲ್ಲಿ ಜಿಪಂ ಸಿಇಓ ಸಂಚಾರ: ಅಧಿಕಾರಿ, ಸಿಬ್ಬಂದಿ ಕಾರ್ಯವೈಖರಿ ಪರಿಶೀಲನೆ



**ಮಲ್ಲಮ್ಮ ನುಡಿ ವಾರ್ತೆ**

ರಾಯಚೂರು ಅಕ್ಟೋಬರ್ 17–ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕಾಂದೂ ಅವರು ಕಾರ್ಯದೊತ್ತಡದ ಮಧ್ಯೆಯೂ ಅಕ್ಟೋಬರ್ 17ರಂದು ಜಿಲ್ಲಾ ಪಂಚಾಯತನ ಆಡಳಿತ ಭವನದಲ್ಲಿನ ವಿವಿಧೆಡೆ ಸಂಚರಿಸಿ ಅಧಿಕಾರಿ ಮತ್ತು ಸಿಬ್ಬಂದಿಯ ಕಾರ್ಯ ನಿರ್ವಹಣೆಯ ಬಗ್ಗೆ ಪರಿಶೀಲಿಸಿದರು.

ಜಿಲ್ಲಾಪಂಚಾಯತನಕಚೇರಿಯಲ್ಲಿರುವ ಸ್ಟೋರ್ ರೂಂ, ಆಡಳಿತ ಶಾಖೆ, ಲೆಕ್ಕಪತ್ರ ಶಾಖೆ, ಲೆಕ್ಕ ಶಾಖೆ, ಎನ್.ಆರ್.ಎಲ್.ಎಂ., ಸ್ವಚ್ಛಭಾರತ ಮೀಷನ್ ಯೋಜನೆಯ ಕಚೇರಿ ಸೇರಿದಂತೆ ವಿವಿಧೆಡೆ ಖುದ್ದು ತೆರಳಿ ಅಲ್ಲಿನ ಅಧಿಕಾರಿ ಮತ್ತು ಸಿಬ್ಬಂದಿಯ ಜೊತೆಗೆ ಮಾತನಾಡಿ ಅವರ ಕಾರ್ಯವೈಖರಿಯ ಬಗ್ಗೆ ಪರಿಶೀಲಿಸಿದರು. ಶಿಸ್ತನ್ನು ಕಾಯ್ದುಕೊಳ್ಳಲು ಸಲಹೆ ಮಾಡಿದರು.

ಕಚೇರಿಯಲ್ಲಿ, ಯಾವುದೇ ಕಡತಗಳು ಎಲ್ಲೆಂದರಲ್ಲಿ ಕಾಣಬಾರದು. ಅವುಗಳನ್ನು ಅನುಕ್ರಮವಾಗಿ ಜೋಡಿಸಿಡಬೇಕು. ಅವಶ್ಯಕ ಸಂದರ್ಭದಲ್ಲಿ ಯಾವುದೇ ಕಡತವು ತಕ್ಷಣ ಕೈಗೆ ಸಿಗುವ ಹಾಗೆ ಕಡತಗಳನ್ನು ಆದ್ಯತೆನುಸಾರ ಜೋಡಣೆ ಮಾಡಿ ಪ್ರತಿನಿತ್ಯ ಕಾರ್ಯನಿರ್ವಹಿಸಬೇಕು. ಕಡತಗಳ ರಕ್ಷಣೆಗೆ ಹೆಚ್ಚಿನ ಒತ್ತು ಕೊಡಬೇಕು ಎಂದು ಸಲಹೆ ಮಾಡಿದರು.

ಯಾವುದೇ ಕಚೇರಿಯಲ್ಲಿ ಆವಕ ಜಾವಕ ವಹಿಗಳ ನಿರ್ವಹಣೆ ಅತ್ಯಗತ್ಯವಾಗಿದೆ. ಈ ಬಗ್ಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ಗಮನ ಹರಿಸಬೇಕು. ಯಾವುದೇ ಶಾಖೆಯಲ್ಲಿ ಪತ್ರಗಳನ್ನು, ಕಡತಗಳನ್ನು ಎಲ್ಲೆಂದರಲ್ಲಿ ಹರಡಬಾರದು. ಕಡತಗಳ ರಕ್ಷಣೆ ಮತ್ತು ನಿರ್ವಹಣೆಯಲ್ಲಿ ಯಾರಾದರು ಲೋಪ ಎಸಗುವುದು ಕಂಡುಬಂದಲ್ಲಿ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಇದೆ ವೇಳೆ ಸಿಇಓ ಅವರು ಶಿಶುಪಾಲನಾ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಮಕ್ಕಳ ಯೋಗಕ್ಷೇಮ ಮತ್ತು ಸೌಕರ್ಯಗಳ ಬಗ್ಗೆ ಪರಿಶೀಲಿಸಿದರು.

ಈ ವೇಳೆ ಜಿಲ್ಲಾ ಪಂಚಾಯತನ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ, ಮುಖ್ಯ ಯೋಜನಾಧಿಕಾರಿ ಡಾ.ಟಿ ರೋಣಿ, ಗ್ರಾ.ಕು.ನೀ ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ಸೇರಿದಂತೆ ವಿವಿಧ ಯೋಜನೆಯ ಅಧಿಕಾರಿ ಸಿಬ್ಬಂದಿ ಹಾಜರಿದ್ದರು.

## ಮಾಲೂರಿನಲ್ಲಿ ರಸ್ತೆತಡೆ



**ಮಲ್ಲಮ್ಮ ನುಡಿ ವಾರ್ತೆ**

ಮಾಲೂರು,ಅ.17–ಮಾಲೂರು ದೆಹಲಿಯ ಮುಖ್ಯನ್ಯಾಯಮೂರ್ತಿ ಗವಾಯಿ ಅವರಿಗೆ ತುಂಬಿದ ಕೋರ್ಟ್ ಹಾಲ್‌ನಲ್ಲಿ ಶೂ ಎಸೆದ ವಕೀಲನನ್ನು ಬಂಧಿಸಿ ಕಾನೂನು ಕ್ರಮ ವಹಿಸುವಂತೆ ಜಿಲ್ಲೆಯಾದ್ಯಂತ ದಲಿತಪರ ಪ್ರಗತಿಪರ ಸಂಘಟನೆಗಳು ನೀಡಿದ್ದ ಕೋಲಾರ ಜಿಲ್ಲಾ ಬಂಧ್ ಪಟ್ಟಣದ ದಲಿತ ಪರ ಪ್ರಗತಿಪರ ಸಂಘಟನೆಗಳು ಮುಖ್ಯರಸ್ತೆಯಲ್ಲಿ ವಾಹನಗಳನ್ನು ಸ್ಥಗಿತಗೊಳಿಸಿ ಕೆಂಪೇಗೌಡ ವೃತ್ತ ಮಾರಿಕಾಂಬ ರುತ್ತ ರೈಲ್ವೆ ನಿಲ್ದಾಣದ ವೃತ್ತದಲ್ಲಿ ರಸ್ತೆ ತಡೆ ನಡೆಸಿದರು.

ಬಂದುನಿಂದ ನಗರದ ಬಸ್ ನಿಲ್ದಾಣದಲ್ಲಿ ಬಸ್ ಗಳ ಸಂಖ್ಯೆ ವಿರಳವಾಗಿತ್ತು ಬೆಳಗ್ಗೆ ಇತರ ಕಡೆ ಪ್ರಯಾಣಿಸುವ ಪ್ರಯಾಣಿಕರು ವಿದ್ಯಾರ್ಥಿಗಳಿಗೆ ಬಸ್ಸುಗಳಿಲ್ಲದೆ ಪರದಾಡುವಂತಾಗಿತ್ತು ಕೆಲವು ವರ್ತಕರು ಸ್ವಯಂ ಪ್ರೇರಿತರಾಗಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಬಂದಿಗೆ ಬೆಂಬಲ ವ್ಯಕ್ತಪಡಿಸಿದ್ದರು.

## ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ : ಪೂರ್ವಭಾವಿ ಸಿದ್ಧತಾ ಸಭೆ

**ಮಲ್ಲಮ್ಮ ನುಡಿ ವಾರ್ತೆ**

ರಾಯಚೂರು ಅಕ್ಟೋಬರ್ 17: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಿತ್ತೂರು ರಾಣಿ ಚೆನ್ನಮ್ಮನವರ ಜಯಂತಿಯನ್ನು ಅಕ್ಟೋಬರ್ 23ರಂದು ವಿಜೃಂಭಣೆಯಿಂದ ಆಚರಿಸಲು ಅಗತ್ಯ ಸಿದ್ಧತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಭಜಂತ್ರಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಕ್ಟೋಬರ್ 17ರ ಶುಕ್ರವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಕ್ಟೋಬರ್ 23ರಂದು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರದಲ್ಲಿ ನಡೆಯುವ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯ ವೇದಿಕೆಯ ಕಾರ್ಯಕ್ರಮಕ್ಕೆ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಅವರು ಮನವಿ ಮಾಡಿದರು. ಅಂದು ಎಲ್ಲಾ ಇಲಾಖೆಗಳ ರಾಯಚೂರು ಜಿಲ್ಲಾ ಹಾಗೂ ರಾಯಚೂರು ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯ ಹಾಜರಿರಬೇಕು ಎಂದು ತಿಳಿಸಿದರು. ಅಂದು ಬೆಳಗ್ಗೆ 9 ಗಂಟೆಗೆ ನಗರದ ಬಸವೇಶ್ವರ ವೃತ್ತದಿಂದ ನಡೆಯುವ ಮೆರವಣಿಗೆಯ ಮಾರ್ಗದಲ್ಲಿ ಶುಚಿತ್ವ ಕಾಯ್ದುಕೊಳ್ಳಬೇಕು. ನಗರದ ಪ್ರಮುಖ ವೃತ್ತಗಳಲ್ಲಿ ದೀಪಾಲಂಕಾರ ಮಾಡಬೇಕು. ಎಲ್ಲ ಸರಕಾರಿ ಕಚೇರಿಗಳಲ್ಲಿ, ಶಾಲಾ–ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು ಎಂದು ಸೂಚನೆ ನೀಡಿದರು.

ವೇದಿಕೆಯ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕ್ಕೆ ಏರ್ಪಾಡು ಮಾಡಬೇಕು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ, ಯುವಜನ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವೀರೇಶ ನಾಯಕ, ಸಮಾಜದ ಮುಖಂಡರಾದ ಚಂದ್ರಶೇಖರ ಪಾಟೀಲ ಮಿರ್ಜಾಪುರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಅ.18 ರಂದು ಲೀನ್ ಯೋಜನೆ ಮತ್ತು ಝಡ್.ಇ.ಡಿ ಹಾಗೂ ರಫ್ತು ಕುರಿತು ಒಂದು ದಿನ ಅರಿವು ಕಾರ್ಯಕ್ರಮ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಅ.17– ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರ (ವಿ.ಟಿ.ಪಿ.ಸಿ) ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ ಇವರ ಸಹಯೋಗದಲ್ಲಿ "ಎಂ.ಎಸ್.ಎಂ.ಇ ಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಮತ್ತು ವೇಗಗೊಳಿಸುವುದು" ಯೋಜನೆಯಡಿ ಲೀನ್ ಯೋಜನೆ ಮತ್ತು ಝಡ್.ಇ.ಡಿ ಹಾಗೂ ರಫ್ತು ಕುರಿತು ಒಂದು ದಿನ ಅರಿವು ಕಾರ್ಯಕ್ರಮವನ್ನು ಅ.18 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಯಶವಂತರಾಜ್ ನಾಗಿ–ರೆಡ್ಡಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕಾಸಿಯಾ ಅಧ್ಯಕ್ಷ ಗಣೇಶ ರಾವ್ ಬಿ.ಆರ್ ಅವರು ಅಧ್ಯಕ್ಷತೆ ವಹಿಸುವರು.

ಜಿಲ್ಲಾ ಹತ್ತಿ ಗಿರಣಿಗಳ ಸಂಘ ಅಧ್ಯಕ್ಷ ಡಿ.ತಿಪ್ಪಯ್ಯ, ಜಿಲ್ಲಾ ಕೈಗಾರಿಕಾ ಸಂಘದ ಅಧ್ಯಕ್ಷ ವಿ.ರಾಮಚಂದ್ರ, ಜಿಲ್ಲಾ ಕೈಗಾರಿಕಾ ಕೇಂದ್ರ ಜಂಟಿ ನಿರ್ದೇಶಕ ಸೋಮಶೇಖರ್.ಬಿ., ವಿ.ಟಿ.ಪಿ.ಸಿ. ಧಾರವಾಡ ಶಾಖಾ ಕಚೇರಿ ಉಪನಿರ್ದೇಶಕ ಮಲ್ಲಿಕಾರ್ಜುನ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಈ ಸಂದರ್ಭದಲ್ಲಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಜಿಲ್ಲಾ ಕೈಗಾರಿಕಾ ಸಂಘ, ಜಿಲ್ಲಾ ಹತ್ತಿ ಗಿರಣಿಗಳ ಸಂಘಗಳ ಪದಾಧಿಕಾರಿಗಳು, ವಿದ್ಯಾರ್ಥಿಗಳು, ಸಾರ್ವಜನಿಕರು ಜಿಲ್ಲಾ ಕೈಗಾರಿಕಾ ಕೇಂದ್ರ ಸಿಬ್ಬಂದಿ ವರ್ಗದವರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಬಳ್ಳಾರಿ ಜಿಲ್ಲೆಯಲ್ಲಿ ಸೇನಾ ನೇಮಕಾತಿ ರ್‍ಯಾಲಿ; ಶಿಸ್ತುಬದ್ಧವಾಗಿ ಆಯೋಜಿಸಲು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ನಿರ್ದೇಶನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಅ.17–ಬರುವ ನವೆಂಬರ್ 04 ರಿಂದ 11 ರವರೆಗೆ ಜಿಲ್ಲೆಯಲ್ಲಿ ನಡೆಯಲಿರುವ ಅಗ್ನಿವೀರ್ ಸೇನಾ ನೇಮಕಾತಿ ರ್‍ಯಾಲಿಯನ್ನು ಅಚ್ಚುಕಟ್ಟಾಗಿ, ಶಿಸ್ತುಬದ್ಧವಾಗಿ ಆಯೋಜಿಸಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.



ಶುಕ್ರವಾರ, ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಅಗ್ನಿವೀರ್ ಸೇನಾ ನೇಮಕಾತಿ ರ್‍ಯಾಲಿ ಕುರಿತ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರದ ನಲ್ಲಚೇರುವು ಪ್ರದೇಶದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ ಸೇನಾ ನೇಮಕಾತಿ ರ್‍ಯಾಲಿಯಲ್ಲಿ ಯಾವುದೇ ರೀತಿಯ ಲೋಪವಾಗದಂತೆ ಎಚ್ಚರ ವಹಿಸಬೇಕು. ವಿವಿಧ ಸಮಿತಿಗಳಲ್ಲಿನ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಮೇಲ್ವಿಚಾರಣೆ ಮಾಡಬೇಕು. ತಮಗೆ ವಹಿಸಿದ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ತಿಳಿಸಿದರು. ಸೇನಾ ನೇಮಕಾತಿಗೆ ಸಂಬಂಧಿಸಿದಂತೆ ಇದೊಂದು ವಿಶೇಷ ರ್‍ಯಾಲಿಯಾಗಿದೆ. ಜಿಲ್ಲೆಯಲ್ಲಿ ನಡೆಯುತ್ತಿರುವುದು ವಿಶೇಷವಾಗಿದೆ. ನಮ್ಮ ಜಿಲ್ಲೆಯ ವಿದ್ಯಾರ್ಥಿ, ಯುವಜನರಿಗೆ ಸ್ಫೂರ್ತಿ ಸಿಗುವ ಹಾಗೆ ರ್‍ಯಾಲಿಯು ಯಶಸ್ವಿಯಾಗಿ ನಡೆಯಲು ಎಲ್ಲ ಇಲಾಖೆಗಳ ಸಹಕಾರ ಬೇಕಾಗಿದೆ. ಹಾಗಾಗಿ ಎಲ್ಲ ಇಲಾಖೆಗಳ ಅಧಿಕಾರಿಗಳು ಹೆಚ್ಚು ಸಮನ್ವಯದಿಂದ ಕಾರ್ಯನಿರ್ವಹಣೆ ಮಾಡಬೇಕು ಎಂದು ನಿರ್ದೇಶನ ನೀಡಿದರು. ರ್‍ಯಾಲಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವ ಸಮುದಾಯ ಭಾಗವಹಿಸುವ ನಿರೀಕ್ಷೆ ಇದ್ದು, ಸಾರ್ವಜನಿಕ ಭದ್ರತೆ, ಕಾನೂನು–ಸುವ್ಯವಸ್ಥೆ ಕಾಪಾಡಲು ಜನಸಂದಣಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಈ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನ(ಎಸ್‌ಓಪಿ) ಪಾಲನೆ ಮಾಡಬೇಕು ಎಂದು ಜಿಲ್ಲಾಧಿಕಾರಿಯವರು ಸೇನಾ ನೇಮಕಾತಿ ಅಧಿಕಾರಿಗಳಿಗೆ ಸೂಚಿಸಿದರು. ರ್‍ಯಾಲಿಯಲ್ಲಿ ಮುಖ್ಯವಾಗಿ ವಸತಿ ಊಟೋಪಚಾರ ಸೇರಿದಂತೆ ಹಲವು ಮೂಲ ಸೌಕರ್ಯಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಬೇಕು. ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ಕಲ್ಪಿಸಬೇಕು ಎಂದು ಹೇಳಿದರು. ರ್‍ಯಾಲಿಯಲ್ಲಿ ವೇದಿಕೆ, ಆಸನ ವ್ಯವಸ್ಥೆ, ವಿದ್ಯುತ್ ದೀಪಗಳ ವ್ಯವಸ್ಥೆ, ಮೈದಾನದಲ್ಲಿ ಬ್ಯಾರಿಕೇಡ್ ವ್ಯವಸ್ಥೆ, ವಿದ್ಯುತ್ ದೀಪ ಮತ್ತು ಜನರೇಟರ್ ವ್ಯವಸ್ಥೆ, ಆಸನ, ಕುರ್ಚಿಗಳು, ಟೇಬಲ್‌ಗಳು, ಮೈಕ್‌ಸೆಟ್ ಮತ್ತು ಹಾಸಿಗೆ ಹಾಗೂ ತ್ಯಾಜ್ಯದ ತೊಟ್ಟಿಗಳ ವ್ಯವಸ್ಥೆ, ಬಿಎಸ್‌ಎನ್‌ಎಲ್ ಬ್ರಾಡ್‌ಬ್ಯಾಂಡ್ ಇಂಟರ್ನೆಟ್ ಜೊತೆಗೆ ವೈಫೈ ಮತ್ತು ಟೆಲಿಫೋನ್, ಎಲ್‌ಎಎನ್ ಸಂಪರ್ಕ, ಫೈಬರ್ ಕೇಬಲ್ ಜೊತೆಗೆ ಟೆಕ್ನಿಕಲ್ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸೇನಾ ನೇಮಕಾತಿ ರ್‍ಯಾಲಿಯಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಊಟ ಉಪಹಾರದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಜಿಲ್ಲಾ ಕ್ರೀಡಾಂಗಣದ ಸುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಮತ್ತು ದೈಹಿಕ ಪರೀಕ್ಷೆಯು ಶಿಸ್ತುಬದ್ಧವಾಗಿ ನಡೆಯುವಂತೆ ಈ ಕುರಿತು ಸಂಬಂಧಿಸಿದ ಸಮಿತಿ ಪಾರದರ್ಶಕವಾಗಿ ನಿರ್ವಹಣೆ ಮಾಡಬೇಕು. ರ್‍ಯಾಲಿಯ ಕುರಿತು ವ್ಯಾಪಕ ಪ್ರಚಾರ ನೀಡಬೇಕು ಎಂದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಸೇನಾ ನೇಮಕಾತಿಯ ಅಧಿಕಾರಿಗಳಾದ ಕರ್ನಲ್ ವಿವೇಕ್ ಜಮಿಂದಾರ್, ಮೇಜರ್ ಕಪಿಲ್ ಕೆ. ಸೇರಿದಂತೆ ಬಿಎಸ್‌ಎನ್‌ಎಲ್, ಅಗ್ನಿಶಾಮಕ, ಲೋಕೋಪಯೋಗಿ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ನ.02 ರಂದು ಸಹಕಾರ ಸಂಘದ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಅ.17–ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ನ.02 ರಂದು ಸಂಘದ ಕಚೇರಿಯಲ್ಲಿ ಸಾಮಾನ್ಯ ಚುನಾವಣೆ ಜರುಗಲಿದೆ ಎಂದು ಗ್ರಾಹಕರ ಸಹಕಾರ ಸಂಘ ನಿಯಮಿತ ಅಲ್ಲಿಪುರ ಹಾಗೂ ಬಳ್ಳಾರಿ ಉಪವಿಭಾಗದ ದ್ವಿ.ದ.ಸ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ರಿಟರ್ನಿಂಗ್ ಅಧಿಕಾರಿ ತಿಳಿಸಿದ್ದಾರೆ.

ಅ.18 ರಿಂದ ಬೆಳಿಗ್ಗೆ 11 ರಿಂದ ಮಧ್ಯಾಹ್ನ 03 ಗಂಟೆಯವರೆಗೆ ನಾಮಪತ್ರ ಸಲ್ಲಿಸಬಹುದು. ಅ.25 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 3 ಗಂಟೆಯೊಳಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನ.

ಅ.26 ರಂದು ಬೆಳಿಗ್ಗೆ 11 ಗಂಟೆಯಿಂದ ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಸಲ್ಲಿಸಿದ ನಾಮಪತ್ರ ಹಿಂಪಡೆಯಲು ಅ.27 ರಂದು ಮಧ್ಯಾಹ್ನ 3 ಗಂಟೆಯವರೆಗೆ ಅವಕಾಶವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಆಸಕ್ತ ಸದಸ್ಯರು ಚುನಾವಣಾಧಿಕಾರಿಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ ಕ್ರಾಂತಿ ಮಾಡಿದ ಮಹಾನ್ ಚೇತನ ಡಾ. ತೋಂಟದ ಸಿದ್ದಲಿಂಗ ಶ್ರೀ : ಕ್ಯಾ. ಮಹೇಶ ಮಾಲಗಿತ್ತಿ



ಮಲ್ಲಮ್ಮ ನುಡಿವಾರ್ತೆ

ಕುಕನೂರ: ತಾಲೂಕಿನ ಮಂಡಲಗಿರಿ ಗ್ರಾಮದ ಜಗದ್ಗುರು ತೋಂಟ–ದಾರ್ಯ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಲಿಂಗೈಕ್ಯ ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳವರ ಏಳನೇ ಪುಣ್ಯಸ್ಮರಣೆ ಹಾಗೂ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಈ ವೇಳೆಯಲ್ಲಿ ಕಂದಾಯ ಇಲಾಖೆಯ ಕೊಪ್ಪಳ ಉಪ ವಿಭಾಗಾದ ಕಂದಾಯ ಇಲಾಖೆಯ ಆಯುಕ್ತರಾದ ಕ್ಯಾ. ಮಹೇಶ್ ಮಾಲಗಿತ್ತಿ ಮಾತನಾಡುತ್ತಾ

ಬಸವಣ್ಣನವರ ತತ್ವದೊಂದಿಗೆ ಶಿಕ್ಷಣಕ್ರಾಂತಿ ಮಾಡುತ್ತ 80ರ ದಶಕದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ತಾಂತ್ರಿಕ ಶಿಕ್ಷಣ ನೀಡುವುದರೊಂದಿಗೆ ಶಿಕ್ಷಣ ಕ್ರಾಂತಿ ಮಾಡಿದ ಮಹಾನ್ ಚೇತನ ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು ಎಂದು ಹೇಳಿದರು.

ಸಾಹಿತಿ ಭೋಜರಾಜ ಸೊಪ್ಪಿಮಠ ಮಾತನಾಡುತ್ತಾ 1983 ರಲ್ಲಿಯೇ ತಾಂತ್ರಿಕ ಶಿಕ್ಷಣವನ್ನು ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿಸಿದ ಕೀರ್ತಿ ಶ್ರೀಗಳದ್ದಾಗಿದ್ದು ಇಲ್ಲಿಯ ತನಕ ಗ್ರಾಮೀಣ ಪ್ರದೇಶಗಳಲ್ಲಿ 14 ಐಟಿಐ ಕಾಲೇಜ್ ಹಾಗೂ ನಗರ ಪ್ರದೇಶದಲ್ಲಿ ಒಂದು ಐಟಿಐ ಕಾಲೇಜನ್ನು ಸ್ಥಾಪಿಸಿದ ಕೀರ್ತಿ ಅವರದ್ದಾಗಿದೆ ಎಂದು ಹೇಳಿದರು.

ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿಗಳಾದ ಎಸ್ ಎಸ್ ಪಟ್ಟಣಶೆಟ್ಟಿ ಮಾತನಾಡುತ್ತಾ ಕೊಪ್ಪಳ–ರಾಯಚೂರು ಅಖಂಡ ಜಿಲ್ಲೆಗೆ ಪ್ರಥಮ ಖಾಸಗಿ ಕೈಗಾರಿಕಾ ತರಬೇತಿ ಸ್ಥಾಪಿಸಿದ ಮಹಾನ್ ವ್ಯಕ್ತಿ ಪೂಜ್ಯರಾಗಿದ್ದು ಜಿಲ್ಲೆಯಲ್ಲಿ ಅನುಮೋದನೆಗೊಂಡ ಕೇವಲ ಎರಡು ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಮಂಡಲಗಿರಿಯ ಕೇಂದ್ರ ಸಹ ಆಗಿರುತ್ತದೆ ಹಾಗೂ ಬಾವೈಕ್ಯತಾ ವಿಷಯಕ್ಕೆ ಪ್ರಶಸ್ತಿ ಪಡೆದ ಮೊದಲಿಗರಾಗಿ ಶ್ರೀಗಳು ಕಾಣಸಿಗುತ್ತಾರೆ ಎಂದು ಹೇಳಿದರು.

ವೇಳೆಯಲ್ಲಿ ಕೊಪ್ಪಳ ಹಾಗೂ ಯಲಬುರ್ಗಾ ತಾಲೂಕಿನ 550 ಸರ್ವೆ ನಂಬರುಗಳ ದಾಖಲಾತಿಗಳಲ್ಲಿ ಜಂಪ್ ಹಾಗೂ ಡಬಲ್ ಸಮಸ್ಯೆಯ ತೊಂದರೆಯನ್ನು ನಿವಾರಿಸಿ 29 ವರ್ಷಗಳ ಜಟಿಲ ಸಮಸ್ಯೆ ಇತ್ಯರ್ಥ ಗೊಳಿಸಿದ ಕಾರಣ–ಕ್ಕಾಗಿ ವಿಬಾಗಾಧಿಕಾರಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಇದೇ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಪ್ರಸಂಗ ಮಾಡಿ ಸರ್ಕಾರಿ ಐಟಿಐ ಕಾಲೇಜು ಗಳಲ್ಲಿ ಕಿರಿಯ ತರಬೇತಿ ಅಧಿಕಾರಿಗಳನ್ನು ನೇಮಕ ಹೊಂದಿದ ರಾಜೇಶ್ ಬಳ್ಳಾರಿ, ಗವಿಸಿದ್ದಪ್ಪ ಹೂಗಾರ್ ಹಾಗೂ ರವಿಚಂದ್ರ ಉಪ್ಪಾರ್ ಅವರನ್ನು ಸಹ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ದಳಪತಿಗಳ ಸಂಘದ ರಾಜ್ಯಾಧ್ಯಕ್ಷ ಶರಣಬಸವಗೌಡ ಹೊರಪೇಟೆ, ಪ್ರಮುಖರಾದ ಲಿಂಗರಾಜಗೌಡ ಹೊರಪೇಟೆ, ಎಸ್ ಆರ್ ಹಿರೇಮಠ, ಪ್ರವೀಣ್ ಕುಮಾರ್ ಹಿರೇಮಠ, ಎಸ್ ಬಿ ಚಂಗಳಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಿಂಗಮ್ಮ ದ್ಯಾಮನಗೌಡ್ರು, ಉಪಾಧ್ಯಕ್ಷೆ ಬಸಮ್ಮ ಸಸಿಮಠ, ಅಭಿವೃದ್ಧಿ ಅಧಿಕಾರಿ ಸುರೇಶ್ ಕಾವಳೆ, ಹೆಚ್ ವೈ ಉಪ್ಪಾರ, ಗವಿಸಿದ್ದಪ್ಪ ಚೋಳಿನ, ರಫಿ ಮಂಡಲಗಿರಿ, ಪ್ರಾಚಾರ್ಯ ಚಂದ್ರಶೇಖರ ಅಂಗಡಿ ಹಾಗೂ ಸಿಬ್ಬಂದಿ ವರ್ಗ ಮತ್ತು ತರಬೇತುದಾರರು ಪಾಲ್ಗೊಂಡಿದ್ದರು.

# ಸ್ವ ಸಹಾಯ ಸಂಘಗಳ ಸದಸ್ಯರು ಉತ್ಪಾದಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸಿ : ದುಂಡಪ್ಪ ತುರಾದಿ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಸಂಜೀವಿನಿ–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ–ಓಖಐಒ ಯೋಜನಯಡಿ ದೀಪಾವಳಿ ಹಬ್ಬದ ಪ್ರಯುಕ್ತ ಸ್ವ ಸಹಾಯ ಸಂಘಗಳ ಸದಸ್ಯರು ಉತ್ಪಾದಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವ ಉದ್ದೇಶದಿಂದ ತಾಲೂಕ ಪಂಚಾಯತ ಮುಂದುಗಡೆ ದೀಪ ಸಂಜೀವಿನಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದ್ದು, ಸದರಿ ಕಾರ್ಯಕ್ರಮವನ್ನು ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸದರಿ ಕಾರ್ಯಕ್ರಮವನ್ನು ಉದ್ದೇಶಿಸಿ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಮಾತನಾಡುತ್ತಾ

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ದೀಪಾವಳಿ ಹಬ್ಬದ ಪ್ರಯುಕ್ತ ದೀಪ ಸಂಜೀವಿನಿ ಕಾರ್ಯಕ್ರಮವನ್ನು ಆಯೋಜನೆ ಮಾಡಲು ನಿರ್ದೇಶನ ಇರುವುದರಿಂದ ಗ್ರಾಮೀಣ ಪ್ರದೇಶ ಸ್ವ ಸಹಾಯ ಸಂಘಗಳ ಮಹಿಳೆಯರು ಉತ್ಪಾದನೆ ಮಾಡುವ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವ ಉದ್ದೇಶದಿಂದ ಇಂದು ದೀಪ ಸಂಜೀವಿನಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದ್ದು, ಸದರಿ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಪಂಚಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಸ್ಥಾನ ಸಮಿತಿಯ ಉಪಾಧ್ಯಕ್ಷರಾದ ಮಂಜುನಾಥ ಗೊಂಡಬಾಳ, ತಾಲೂಕ ಪಂಚಾಯತ ಲೆಕ್ಕಾಧಿಕಾರಿಗಳಾದ ರವಿಕುಮಾರ್, ತಾಲೂಕ ಪಂಚಾಯತನ ವ್ಯವಸ್ಥಾಪಕರಾದ ಬಸವರಾಜ್ ಪಾಟೀಲ್, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರಾದ ಅಂಬಣ್ಣ ಕಟಗಿ, ಜಿಲ್ಲಾ ವ್ಯವಸ್ಥಾಪಕರಾದ ಜಾಕೀರ್ ಹುಸೇನ್, ಪ್ರಥಮ ದರ್ಜೆ ಸಹಾಯಕರಾದ ಕಿರಣ್ ಕುಮಾರ್, ಗವಿಸಿದ್ದಪ್ಪ, ತಾಲೂಕ ಕಾರ್ಯಕ್ರಮ ವ್ಯವಸ್ಥಾಪಕರಾದ ಸುನಿಲ್, ವಲಯ ಮೇಲ್ವಿಚಾರಕರಾದ ವಿದ್ಯಾಲಕ್ಷ್ಮಿ, ತಾಲೂಕ ವ್ಯವಸ್ಥಾಪಕರಾದ ಕೊಟ್ರೇಶ್, ಯುವ ವೃತ್ತಿಪರರಾದ ಮಂಜುನಾಥ, ಸ್ವಸಹಾಯ ಸಂಘಗಳ ಮಹಿಳೆಯರು ಉಪಸ್ಥಿತರಿದ್ದರು.

# ಜಾತ್ರೆಗಳು ಜಾತಿಯಿಂದ ಮುಕ್ತವಾಗಲಿ–ಮುದಿಯಪ್ಪ



ಮಲ್ಲಮ್ಮ ನುಡಿವಾರ್ತೆ

ಕುಕನೂರ : ಜಾತ್ರೆಗಳು ಜಾತಿಯಿಂದ ಮುಕ್ತವಾಗಿ ಸರ್ವರನ್ನು ಪ್ರೀತಿಸುವ ಜಾತ್ರೆ ನಾವು ಮಾಡಬೇಕು ಎಂದು ತಳಕಳ ಗ್ರಾಮದ ಮುಖಂಡ ಮುದಿಯಪ್ಪ ಯೋಗೆಮ್ಮನವರ ಹೇಳಿದರು. ಅವರು ಕುಕನೂರ ತಾಲ್ಲೂಕಿನ ತಳಕಲ್ ಗ್ರಾಮದ ಮುಂಡರಗಿ ಅನ್ನದಾನೀಶ್ವರ ಶಾಖಾಮಠದಲ್ಲಿ ನಡೆದ ಶ್ರೀ ಮಠದ ಜಾತ್ರಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಮಾತನಾಡುತ್ತಾ ನಮ್ಮ ಗ್ರಾಮದ ಸದ್ಭಕ್ತರು ವಿಶೇಷವಾಗಿ ಸರ್ವರನ್ನು ಪ್ರೀತಿಸುವ ಗುಣವುಳ್ಳವರು ಇಲ್ಲಿ ಯಾವುದೇ ಜಾತಿ, ಮತ ಪಂಥವೆನ್ನದೆ ಎಲ್ಲರೂ ಒಗ್ಗೂಡಿ ಜಾತ್ರೆಗೆ ತನು ಮನ ಧನದಿಂದ ಸೇವೆ ಮಾಡಬೇಕು ಅಂದಾಗ ಮಾತ್ರ ಜಾತ್ರೆಗಳು ಯಶಸ್ವಿಯಾಗಲು ಸಾಧ್ಯ ಕೇವಲ ಒಂದು ಜಾತಿಯವರು ಮಾತ್ರ ದುಡಿದರೆ ಜಾತ್ರೆಗಳು ಯಶಸ್ವಿಯಾಗುವುದಿಲ್ಲ ಎಂದರು.

ಮುಖಂಡ ಮಲ್ಲಪ್ಪ ಬಂಗಾರಿ ಮಾತನಾಡಿ ಅನ್ನದಾನೀಶ್ವರ ಮಹಾಸ್ವಾಮಿ ಈ ಕ್ಷೇತ್ರವನ್ನ ಪಾವನ ಮಾಡಿ ನಾಡಿನದ್ದಕ್ಕೂ ಅಪಾರ ಭಕ್ತರನ್ನು ಹೊಂದಿರುವಂತಹ ಒಬ್ಬ ಮಹಾತಪಸ್ವಿ ಅಂತವರ ಜಾತ್ರೆಯನ ನಮ್ಮ ಗ್ರಾಮದಲ್ಲಿ ಆಚರಣೆ ಮಾಡಿಕೊಂಡು ಬರುತ್ತಿರುವುದನ್ನು ನಮ್ಮೆಲ್ಲರಿಗೂ ಹೆಮ್ಮೆಯಿದೆ ಎಂದರು. ನಂತರ ಸೋಮಪ್ಪ ಖರ್ಜಗಿ ಮಾತನಾಡಿ ಇದೇ ನವೆಂಬರ್ 01ರಿಂದ ಶ್ರೀ ಶರಣಬಸವೇಶ್ವರರ ಪುರಾಣ ಪ್ರಾರಂಭವಾಗಿ ನವೆಂಬರ್ 21 ರಂದು ಮಂಗಳಗೊಳ್ಳುವುದು ಅಂದು ಸಂಜೆ ಅನ್ನದಾನೀಶ್ವರ ಲಘು ರಥೋತ್ಸವ ಜರುಗಲಿದೆ, ಜಾತ್ರ ನಿಮಿತ್ಯ ಹಲವಾರು ಧಾರ್ಮಿಕ ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳಲಾಗಿದೆ ಇಂತಹ ಕಾರ್ಯಕ್ಕೆ ಯುವಕರ ಸಹಕಾರ ಅವಶ್ಯ ಎಂದರು.

ಈ ಸಂದರ್ಭದಲ್ಲಿ ಪೂಜ್ಯ ಮಹಾದೇವ ಸ್ವಾಮೀಜಿ, ಮಲ್ಲಪ್ಪ ಗೋರಿ, ಪಕ್ಕಪ್ಪ ಮುರಿಗಿ, ಶಿವಪ್ಪ ಬ್ಯಾಳಿ, ಅಬ್ಬಸಲಿ, ಕಲ್ಲಯ್ಯ ತಿರುಗುಣೇಶ, ಶರಣಪ್ಪ, ಬಸಯ್ಯ ಚಂಡೂರು, ರಾಮಣ್ಣ ನಿಟ್ಟಲಿ, ಸುರೇಶ ನಿಟ್ಟಲಿ, ಗೋಣೇಪ್ಪ ವಾಲ್ಮೀಕಿ, ಮುಡಿಯಪ್ಪ, ವೀರಪ್ಪ ಕರ್ಜಗಿ, ಬಾಳಪ್ಪ ಮುಸ್ಲಿ, ಪರಸಪ್ಪ ಅಳವಂಡಿ ಮತ್ತು ಇತರರು ಇದ್ದರು.

ಬಳ್ಳಾರಿ: ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಗತಿ ಸಭೆ ನಡೆಸಿದ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್

# ರೈತರಿಗೆ ವಿವಿಧ ಸಾಲ ಯೋಜನೆಗಳ ಮೂಲಕ ಪ್ರೋತ್ಸಾಹಿಸಲು ಸಲಹೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಅ.17–ಕೃಷಿ ಉತ್ಪನ್ನಗಳ ಸಂಸ್ಕರಣೆ, ರೈತ ಉತ್ಪಾದಕ ಸಂಸ್ಥೆಗಳಿಗೆ ವಿವಿಧ ಸಾಲ ಯೋಜನೆಗಳ ಮೂಲಕ ಪ್ರೋತ್ಸಾಹ ನೀಡಬೇಕು ಎಂದು ಕೇಂದ್ರ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಹೇಳಿದರು.

ಗುರುವಾರ ಬಳ್ಳಾರಿ ನಗರದ ಕರ್ನಾಟಕ ಗ್ರಾಮೀಣ ಬ್ಯಾಂಕಿನ ಪ್ರಧಾನ ಕಚೇರಿಯ ಪ್ರಗತಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಒಂದು ರಾಜ್ಯ–ಒಂದು ಗ್ರಾಮೀಣ ಬ್ಯಾಂಕ್ ಪ್ರಕ್ರಿಯೆಯಡಿ ಮೇ 1 ರಿಂದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಅಸ್ತಿತ್ವಕ್ಕೆ ಬಂದಿದ್ದು, ಈ ಬ್ಯಾಂಕ್ ದೇಶದ 3 ನೇ ಅತಿದೊಡ್ಡ ಗ್ರಾಮೀಣ ಬ್ಯಾಂಕ್ ಇದಾಗಿದೆ. ಪ್ರಸ್ತುತ ಬ್ಯಾಂಕ್ ಬಳ್ಳಾರಿಯಲ್ಲಿ ಪ್ರಧಾನ ಕಚೇರಿ ಹೊಂದಿದ್ದು, 1,750 ಶಾಖೆಗಳೊಂದಿಗೆ 1,04,364 ಕೋಟಿ ರೂ. ವಹಿವಾಟು ನಡೆಸುತ್ತಿದೆ ಎಂದರು.

ಆರ್ಥಿಕ ಚಟುವಟಿಕೆಗಳ ಮೂಲಕ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯನ್ನು ತೀವ್ರಗೊಳಿಸಬೇಕಾದ ಅವಶ್ಯಕತೆ ಇದ್ದು, ಗ್ರಾಮೀಣ ಬ್ಯಾಂಕ್ ಗಳು ಮಹತ್ತರವಾದ ಪಾತ್ರವಹಿಸಬೇಕು. ಗ್ರಾಮೀಣ ಬ್ಯಾಂಕುಗಳ ಪಾತ್ರವನ್ನು ಇನ್ನಷ್ಟು ಪರಿಣಾಮಕಾರಿಗೊಳಿಸಲು ಗ್ರಾಮೀಣ ಬ್ಯಾಂಕುಗಳನ್ನು ವಿಲೀನಗೊಳಿಸಿ ರಾಜ್ಯಕ್ಕೆ ಒಂದೇ ಗ್ರಾಮೀಣ ಬ್ಯಾಂಕ್ ಸ್ಥಾಪಿಸಲಾಗಿದೆ. ಈ ಕಾರಣಕ್ಕೆ ಗ್ರಾಮೀಣ ಭಾಗದ ಜನರ ಆರ್ಥಿಕ ಬೇಡಿಕೆಗೆ ಅನುಸರಿಸಿ ಸಾಲ ಯೋಜನೆಗಳನ್ನು ರೂಪಿಸಬೇಕು ಎಂದರು.

ಬ್ಯಾಂಕೇತರ ವಲಯಗಳನ್ನು ಗುರುತಿಸಿ ಹೊಸ ಶಾಖೆಗಳನ್ನು ತೆರೆಯುವ ಪ್ರಕ್ರಿಯೆಯನ್ನು ತೀವ್ರಗೊಳಿಸಬೇಕು. ಕೃಷಿ ಉನ್ನತೀಕರಣ ಮತ್ತು ಮೌಲ್ಯ ವರ್ಧನೆಗೆ ಸಂಬಂಧಿಸಿ ಸೂಕ್ತ ಸಾಲ ಯೋಜನೆ ರೂಪಿಸಬೇಕು. ಡಿಜಿಟಲೈಜೇಶನ್ ಗ್ರಾಮೀಣ ಭಾಗಕ್ಕೆ ಪರಿಣಾಮಕಾರಿಯಾಗಿ ತಲುಪಿಸಬೇಕಾದ ಕಾರ್ಯವನ್ನು ಗ್ರಾಮೀಣ ಬ್ಯಾಂಕ್ ಮುಂದಿನ ದಿನಗಳಲ್ಲಿ ವ್ಯವಸ್ಥಿತವಾಗಿ ಮಾಡಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಗ್ರಾಮೀಣ ಬ್ಯಾಂಕ್ ಕೇಂದ್ರ ಸರ್ಕಾರದ ಸಾಮಾಜಿಕ ಸುರಕ್ಷಾ ಯೋಜನೆಗಳ ಅನುಷ್ಠಾನದಲ್ಲಿ ಉತ್ತಮ ಸಹಭಾಗಿತ್ವ ತೋರಿರುವುದನ್ನು ಸಚಿವರು ಶ್ಲಾಘಿಸಿದರು.

ಕೇಂದ್ರ ಹಣಕಾಸು ಇಲಾಖೆಯ ಕಾರ್ಯದರ್ಶಿ ಎಂ.ನಾಗರಾಜು ಅವರು ಮಾತನಾಡಿ, ಗ್ರಾಮೀಣ ಬ್ಯಾಂಕುಗಳು ಗ್ರಾಮೀಣ ಭಾಗದ ಚಿತ್ರಣವನ್ನು ಬದಲಿಸುವ ಶಕ್ತಿ ಹೊಂದಿದ್ದು, ಕೇಂದ್ರ ಸರ್ಕಾರ ಗ್ರಾಮೀಣ ಬ್ಯಾಂಕುಗಳನ್ನು ಬಲಪಡಿಸಲು ಎಲ್ಲ ಕ್ರಮಗಳನ್ನು ಕೈಗೊಂಡಿದೆ ಎಂದು ಹೇಳಿದರು.

ಕರ್ನಾಟಕ ಗ್ರಾಮೀಣ ಬ್ಯಾಂಕಿನ ಅಧ್ಯಕ್ಷ ಶ್ರೀಕಾಂತ.ಎಂ ಭಂಡಿವಾಡ ಅವರು, ಬ್ಯಾಂಕಿನ ಕಾರ್ಯಕ್ಷಮತೆಯ ಮುಖ್ಯಾಂಶಗಳನ್ನು ಪ್ರಸ್ತುತಪಡಿಸಿದರಲ್ಲದೆ ಸಾಮಾಜಿಕ ಭದ್ರತಾ ಯೋಜನೆಗಳ ಅನುಷ್ಠಾನದಲ್ಲಿ ಬ್ಯಾಂಕು ವಿವಿಧ ರಂಗಗಳಲ್ಲಿ ಅಗ್ರಸ್ಥಾನದಲ್ಲಿದೆ ಎಂದರು.

ಗ್ರಾಮೀಣಾಭಿವೃದ್ಧಿಗೆ ಗ್ರಾಮೀಣ ಬ್ಯಾಂಕುಗಳ ಕೊಡುಗೆಯನ್ನು ಹೆಚ್ಚಿಸಲು ನಬಾರ್ಡ್ ಎಲ್ಲಾ ರೀತಿಯಲ್ಲೂ ಬೆಂಬಲ ಮತ್ತು ಪ್ರೋತ್ಸಾಹ ನೀಡುತ್ತಿದೆ ಎಂದು ನಬಾರ್ಡ್ ಅಧ್ಯಕ್ಷ ಕೆ.ವಿ.ಶಾಜಿ ತಿಳಿಸಿದರು.

ಕೆನರಾ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕ ಎಸ್.ಕೆ.ಮಾಜುಮದಾರ್ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು.

ಸಭೆಯಲ್ಲಿ ಹಣಕಾಸು ಇಲಾಖೆಯ ಜಂಟಿ ಕಾರ್ಯದರ್ಶಿ ಮನೋಜ್ ಎಂ.ಅಯ್ಯಪ್ಪನ್, ನಿರ್ದೇಶಕ ಸುಶೀಲ್ ಕುಮಾರ್ ಸಿಂಗ್, ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್.ಕೆ., ಜಿಪಂ ಸಿಇಒ ಮಹಮ್ಮದ್ ಹ್ಯಾರಿಸ್ ಸುಮೈರ್ ಮತ್ತು ಇತರರು ಉಪಸ್ಥಿತರಿದ್ದರು.

# ಅರ್ಥ ಪೂರ್ಣವಾಗಿ ಅದ್ದೂರಿಯಾಗಿ ಕನಕ ಜಯಂತಿ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ಮೈಸೂರು ಅ.17:–ಜಿಲ್ಲೆಯಲ್ಲಿ ಕನಕದಾಸರ 538 ಜನ್ಮ ದಿನಾಚರಣೆ ಅಂಗವಾಗಿ ಅರ್ಥಪೂರ್ಣವಾಗಿ ಅದ್ದೂರಿಯಾಗಿ ಕನಕಜಯಂತಿಯನ್ನು ಆಚರಣೆ ಮಾಡಲಾಗುವುದು. ಕನಕದಾಸರ ಸಂದೇಶಗಳನ್ನು ಸಮಾಜಕ್ಕೆ ಸಾರಲು ಜೀವನ ಮೌಲ್ಯಗಳನ್ನು ಸಮಾಜಕ್ಕೆ ನೀಡುವ ಸಲುವಾಗಿ ಅರ್ಥಪೂರ್ಣವಾಗಿ ಜಯಂತಿಯನ್ನು ಆಚರಣೆ ಮಾಡಲಾಗುತ್ತಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಡಾ. ಪಿ ಶಿವರಾಜು ಅವರು ತಿಳಿಸಿದರು.

# ಪೂರ್ವಭಾವಿ ಸಭೆಯಲ್ಲಿ ನಿರ್ಧಾರ

## ಸಡಗರ –ಸಂಭ್ರಮದಿಂದ ಕರ್ನಾಟಕ ರಾಜ್ಯೋತ್ಸವ ಆಚರಣೆ: ಎಡಿಸಿ ಮಹಮ್ಮದ್ ಝುಬೇರ್

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಅ.17–ಲ್ಲಾಡಳಿತದ ವತಿಯಿಂದ ನವೆಂಬರ್ 1ರಂದು ಜಿಲ್ಲಾ ಕೇಂದ್ರದಲ್ಲಿ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಸಡಗರ ಸಂಭ್ರಮದಿಂದ ಆಚರಿಸಲು ನಿರ್ಧರಿಸಲಾಗಿದೆ.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆ ಕುರಿತು ಏರ್ಪಡಿಸಿದ್ದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಅಂದು ಬೆಳಿಗ್ಗೆ 09 ಗಂಟೆಗೆ ನಗರದ ಡಾ.ರಾಜ್ ಕುಮಾರ್ ರಸ್ತೆಯ ಸರ್ಕಾರಿ(ಮಾ.ಪು) ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಪೌರಾಡಳಿತ, ಹಜ್ ಸಚಿವರಾದ ರಹೀಂ ಖಾನ್ ಅವರು ಧ್ವಜಾರೋಹಣ ನೆರವೇರಿಸಲಿದ್ದು, ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲು ಸಭೆಯಲ್ಲಿ ಸೂಚಿಸಲಾಯಿತು.

ವೇದಿಕೆ ಸಿದ್ಧತೆ, ಆಹ್ವಾನ ಪತ್ರಿಕೆ ಮುದ್ರಣ, ಶಿಷ್ಟಾಚಾರದಂತೆ ಅತಿಥಿ ಗಣ್ಯರನ್ನು ಆಹ್ವಾನಿಸಲು, ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಅದರಂತೆ ಅಂದು ಹಂಪಿಯಿಂದ ಜ್ಯೋತಿ ದೀಪ ತರಲಾಗುವುದು. ಬಳಿಕ ತಾಯಿ ಭುವನೇಶ್ವರಿ ದೇವಿಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ವಿವಿಧ ಇಲಾಖೆಗಳ ಸ್ತಬ್ಧ ಚಿತ್ರಗಳ ಮೆರವಣಿಗೆ ವ್ಯವಸ್ಥಿತವಾಗಿ ಹಮ್ಮಿಕೊಳ್ಳಬೇಕು. ವಿದ್ಯುತ್ ಅವಘಡ ಸಂಭವಿಸಿದಂತೆ ಎಚ್ಚರವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರಿಗೆ ಸನ್ಮಾನಿಸಲಾಗುವುದು. ನಗರದ ನಗರದಲ್ಲಿ ಸ್ವಚ್ಛತೆ, ಪ್ರಮುಖ ವೃತ್ತ ಮತ್ತು ರಸ್ತೆಗಳನ್ನು ದೀಪಾಲಂಕಾರದಿಂದ ಅಲಂಕೃತಗೊಳಿಸಬೇಕು. ನವೆಂಬರ್ ತಿಂಗಳ ಮೊದಲ ಒಂದು ವಾರದ ಕಾಲ ಜಿಲ್ಲೆಯ ಎಲ್ಲಾ ಚಿತ್ರಮಂದಿರಗಳಲ್ಲಿ ಕಡ್ಡಾಯವಾಗಿ ಕನ್ನಡ ಚಿತ್ರಗಳನ್ನು ಪ್ರದರ್ಶಿಸಬೇಕು ಎಂದರಲ್ಲದೇ, ಈ ಸಂದರ್ಭದಲ್ಲಿ ವ್ಯವಸ್ಥಿತವಾಗಿ ಹಮ್ಮಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಗೆ ಈ ಬಾರಿ ಆಯೋಜಿಸಲಾಗುತ್ತಿರುವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಾಗಿ ಸ್ವಾಗತಿಸಲು, ವಿವಿಧ ಶಾಲಾ–ಕಾಲೇಜು 1 ಲಕ್ಷ ವಿದ್ಯಾರ್ಥಿಗಳ ಮೂಲಕ ನಾಡಗೀತೆ ಹೇಳುವ ಮೂಲಕ ಕನ್ನಡದ ಕಲರವ ಮೊಳಗಬೇಕು. ರಾಜ್ಯೋತ್ಸವದ ಅಂಗವಾಗಿ ಶಾಲಾ–ಕಾಲೇಜುಗಳಲ್ಲಿ ಭಾಷಣ, ಪ್ರಬಂಧ ಹಾಗೂ ವಿವಿಧ ಸ್ಪರ್ಧೆಗಳನ್ನು ಆಯೋಜಿಸಬೇಕು ಎಂದು ವಿವಿಧ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಸಭೆಯ ಗಮನಕ್ಕೆ ತಂದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೋದಿನ್ ಸೇರಿದಂತೆ ಡಿಡಿಪಿಐ, ಡಿಡಿಪಿಯು, ಲೋಕೋಪಯೋಗಿ, ಜೆಸ್ಕಾಂ ಅಧಿಕಾರಿಗಳು ಸೇರಿದಂತೆ ವಿವಿಧ ಕನ್ನಡಪರ ಸಂಘಟನೆಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಅನ್ನಭಾಗ್ಯ ಯೋಜನೆಯಲ್ಲಿ ಸಿದ್ಧರಾಮಯ್ಯ ಬದಲಾವಣೆ ಮಾಡಿದ್ದು ಭ್ರಷ್ಟಾಚಾರ ಮಾಡಲು: ಸುರೇಶ ಬಳೂಟಗಿ ಆರೋಪ

ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ : ಬಡವರಿಗೆ ಅನುಕೂಲವಾಗಲೆಂದು ಜಾರಿಗೆ ತಂದಿರುವ ಅನ್ನಭಾಗ್ಯ ಯೋಜನೆಯಲ್ಲಿ ಕಾಂಗ್ರೆಸ್ ಸರ್ಕಾರ ಮಾರ್ಪಾಡು ಮಾಡಿದ್ದು ಭ್ರಷ್ಟಾಚಾರ ಮಾಡಿ ,ಬಡವರ ದುಡ್ಡು ಕಬಳಿಸಲು ಎಂದು ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ ಆರೋಪಿಸಿದ್ದಾರೆ.



ಕುಕನೂರ ಪಟ್ಟಣದಲ್ಲಿ ಪತ್ರಿಕೆಯೊಂದಿಗೆ ಮಾತನಾಡಿದ ಅವರು ಈ ಮೊದಲು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಅರ್ಹ ಬಡ ಫಲಾನುಭವಿಗಳಿಗೆ ತಲಾ ಐದು ಕೆ. ಜಿ.ಅಕ್ಕಿ ಹಾಗೂ ಪ್ರತಿಯೊಬ್ಬರಿಗೂ 170 ರೂಪಾಯಿಗಳಂತೆ ಕುಟುಂಬ ಸದಸ್ಯರ ಲೆಕ್ಕಾಚಾರದಂತೆ ಡಿ ಬಿ ಟಿ ಮೂಲಕ ಅವರ ಖಾತೆಗೆ ಜಮಾ ಮಾಡಲಾಗುತ್ತಿತ್ತು.ನಂತರ ಹಣ ಹಾಕುವ ಯೋಜನೆ ನಿಲ್ಲಿಸಿ ತಲಾ 10 ಕೆ. ಜಿ. ಪಡಿತರ ವಿತರಿಸುವ ಕಾರ್ಯವನ್ನು ಮಾಡುವ ಮೂಲಕ ಮಾರ್ಪಾಡು ಮಾಡಿತು. ಈಗ ಬಡವರ ಹೊಟ್ಟೆ ಮೇಲೆ ಕಲ್ಲು ಎಳೆದು ತನ್ನ ಹಿಂಬಾಲಕರಿಗೆ ದುಡ್ಡು ಮಾಡಿಕೊಡುವ ಇಂದಿರಾ ಕಿಟ್ ಎಂಬ ಹೊಸ ಯೋಜನೆ ರೂಪಿಸಿ ಜನರಿಗೆ ಮಂಕು ಬೂದಿ ಎರಚುವ ಕೆಲಸಕ್ಕೆ ಸಿದ್ದರಾಮಯ್ಯ ಕೈ ಹಾಕಿದ್ದು ನಾಚಿಕೆಗೇಡಿನ ವಿಷಯ. ಇವರು ಕೊಡಲು ಯೋಚಿಸುತ್ತಿರುವ ಇಂದಿರಾ ಕಿಟ್ ನಲ್ಲಿ ಇನ್ನು ಮುಂದೆ 10 ಕೆ. ಜಿ.ಅಕ್ಕಿ ಅಥವಾ ಧಾನ್ಯದ ಬದಲಾಗಿ 5 ಕೆ. ಜಿ ಮಾತ್ರ ಅಕ್ಕಿ ನೀಡುತ್ತಿದ್ದು,4 ಜನರು ಇರುವ ಕುಟುಂಬಕ್ಕೆ ಒಂದು ಕೆ. ಜಿ ತೊಗರಿ ಬೇಳೆ,ಒಂದು ಕೆ.ಜಿ ಹೆಸರು ಬೇಳೆ, ಒಂದು ಕೆ. ಜಿ. ಅಡುಗೆ ಎಣ್ಣೆ, ಒಂದು ಕೆ. ಜಿ.ಸಕ್ಕರೆ ಹಾಗೂ ಒಂದು ಕೆ. ಜಿ. ಉಪ್ಪು ನೀಡುವುದಾಗಿ ಹೇಳುತ್ತಿದ್ದಾರೆ. ಇದನ್ನು ಹೇಗೆ ಲೆಕ್ಕಾಚಾರ ಹಾಕಿದರೂ , ಉತ್ತಮ ಗುಣಮಟ್ಟದ ದಿನಸಿ ವಿತರಿಸಿದರೂ 400 ರೂಪಾಯಿ ದಾಟುವುದಿಲ್ಲ. ಈ ಮೊದಲು 5 ಕೆ. ಜಿ. ಅಕ್ಕಿ ಬದಲಾಗಿ ತಲಾ 170 ರಂತೆ 4 ಜನರ 680 ರೂಪಾಯಿಗಳನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗುತ್ತಿತ್ತು. ಇವರು ಕೊಡುತ್ತಿರುವ ಕಿಟ್ ನ ಬೆಲೆ 400 ರೂಪಾಯಿ ಲೆಕ್ಕ ಹಾಕಿದರೆ ನೇರವಾಗಿ ಇವರು ಇದರಲ್ಲಿ ಪ್ರತಿ ಕುಟುಂಬದಿಂದ ಸರಾಸರಿ 280 ರೂಪಾಯಿ ಕೊಳ್ಳೆ ಹೊಡೆಯಲು ನಿರ್ಧಾರ ಮಾಡಿದ್ದು,ಕರ್ನಾಟಕ ರಾಜ್ಯದ 1.28 ಕೋಟಿ ಬಿಪಿಎಲ್ ಕಾರ್ಡು ಇದ್ದು ಪ್ರತಿ ತಿಂಗಳು ಸಾವಿರಾರು ಕೋಟಿ ರೂಪಾಯಿ ಲೂಟಿ ಹೊಡೆಯಲು ಹುನ್ನಾರ ನಡೆಸಿದ್ದಾರೆ. ಇದರ ಜೊತೆಗೆ ಇವರು ನೀಡುವ ಕಿಟ್ ನ ಗುಣಮಟ್ಟ ಹೇಗೆ ಇರುತ್ತದೋ ಅದನ್ನು ದೇವರೇ ಬಲ್ಲ. ಸದಾ ಬಡವರ ಬಗ್ಗೆ ಮಾತನಾಡುವ ಸಿದ್ದರಾಮಯ್ಯನವರು ಇಂಥ ಹಳ್ಳ ಹಿಡಿಯುವ ಯೋಜನೆಯನ್ನು ನಿಲ್ಲಿಸಿ ಈ ಮೊದಲು ಇದ್ದಂತೆ ತಲಾ 170 ರೂಪಾಯಿ ಹಣವನ್ನು ನೀಡಿದರೆ ಅವರು ತಮಗೆ ಬೇಕಾಗುವ ಉತ್ತಮ ಗುಣಮಟ್ಟದ ದಿನಸಿ ವಸ್ತುಗಳನ್ನು ಖರೀದಿಸಲು ಸಹಾಯ ಮಾಡಿದಂತಾಗುತ್ತದೆ. ಹೀಗಾಗಿ ಈ ಮೊದಲು ಇದ್ದಂತೆ ಹಣವನ್ನು ನೇರ ವರ್ಗಾವಣೆ ಮೂಲಕ ಅವರ ಖಾತೆಗೆ ಜಮಾ ಮಾಡಬೇಕೆಂದು ಆಗ್ರಹಿಸಿದರು.


ಜಾಹೀರಾತಿಗಾಗಿ ಸಂಪರ್ಕಿಸಿರಿ:
9449732000

## ನವಂಬರ್ 27ರಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಪೀಠಕ್ಕೆ ಮೈಸೂರು ಮಹಾರಾಜರ ಶುಭಾಗಮನ

ಮಲ್ಲಮ್ಮ ನುಡಿ ವಾರ್ತೆ

ಶ್ರೀರಂಭಾಪುರಿಪೀಠ(ಬಾಳೆಹೊನ್ನೂರು)- ಅಕ್ಟೋಬರ್16.-ಶ್ರೀ ಜಗದ್ಗುರು ರೇಣುಕಾಚಾರ್ಯರಿಂದಸಂಸ್ಥಾಪಿತಗೊಂಡ ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠಕ್ಕೆ ಮೈಸೂರು ರಾಜ ಮನೆತನದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ (ಮೈಸೂರು ಲೋಕಸಭಾ ಸದಸ್ಯರು) ಅವರುಬರಲಿರುವನವಂಬರ್ 27ರಂದು ಜರುಗಲಿರುವ ಶ್ರೀ ರಂಭಾಪುರಿ ಪೀಠದ ನವನಿರ್ಮಾಣ ಶಿಲ್ಪಿ ಲಿಂ. ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಭಗವತ್ಪಾದರ ಪೀಠಾರೋಹಣದ ಶತಮಾನೋತ್ಸವ ಸಮಾರಂಭದ ಉದ್ಘಾಟನೆಗಾಗಿ ಆಗಮಿಸುವರು ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಪ್ರಕಟಪಡಿಸಿದರು. ಶ್ರೀರಂಭಾಪುರಿ ಪೀಠದ ಪ್ರತಿನಿಧಿಗಳಾಗಿ ಬೆಳಗಾವಿ ಜಿಲ್ಲೆ ಹುಕ್ಕೇರಿ ಹಿರೇಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಬೇಬಿ ಚಂದ್ರವನಮಠದ ಡಾ. ತ್ರಿನೇತ್ರ ಮಹಾಂತ ಸ್ವಾಮಿಗಳು, ಕೊಣ್ಣೂರು ಮರಡಿ ಮಠದ ಡಾ. ಪವಾಡೇಶ್ವರ ಶಿವಾಚಾರ್ಯ ಸ್ವಾಮಿಗಳು, ಸಿದ್ದರಬೆಟ್ಟ



ಕ್ಷೇತ್ರದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಮಹಾರಾಜರನ್ನು ಭೇಟಿಯಾಗಿ ಆಹ್ವಾನಿಸಿದಾಗ ಅತ್ಯಂತ ಸಂತೋಷದಿಂದ ಒಪ್ಪಿಗೆಯನ್ನು ಕೊಟ್ಟಿರುವುದು ತಮಗೆ ಅತೀವ ಸಂತೋಷ ತಂದಿದೆ ಎಂದಿರುವ ಜಗದ್ಗುರುಗಳು ಶ್ರೀ ರಂಭಾಪುರಿ ಪೀಠಕ್ಕೂ ಮೈಸೂರು ಮಹಾಸಂಸ್ಥಾನಕ್ಕೂ ಇರುವ ಸಂಬಂಧವನ್ನು ಸ್ಮರಿಸಿಕೊಂಡರು. 1885 ರಲ್ಲಿ ಶ್ರೀ ರಂಭಾಪುರಿ ಪೀಠದ ಶ್ರೀ ಜಗದ್ಗುರು ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಕಾಲದಲ್ಲಿ ಶ್ರೀ ಚಾಮರಾಜ ಒಡೆ-ಯರ್ ಮಹಾಪ್ರಭುಗಳು ಆಗಮಿಸಿದ್ದರು. ತದನಂತರ ಶ್ರೀ ಜಗದ್ಗುರು ರಂಭಾಪುರಿ ಪೀಠದ ಶ್ರೀ ಶಿವಾನಂದ ಜಗದ್ಗುರುಗಳ ಕಾಲದಲ್ಲಿ ನಾಲ್ವಡಿ ಕೃಷ್ಣರಾಜ ಒಡೆ-ಯರ್ ಮಹಾಪ್ರಭುಗಳು 1931 ರಲ್ಲಿ ಆಗಮಿಸಿದ್ದರು. ತದನಂತರ ಶ್ರೀ ಜಯಚಾಮರಾಜ ಒಡೆಯರ್ ಮಹಾಪ್ರಭುಗಳು 1941ರಲ್ಲಿ ಆಗಮಿಸಿದ್ದರು. ಇದೀಗ ಮೈಸೂರು ಸಂಸ್ಥಾನದ ಮಹಾರಾಜರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ್ ಒಡೆಯರ್ ಮಹಾಪ್ರಭುಗಳು ದಿನಾಂಕ 27-11-2025 ರಂದು ಶ್ರೀ ರಂಭಾಪುರಿ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಭಗವತ್ಪಾದರ ಪೀಠಾರೋಹಣದ ಶತಮಾನೋತ್ಸವ ಸಮಾರಂಭದ ಉದ್ಘಾಟನೆಗಾಗಿ ಆಗಮಿಸುತ್ತಿರುವುದು ಸಂತೋಷದ ಸಂಗತಿ. ಶ್ರೀ ರಂಭಾಪುರಿ, ಶ್ರೀ ಉಜ್ಜಯಿನಿ, ಶ್ರೀ ಕೇದಾರ, ಶ್ರೀ ಶ್ರೀಶೈಲ ಮತ್ತು ಶ್ರೀ ಕಾಶಿ ಜಗದ್ಗುರುಗಳ ಮಂಗಳ ಸಾನ್ನಿಧ್ಯದಲ್ಲಿ ಜರುಗಲಿರುವ ಶತಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಈ ಅಪೂರ್ವ ಸಮಾರಂಭದಲ್ಲಿ ಕೇಂದ್ರದ ಸಚಿವರು ರಾಜ್ಯದ ಸಚಿವರು ಹಾಗೂ ಶಾಸಕರು ವಿಶೇಷ ಅತಿಥಿಗಳಾಗಿ ಆಗಮಿಸಲಿದ್ದಾರೆ. ಈ ಅರ್ಥಪೂರ್ಣ ಸಮಾರಂಭದಲ್ಲಿ ಎಲ್ಲ ಭಾಗದ ಧರ್ಮ ಅಭಿಮಾನಿಗಳು ಪಾಲ್ಗೊಂಡು ಪುನೀತರಾಗಬೇಕೆಂದು ಶ್ರೀ ಪೀಠದ ಪ್ರಕಟಣೆ ತಿಳಿಸಿದೆ.

## ಜಿಲ್ಲಾ ಯುವಜನೋತ್ಸವ ಸ್ಪರ್ಧಾ ವಿಜೇತರಿಗೆ ಪ್ರಶಸ್ತಿ ವಿತರಣೆ

## ಸಾಂಸ್ಕೃತಿಕ ಚಟುವಟಿಕೆಗಳಿಂದ ಉತ್ತಮ ವ್ಯಕ್ತಿತ್ವ ರೂಪು:ಡಾ.ಗಾಳಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಅ.17-ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವದರಿಂದ ಉತ್ತಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂದು ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಯುವಜನೋತ್ಸವದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಪ್ರಶಸ್ತಿ ವಿತರಿಸಿ ಅವರು ಮಾತನಾಡಿದರು. ಯುವಕರು ಯುವಜನೋತ್ಸವದಲ್ಲಿ ಪಾಲ್ಗೊಳ್ಳುವದರಿಂದ ನಮ್ಮ ನೆಲದ ಸಾಂಸ್ಕೃತಿಕ ಕಲೆಗಳ ಮಹತ್ವ ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಇದರಿಂದ ನಮ್ಮ ಯುವ ಜನತೆಯಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ ಮಾತನಾಡಿ, ಜಿಲ್ಲಾ ಮಟ್ಟದ ಯುವಜನೋತ್ಸವದಿಂದ ಜಿಲ್ಲೆಯ ಯುವ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಪೂರಕವಾಗುತ್ತದೆ. ಸ್ಪರ್ಧೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ ಸ್ಪರ್ಧೆ ಮಾಡುವಂತೆ ಮನಸ್ಸು ಮುಖ್ಯ ಎಂದು ಹೇಳಿದರು.

ಫಲಿತಾಂಶ : ಜಾನಪದ ನೃತ್ಯ: ಮುತ್ತುರಾಜ ಯಡಹಳ್ಳಿ ಕೋಟೆಕಲ್ಲ ತಂಡ ಪ್ರಥಮ, ಸಾವಿತ್ರಿ ಹಂಚನಾಳ ತಂಡ ದ್ವಿತೀಯ. ಜಾನಪದ ಗೀತೆ: ವೈಷ್ಣವಿ ಗೂಳಿ ಹಾಗೂ ತಂಡ ಪ್ರಥಮ, ಶ್ರೀಯಾ ಜೋರಾಪೂರ ಹಾಗೂ ತಂಡ ದ್ವಿತೀಯ. ಚಿತ್ರಕಲೆ ಸ್ಪರ್ಧೆ: ಗೀತಾಂಜಲಿ ನಿರಂಜನ ಪ್ರಥಮ, ಮಲ್ಲಿಕಾರ್ಜುನ ಹೂನ್ನೂರ ದ್ವಿತೀಯ, ರಾಚಣ್ಣ ಮಡಿ ತೃತೀಯ.

ಭಾಷಣ ಸ್ಪರ್ಧೆ: ಮಯಾರಾಜ ಆರ್.ಪಿ ಪ್ರಥಮ, ಮೇಘಾ ಅನಗವಾಡಿ ದ್ವಿತೀಯ ಹಾಗೂ ಅನುಶಾಬಾನು ಪಿಂಜಾರ ತೃತೀಯ.

ವಿಜ್ಞಾನಮೇಳ ಪ್ರದರ್ಶನ: ಕಿರಣ ಪಮ್ಮಾರ ಹಾಗೂ ತಂಡ ಪ್ರಥಮ, ಶ್ರೀನಿವಾಸಮೂರ್ತಿ ಹಾಗೂ ತಂಡ ದ್ವಿತೀಯ ಹಾಗೂ ಶಾಂಭವಿ ಹಾಗೂ ತಂಡ ತೃತೀಯ. ಕವಿತೆ ಬರೆಯುವುದು: ಜಾಫರ್ ಜಾತಗಾರ ಪ್ರಥಮ, ಕೀರ್ತಿ ಹೂಲಗೇರಿ ದ್ವಿತೀಯ ಹಾಗೂ ದೀಪಾ ಕಾನನ್ನವರ ತೃತೀಯ. ಕಥೆ ಬರೆಯುವುದು: ಹನಮಂತ ಕಾಂಬಳೆ ಪ್ರಥಮ, ಆರೋಬ ಮನಿಯಾರ ದ್ವಿತೀಯ ಹಾಗೂ ಪೈಜಾ ತೃತೀಯ ಸ್ಥಾನ ಪಡೆದಿದ್ದು, ಪ್ರಶಸ್ತಿ ಪತ್ರ ಮತ್ತು ಬಹುಮಾನ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಐಕ್ಯೂಎಸಿ ಸಂಚಾಲಕ ಡಾ.ಬಸವರಾಜ ಬೀಳಗಿ, ಪ್ರೊ.ಸಂಪತ್ತ ಲಮಾಣಿ, ಡಾ.ಚಂದ್ರಶೇಖರ ಕಾಳನ್ನವರ, ಡಾ.ಮಾರುತಿ ಪಾಟೋಳಿ, ಶ್ರೀಕಾಂತ ಚಿಮ್ಮಲ, ಸಂಗಮೇಶ ಬಡಿಗೇರ, ಪವಿತ್ರಾ ಜಕ್ಕಪ್ಪನವರ, ಡಾ.ಸುಮಂಗಲಾ ಮೇಟಿ, ಬಸವರಾಜ ಸಿಂದಗಿಮಠ, ಸಂಗಮೇಶ ಬ್ಯಾಳಿ ಪಾಲ್ಗೊಂಡಿದರು.

## ಅಪ್ರಾಪ್ತಿ ಬಾಲಕಿ ಕೊಲೆ-ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಒತ್ತಾಯ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಅ.17-ಮುದ್ದೆಬಿಹಾಳ ತಾಲೂಕಿನಲ್ಲಿ ಅಪ್ರಾಪ್ತ ಬಾಲಕಿ ಮೇಲೆ ನಡೆದ ಅತ್ಯಾಚಾರ, ಕೊಲೆ ಪ್ರಕರಣದ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಶಾಮರಾವ ಘಾಟಕೆ ಒತ್ತಾಯಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಕರಣದಲ್ಲಿ ಭಾಗಿಯಾದವರನ್ನು ಕೂಡಲೇ ಬಂಧಿಸಬೇಕು. ನೊಂದ ಕುಟುಂಬಕ್ಕೆ 25 ಲಕ್ಷ ರೂ. ಪರಿಹಾರ ಹಾಗೂ ನಾಲ್ಕು ಎಕರೆ ಜಮೀನು ನೀಡಬೇಕು, ಅವರ ಕುಟುಂಬದ ಸದಸ್ಯರಿಗೆ ಸರ್ಕಾರಿ ನೌಕರಿ ಒದಗಿಸಬೇಕು ಎಂದು ಆಗ್ರಹಿಸಿದರು.

ಸಂಘಟನೆಯ ಬೆಳಗಾವಿ ವಿಭಾಗದ ಸಂಚಾಲಕ ಹನುಮಂತ ಚಿಮ್ಮಲಗಿ, ಪರಶುರಾಮ ಮಾಂಗ, ಮುತ್ತಣ್ಣ ಮೇತ್ರಿ, ಸಂಗಣ್ಣ ಮಡ್ಡಿ, ಮುಕೇಶ ಅರಳಿಕಟ್ಟಿ ಇದ್ದರು.

## ಚೌಡಯ್ಯ ಮೂರ್ತಿ ಭಗ್ನ:ಕಿಡಿಗೇಡಿಗಳ ಬಂಧನಕ್ಕೆ ಆಗ್ರಹ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಅ.17-ಕಲಬುರ್ಗಿ ಜಿಲ್ಲೆಯ ಶಹಬಾದ ತಾಲೂಕಿನ ಮುತ್ತಗಾ ಗ್ರಾಮದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿ ಭಗ್ನಗೊಳಿಸಿದ ಘಟನೆಯನ್ನು ಜಿಲ್ಲಾ ಅಂಬಿಗರ ಸಮಾಜ ಖಂಡಿಸಿ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿತು.

ಜಿಲ್ಲಾಡಳಿತ ಭವನದ ಮುಂದೆ ಘಟನೆಯನ್ನು ಖಂಡಿಸಿ ಪ್ರತಿಭಟನೆ ನಡೆಸಿದ ಸಮಾಜದ ಮುಖಂಡರು 12ನೇ ಶತಮಾನದಲ್ಲಿ ಶರಣರಲ್ಲಿ ನಿಜಶರಣ ಎನಿಸಿಕೊಂಡು ಶರಣರಲ್ಲಿ ಸೈ ಎನಿಸಿಕೊಂಡಿದ್ದ ಅಂಬಿಗರ ಚೌಡಯ್ಯನವರ ಮೂರ್ತಿ ಭಗ್ನಗೊಳಿಸಿರುವುದು ಅತ್ಯಂತ ಖಂಡನೀಯವಾಗಿದ್ದು, ಮೂರ್ತಿ ಭಗ್ನಗೊಳಿಸಿದ ಕಿಡಿಗೇಡಿಗಳನ್ನು ಪೊಲೀಸರು ತಕ್ಷಣ ಬಂಧಿಸಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸಮಾಜದ ಜಿಲ್ಲಾಧ್ಯಕ್ಷ ಮಹೇಶ ಕೋಳಿ, ಉಪಾಧ್ಯಕ್ಷ ಯಮನಪ್ಪ ಹಂಚಿನಾಳ, ಸದಾಶಿವ ಹೊಸಮನಿ, ರವಿಕುಮಾರ ಬೆಳಗಲ್, ಬಾಲಪ್ಪ ಅಂಬಿಗೇರ, ಗದ್ದೆಪ್ಪ ತಪ್ಪಲದಡ್ಡಿ, ರಾಮಣ್ಣ ರಾಮೋಡಗಿ, ಶ್ರೀಕಾಂತ ಕಟ್ಟಿಮನಿ, ಗೋಪಾಲ ಪೂಜಾರಿ, ಚಂದ್ರು ಅಂಬಿಗೇರ, ಸುರೇಶ ಕಟ್ಟಿಮನಿ, ಬಾಲಪ್ಪ ಬೆನ್ನಪ್ಪನವರ್, ಪಾಂಡಪ್ಪ ಅಂಬಿಗೇರ, ಹಣಮಂತಪ್ಪ ಗಬ್ಬೂರ, ಶ್ರೀಧರ ತಪ್ಪಲದಡ್ಡಿ, ಮೌನೇಶ, ಮಂಜು ಬಜ್ಜನ್ನವರ, ರಾಜು ಬಾಡದ, ರಾಮಣ್ಣ ಕಟ್ಟಿಮನಿ, ಉಮೇಶ ಗಸ್ತಿ, ಸುಭಾಸ ರಾಮೋಡಗಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಭಡಿ ಏಟುತಿಂದು ಹೋರಾಟಕ್ಕೆ ಇಳಿದ - ಶಾಸಕ ಶರಣು ಸಲಗರ್






ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಅ 17 ಇಲ್ಲಿನ ಗಾಂಧಿ ಚೌಕ ಮುಖಾಂತರ ಶ್ರೀ ಬಸವೇಶ್ವರ ವೃತ್ತದಿಂದ ಅಂಬೇಡ್ಕರ್ ವೃತ್ತದವರೆಗೆ 153 ಗ್ರಾಮಗಳ ರೈತರು ಇತ್ತೀಚೆಗೆ ಬಾರಿ ಪ್ರಮಾಣದ ಮಳೆ ಬಂದಿದ್ದರಿಂದ ರೈತರು ಬೆಳೆದ ಬೆಳೆಗಳು ಸಂಪೂರ್ಣ ವಾಗಿ ನಾಶವಾಗಿವೆ ಇದರಿಂದ ಸರ್ಕಾರದ ರೈತರ ಬೆಳೆದ ಬೆಳೆಗಳಿಗೆ ನ್ಯಾಯ ದೂರಕದ ಕಾರಣಕ್ಕಾಗಿ ತಾಲ್ಲೂಕಿನ ರೈತರು ಅರೆಬತ್ತಲೆ ಯಾಗಿ ಅಲ್ಲದೆ ಸರ್ಕಾರದಲ್ಲಿ ಇರುವ ಮುಖ್ಯಮಂತ್ರಿ ಸಿದ್ದರಾಮಯ್ಯ. ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ. ಹಾಗೂ ಕೃಷಿ ಸಚಿವರ ವಿರುದ್ಧ ಅನೇಕ ಘೋಷಣೆಗಳು ಕೆಳಿ ಬಂದವು ಅಲ್ಲದೆ ರೈತರು ತಮ್ಮಗಾದ ಅನ್ಯಾಯವನ್ನು ಭಿತ್ತಿ ಚಿತ್ರಗಳನ್ನು ಮೆರವಣಿಗೆಯಲ್ಲಿ ಪ್ರದರ್ಶನ ಮಾಡಿದರು. ಬೃಹತ್ ಪ್ರಮಾಣದ ಮೆರವಣಿಗೆ ನಡೆಯಿತು. ಈ ಸಂದರ್ಭದಲ್ಲಿ ಶಾಸಕರಾದ ಶರಣು ಸಲಗರ ಅರೆಬತ್ತಲೆ ಯಾಗಿ ಮೆರವಣಿಗೆಯಲ್ಲಿ **ಭಡಿ ಏಟು**ತಿಂದು ಹೋರಾಟಕ್ಕೆ ಇಳಿದರು. ರೈತರ ಈ ಅಪರೂಪದ ಮೆರವಣಿಗೆಯಲ್ಲಿ ಸುಮಾರು 8 ಸಾವಿರಕ್ಕೂ ಹೆಚ್ಚು ರೈತರು ಬಾಗಿಯಾಗಿದ್ದಾರೆ. ಬಿಜೆಪಿ ತಾಲ್ಲೂಕ ಅಧ್ಯಕ್ಷರಾದ ಜ್ಞಾನೇಶ್ವರ್ ಮುಳೆ. ನಗರ ಅಧ್ಯಕ್ಷರಾದ ಸಿದ್ದು ಬಿರಾದಾರ. ಪಕ್ಷದ ಮುಖಂಡರಾದ ರಾಜಕುಮಾರ ಪಾಟೀಲ ಸಿರಗಾಪುರ. ಸಂಜೀವ ಮೂಲಗೆ. ಸೂರ್ಯಕಾಂತ ಚಿಲ್ಲಾಬಟೆ. ಅರವಿಂದ ಮುತ್ತೆ. ಶಿವಕುಮಾರ ಆಗ್ಯೆ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಸರ್ವ ರೋಗಗಳಿಗೂ ಹೋಮಿಯೋಪಥಿ ರಾಮಬಾಣ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಅ.17-ಹೋಮಿಯೋಪಥಿ ವೈದ್ಯ ಪದ್ಧತಿಯಲ್ಲಿ ಶಿಶುವಿನಿಂದ ವಯೋವೃದ್ಧರವರೆಗಿನ ಮಹಿಳೆ ಹಾಗೂ ಪುರುಷರ ರೋಗಗಳಿಗೆ ಯಶಸ್ವಿ ಚಿಕಿತ್ಸೆವಿದೆ ಎಂದು ಬಾಗಲಕೋಟೆಯ ಬಿ.ವ್ಹಿ.ವ್ಹಿ.ಎಸ್. ಹೋಮಿಯೋಪಥಿಕ ವೈದ್ಯಕೀಯ ಮಹಾವಿದ್ಯಾಲಯ ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮಿ ಪಾಟೀಲ ಹೇಳಿದರು.

ಬಾಗಲಕೋಟೆಯ ಬಿವಿವಿಎಸ್ ಹೋಮಿಯೋಪತಿಕ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆ ವತಿಯಿಂದ ತಾಲೂಕಿನ ಕಿರಸೂರ ಗ್ರಾಮದಲ್ಲಿ ಹಮ್ಮಿಕೊಂಡ ಉಚಿತ ಚಿಕಿತ್ಸಾ ಶಿಬಿರದಲ್ಲಿ ಮಾತನಾಡಿದ ಅವರು, ಹೋಮಿಯೋಪಥಿ ಸರ್ವ ರೋಗಗಳಿಗೂ ರಾಮಬಾಣವಿದ್ದಂತೆ ಎಂದರು.

ಗ್ರಾಮದ ಮಲ್ಲು ಕಂಬಾರ ಮಾತನಾಡಿದರು. ಶಿಬಿರದಲ್ಲಿ ತಜ್ಞ ವೈದ್ಯರಾದ ಡಾ.ಅನುರಾಧಾ ಮಿರಜಕರ, ಡಾ.ಶಮಶಾದ ಅಂಕಲಗಿ, ವೈದ್ಯಾಧಿಕಾರಿ ಡಾ.ಮೇಘಾ ತಳವಾರ ಹಾಗೂ ಕಲಿಕಾ ವೈದ್ಯರು ಭಾಗವಹಿಸಿದ್ದರು. ಗ್ರಾಮದ ಹಿರಿಯರಾದ ಡಾ.ಹುಚ್ಚೇಶ ನಿಲುಗಲ್, ಶಿವಪುತ್ರಪ್ಪ ದೊಡಮನಿ, ದುಂಡಯ್ಯ ಹಳದೂರಮಠ ಉಪಸ್ಥಿತರಿದ್ದರು

## ಫತ್ತರಗಿ ಭಾಗ್ಯವಂತಿಯ 23ನೇ ವರ್ಷದ ಪಾದಯಾತ್ರೆ.



ಮಲ್ಲಮ್ಮ ನುಡಿ ವಾರ್ತೆ

ಮಾರನಾಳ : ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಮಾರನಾಳದಿಂದ ಶ್ರೀ ಘತ್ತರಗಿ ಭಾಗ್ಯವಂತಿಯವರೆಗೆ ಪಾದಯಾತ್ರೆ .

ಗ್ರಾಮದೇವತೆ ಶ್ರೀ ಗದ್ಯಮ ದೇವಿ ದೇವಸ್ಥಾನದಿಂದ ಪ್ರಾರಂಭಿಸಿದರು ಪ್ರತಿ ವರ್ಷದಂತೆ ಈ ವರ್ಷ ಸೇರಿ 23ನೇ ವರ್ಷ ಪಾದಯಾತ್ರೆ ಇದಗಿದ್ದು ಈ ಪಾದಯಾತ್ರೆಯಲ್ಲಿ ಮಾರನಾಳ ಊರಿನ ಗುರು ಹಿರಿಯರು ಯುವಕರು ಹಾಗೂ ಮಹಿಳೆಯರು ಸೇರಿ ಪಾದಯಾತ್ರೆ ಮಾಡುತ್ತಿದ್ದಾರೆ. ಈ ಪಾದಯಾತೆ-ಯು ಸರಿ-ಸುಮಾರು 120 ಕಿಲೋ ಮೀಟರ್ ನಷ್ಟು ದೂರವಿದ್ದಿ ಆದರೂ ಸಹಾ ಮಳೆ, ಗಾಳಿ, ಚಳ್ಳಿ, ಅನ್ನದೆ ದೇವರ ಆರಾಧನೆ ಮಾಡುತ್ತ ಸುಮಾರು 3 ದಿನಗಳ ಕಾಲ ಪಯಣ ಬೆಳಸಿ ಆಮವಾಸೆ ದಿನದಂದು ಘತ್ತರಗಿ ಭಾಗ್ಯವಂತಿಯ ತಾಯಿಗೆ ಪೂಜಾ ಸಲ್ಲಿಸುತ್ತಾರೆ. ಇದೆ ಸಂದರ್ಭದಲ್ಲಿ ಮಾರನಾಳ ಊರಿನ ಗುರು ಹಿರಿಯರು ಉಪಸ್ಥಿತರು ಇದ್ದರು.

## ಹಾರಕೂಡ ಶ್ರೀಗಳಿಂದ 66 ಮಹನ್ನಿಯರಿಗೆ ವಿದ್ಯಾವಿಭೂಷಣ ಪ್ರಶಸ್ತಿ ಪ್ರದಾನ




ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:-ಅ17 ತಾಲೂಕಿನ ಶ್ರೀಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಸುಕ್ಷೇತ್ರ ಹಾರಕೂಡ ವತಿಯಿಂದ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರ ಪಾವನ ಸನ್ನಿಧಾನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಹಾರಕೂಡ ಶ್ರೀಮಠದ ಶ್ರೀ ಚೆನ್ನರೇಣುಕಬಸವ ಮಂಟಪದಲ್ಲಿ "ವಿದ್ಯಾವಿಭೂಷಣ" ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು. ಈ ಕಾರ್ಯಕ್ರಮದಲ್ಲಿ ಶಾಸಕರಾದ ಶರಣು ಸಲಗರ್.

ಅಧ್ಯಕ್ಷತೆ ಮಲ್ಲಿನಾಥ ಹಿರೇಮಠ ಕಾಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಾಬು ಹೊನ್ನಾ ನಾಯಕ.

ಮಾಜಿ ಜಿಲ್ಲಾ ಪಂಚಾಯಿತ ಸಧ್ಯಸರಾದ ಆನಂದ ಪಾಟೀಲ. ಶಂಕರರಾವ ಮಾಣಿಕ ಸೇರಿದಂತೆ ಅನೇಕರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಚಿಂಚೋಳಿಯ ಬಸವರಾಜ ಐನೋಳಿ ಪ್ರಶಸ್ತಿ ಪುರಸ್ಕೃತರ ಪರಿಚಯ ವಾಚನ ಮಾಡಿದರು. ಈ ಸಂದರ್ಭದಲ್ಲಿ ಚನ್ನವೀರ ಜಮಾದರ. ಅಂಬರಾಯ ಸೈದಾಪೂರೆ. ದಯಾನಂದ ಹಿರೇಮಠ. ಶಿಕ್ಷಣಾಧಿಕಾರಿಗಳಾದ ಶಿವರಾಚಪ್ಪ ವಾಲಿ. ಗುಂಡಪ್ಪ ಮಡಿಕೆ. ತುಕಾರಾಮ ಬಸನಾಯಕ. ಬೀಮಾಶಂಕರ ಮಾಶಳಕರ್. ಪ್ರೊ. ರುದ್ರೇಶ ಸ್ವಾಮಿ ಗೋರ್ಟಾ. ರಾಚಯ್ಯ ಮಠಪತಿ. ಶರಣಬಸಪ್ಪ ಬಿರಾದಾರ್. ಮಾರುತಿ ಪೂಜಾರಿ ಬಗದುರಿ. ದೀಲಿಪ ಕುಮಾರ್ ಸ್ವಾಮಿ ರಾಜೇಶ್ವರ. ಸರೋಜಿನಿ ಹಿರೇಮಠ. ಕಲ್ಪನಾ ಶೀಲವಂತ ಹಾಗೂ

ಶಾಸಕರಾದ ಶರಣು ಸಲಗರ್ ಸೇರಿದಂತೆ ಒಟ್ಟು ವಿವಿಧ ಕ್ಷೇತ್ರದ 66 ಮಹನ್ನಿಯರಿಗೆ ಶ್ರೀಗಳಿಂದ ವಿದ್ಯಾ ವಿಭೂಷಣ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಿ ಆಶೀರ್ವದಿಸಿದರು.

## ದೆಹಲಿಯಲ್ಲಿ ಮಾಲಿನ್ಯ ಮಟ್ಟ ಹದಗೆಡುವ ಮುನ್ಸೂಚನೆ



ಮಲ್ಲಮ್ಮನುಡಿವಾರ್ತೆ

ನವದೆಹಲಿ, ಅ.17- ಕೇಂದ್ರದ ಏರ್ ಕ್ವಾಲಿಟಿ ಅರ್ಲಿ ವಾರ್ನಿಂಗ್ ಸಿಸ್ಟಮ್ (ಇಡಬ್ಲ್ಯೂಎಸ್) ಮುನ್ಸೂಚನೆಗಳ ಪ್ರಕಾರ ದೆಹಲಿಯು ಈ ಋತುವಿನಲ್ಲಿ "ಕಳಪೆ" ಗಾಳಿಯ ಗುಣಮಟ್ಟವನ್ನುದಾಖಲಿಸಲು ಸಜ್ಜಾಗಿದೆ. ವಾರದ ಮಧ್ಯದಲ್ಲಿ ಮಾಲಿನ್ಯದ ಮಟ್ಟವು ಹದಗೆಡುವ ನಿರೀಕ್ಷೆಯಿದೆ.



ಬಸವಕಲ್ಯಾಣ:ರೈತರು ತಮ್ಮಗಾದ ಅನ್ಯಾಯವನ್ನು ಭಿತ್ತಿ ಚಿತ್ರಗಳ ಬೃಹತ್ ಪ್ರಮಾಣದ ಮೆರವಣಿಗೆಯಲ್ಲಿ ಶಾಸಕರಾದ ಶರಣು ಸಲಗರ ಅರೆಬತ್ತಲೆಯಾಗಿ ಮೆರವಣಿಗೆಯಲ್ಲಿ ಭಡಿ ಏಟುತಿಂದು ಹೋರಾಟಕ್ಕೆ ಇಳಿದಿರುವುದನ್ನು ಕಾಣಬಹುದು. (ಮಲ್ಲಮ್ಮ ನುಡಿ ಚಿತ್ರ)

## ಶಕ್ತಿ ಯೋಜನೆ "ಗೋಲ್ಡನ್ ಬುಕ್ ಆಫ್ ರೆಕಾರ್ಡ್"ಗೆ ಸೇರ್ಪಡೆ




ಮಲ್ಲಮ್ಮ ನುಡಿ ವಾರ್ತೆ

ತುಮಕೂರು: ಪಂಚ ಗ್ಯಾರಂಟಿ ಯೋಜನೆಗಳಿಂದ ತುಮಕೂರು ಜಿಲ್ಲೆಗೆ ಇದುವರೆಗೂ 4701.88 ಕೋಟಿ ರೂ. ಹಣವನ್ನು ಸರ್ಕಾರ ವ್ಯಯಿಸಿದೆ. ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಜಾರಿ ಮಾಡಿರುವ ಗ್ಯಾರಂಟಿ ಯೋಜನೆಗಳು ದೇಶ, ವಿದೇಶದಲ್ಲೂ ಚರ್ಚೆಯಾಗುತ್ತಿವೆ. ಶಕ್ತಿ ಯೋಜನೆ "ಗೋಲ್ಡನ್ ಬುಕ್ ಆಫ್ ರೆಕಾರ್ಡ್"ಗೆ ಸೇರ್ಪಡೆಯಾಗಿರುವುದೇ ಇದ-ಕ್ಕೆ ಸಾಕ್ಷಿ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷರು ಹಾಗೂ ಶಾಸಕರಾದ ದಿನೇಶ್ ಗೂಳಿಗೌಡ ಅವರು ಹೇಳಿದರು.

## ಕನ್ನಡ ಸೇನೆಯ ಮನವಿಗೆ ಸ್ಪಂದಿಸಿದ ಸಾರಿಗೆ ಸಂಸ್ಥೆ ಮೊಕಿನ್ ತಾಂಡಕ್ಕೆ ಬಂತು ಬಸ್ ಗ್ರಾಮಸ್ಥರು ಫುಲ್ ಖುಷ್



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ಮೊಕಿನ್ ತಾಂಡಾದ ವಿದ್ಯಾರ್ಥಿಗಳಿಗಾಗಿ ಅನೇಕ ವರ್ಷಗಳಿಂದ ಶಾಲೆಗೆ ಹೋಗಲು ಯಾವುದೇ ಮೂಲಭೂತ ಸೌಕರ್ಯವಿಲ್ಲದೆ ಪರದಾಡುತ್ತಿರುವ ವಿದ್ಯಾರ್ಥಿಗಳು ಕನ್ನಡ ಸೇನೆ ಕರ್ನಾಟಕದ ಸಂಘ ವತಿಯಿಂದ ಸಂಬಂಧ ಪಟ್ಟ ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸುವ ಮೂಲಕ ಆಗ್ರಹಿಸಿದರು. ಕೂಡಲೇ ಅಧಿಕಾರಿಗಳು ಎಚ್ಚೆತ್ತುಕೊಂಡ ಮೊಕಿನ್ ತಾಂಡಕ್ಕೆ ಸಾರಿಗೆ ಬಸ್ ವ್ಯವಸ್ಥೆ ಕಲ್ಪಿಸಿದ್ದಾರೆ. ಮೊಕಿನ್ ತಾಂಡಾದ ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಕನ್ನಡ ಸೇನೆ ಕರ್ನಾಟಕ ಸಂಘಟನೆಗೆ ಧನ್ಯವಾದ ಸಲ್ಲಿಸಿದರು. ತಾಂಡಾಕ್ಕೆ ಆಗಮಿಸಿದ ಬಸ್ ಗೆ ಸಾರ್ವಜನಿಕರು ಪೂಜೆ ಸಲ್ಲಿಸಿ ಬಸ್ಸಿನ ಚಾಲಕ ಮತ್ತು ನಿರ್ವಾಹಕರಿಗೆ ಶಾಲು ಹೊದಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಕನ್ನಡ ಸೇನೆ ತಾಲೂಕಾಧ್ಯಕ್ಷ ಪವನ್ ಪೂಜಾರಿ, ನಗರ ಘಟಕ ಅಧ್ಯಕ್ಷ ಕಾಶಿನಾಥ್ ರೇಕುಳಗಿ, ರಮೇಶ್ ಪೂಜಾರಿ, ರೈತ ಮೋರ್ಚಾ ಅಧ್ಯಕ್ಷ ರಾಹುಲ್ ರಾಠೋಡ್, ಲಕ್ಷ್ಮಣ, ಆಕಾಶ್ ರಾಥೋಡ್, ಅರವಿಂದ್ ನಾಯಕ್, ಕಾಮು ಕಾರಬಾರಿ, ಭೋಜು, ರಾಮಶೆಟ್ಟಿ ದೇವಲಾ, ಚಂದರ್, ರವಿ ಪೂಜಾರಿ, ಅನಿಲ್ ಸೇರಿದಂತೆ ಕನ್ನಡ ಸೇನೆಯ ಪದಾಧಿಕಾರಿಗಳು, ವಿದ್ಯಾರ್ಥಿಗಳು, ತಾಂಡಾದ ನಿವಾಸಿಗಳು ಉಪಸ್ಥಿತರಿದ್ದರು.

### ಗಿರಿನಾಡು ಮತ್ಸ್ಯ ಸಂಜೀವಿನಿ ಯೋಜನೆಗೆ ಚಾಲನೆ: ಲವೀಶ್ ಒರಡಿಯಾ

## ಜಿಲ್ಲೆಯ ನಾಲ್ಕು ಕೆರೆಗಳಲ್ಲಿ ಮೀನುಮರಿಗಳು ಸಾಗಾಣಿಕೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಅ:17 ಜಿಲ್ಲೆಯಲ್ಲಿ ಗಿರಿನಾಡುಮತ್ಸ್ಯಕ್ರಾಂತಿಯೋಜನೆಯಡಿ ಮತ್ಸ್ಯ ಕಾಳಬೆಳಗುಂದಿ ಗ್ರಾಮ ಪಂಚಾಯತಿಯ ಕಾಣೆಕಲ್ ಕೆರೆಯಲ್ಲಿ ಮೀನಿನ ಮರಿಗಳನ್ನು ಬಿಡುವ ಮೂಲಕ ಅ 15 ರಂದು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕಅಧಿಕಾರಿಗಳಾದ ಶ್ರೀ ಲವೀಶ ಒರಡಿಯಾ ರವರು ಚಾಲನೆ ನೀಡಿದರು.

ಜಿಲ್ಲಾ ಪಂಚಾಯತ ಯಾದಗಿರಿ, ಮೀನುಗಾರಿಕೆಇಲಾಖೆ ಹಾಗೂ ತಾಲೂಕ ಪಂಚಾಯತ ಸಹಯೋಗದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯಡಿ ಜಿಲ್ಲೆಯ ಗುರಮಿಟಕಲ್ತಾಲೂಕಿನಪಸಪೂಲ್ ಗ್ರಮಪಂಚಾಯತಿಯಶರಣಕುಂಟೆ ಕೆರೆ, ಕಾಳಬೆಳಗುಂದಿಯಕಾಣೆಕಲ್-ರೆಕಲಕುಂಟೆ, ಯಾದಗಿರಿತಾಲೂಕಿನ ಮುಂಡರಗಿಯಬೆಳಗೇರಿಯಮಲ ಕೆರೆ, ಬಳಿಚಕ್ರ- ದಿಬ್ಬಿ ಕೆರೆಗಳಲ್ಲಿ ಮೀನುಮರಿಗಳನ್ನು ಸಾಕಾಣಿಕೆಯನ್ನು ಸ್ವಸಹಾಯಸಂಘದಮಹಿಳರನ್ನು ನಿಯೋಜಿಸಲಾಗಿದ್ದು, ಗ್ರಾಮ ಪಂಚಾಯತ ಮತ್ತು ಜಿಪಿಎಲ್ ಎಫ್ ಮತ್ತು ಸ್ವಸಹಾಯ ಸಂಘದ ಸದಸ್ಯರೊಂದಿಗೆಒಡಂಬಡಿಕೆಮಾಡಿ ಕೊಂಡು ಮೀನಿನ ಮರಿಗಳನ್ನು ಸಾಕಾಣಿಕೆ ಮಾಡಲು ಗಿರಿನಾಡ ಮತ್ಸ್ಯ ಕ್ರಾಂತಿ ಎಂದು ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದ ಎಂದರು.

ಜಿಲ್ಲೆಯ ಗ್ರಾಮೀಣ ಕೆರೆಗಳಲ್ಲಿಮೀನುಗಾರಿಕೆಮಾಡಿಸ್ವಯ ಸಹಾಯಸಂಘದ ಮಹಿಳೆಯರಿಗೆ ಸ್ವಯಂಉದ್ಯೋಗಕಲ್ಪಿಸಿ ಮೀನು ಸಾಕಾಣಿಕೆ ಮಾಡಿ ಅದರಿಂದ ಆದಾಯ ಹೆಚ್ಚಿಸುವುದು ಹಾಗೂ ಮೀನುಗಾರಿಕೆಯನ್ನು ಲಾಭದಾಯಕ ವ್ಯಾಪಾರಮಾಡಿಕೊಂಡುಮಹಿಳೆಯರು ಸಬಲೀಕರಣಕ್ಕೆಪೂರಕವಾಗಿದೆಹೇಳಿದರು. ಜಿಲ್ಲೆಯ ಇತರೆತಾಲೂಕುಗಳಲ್ಲಿಈ ಕಾರ್ಯಕ್ರಮವನ್ನುವಿಸ್ತರಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕರಾದಸಿ.ಬಿದೇವರಮನಿ, ಮೀನುಗಾರಿಕೆ ಇಲಾಖೆಯ

ಉಪ ನಿರ್ದೇಶಕರು,

ಗುರುಮಿಟಕಲ್ ತಾಲೂಕಿನ ಕಾರ್ಯನಿರ್ವಾಹಕಅಧಿಕಾರಿಗಳಾದ ಅಂಬ್ರೇಶ್ ಪಾಟೀಲ್ ರವರು ಉಪಸ್ಥಿತರಿದ್ದರು.

ಜಿಲ್ಲಾ ಪಂಚಾಯತಿಯ ಸಂಜೀವಿನಿ ಯೋಜನೆಯ ಆಜ, ಐ, ಅತಾಲೂಕುಪಂಚಾಯತಿಯ ಓಖಐಒಸಿಬ್ಬಂದಿಹಾಗೂಉಐಈ ಸದಸ್ಯರು ಭಾಗವಹಿಸಿದ್ದರು.

## ಕಾರು-ಟ್ರ್ಯಾಕ್ಟರ್ ಡಿಕ್ಕಿ: ಮೂವರ ಸಾವು

ಹಾವೇರಿ,ಅ.17-ರಾಣೆಬೆನ್ನೂರುತಾಲೂಕಿನಕಾಕೋಳಬಳಿರಾಷ್ಟ್ರೀಯ ಹೆದ್ದಾರಿಯಲ್ಲಿ ನಿಲ್ಲಿಸಿದ್ದ ಟ್ರ್ಯಾಕ್ಟರ್ ಟ್ರೇಲರ್‌ಗೆ ಟಾಟಾ ಏಸ್ ಕಾರು ಡಿಕ್ಕಿ ಹೊಡೆದು ಗುರುವಾರ ಸಂಜೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.ಮತ್ತು ಅಪಘಾತದಲ್ಲಿ 20 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದು, ಅವರನ್ನು ರಾಣೆಬೆನ್ನೂರು ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.

ರಾಣೇಬೆನ್ನೂರು ತಾಲೂಕಿನ ಕಾಕೋಳ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಈ ದುರ್ಘಟನೆ ಸಂಭವಿಸಿದೆ.

ಮೃತರನ್ನು ದಾವಣಗೆರೆ ಜಿಲ್ಲೆಯ ಮಲೆಬೆನ್ನೂರು ನಿವಾಸಿಗಳಾದ ಚಮನ್ ಸಾಬ್ ಕೆರಿಮಟ್ಟಿಹಳ್ಳಿ (70), ಮೆಹಬೂಬ್ ಸಾಬ್ ದೊಡ್ಡಗುಬ್ಬಿ (65) ಮತ್ತು ನಿಂಗಮ್ಮ ಜಿಗಳೇರ್ (70) ಎಂದು ಗುರುತಿಸಲಾಗಿದೆ. ಸಂಬಂಧಿಕರ ಮದುವೆ ಕಾರ್ಯಕ್ರಮ ಮುಗಿಸಿ ತಿರುಗಿ ಟಾಟಾ ಎಸ್ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಮೆರವಣಿಗೆ ಮುಗಿಸಿ ತಮ್ಮ ಗ್ರಾಮಕ್ಕೆ ಹಿಂತಿರುಗುತ್ತಿದ್ದಾಗ ಅಪಘಾತ ಸಂಭವಿಸಿದೆ.

ಸಂಬಂಧಿಕರ ಮದುವೆಗೆ ಕಾರ್ಯಕ್ರಮ ಮುಗಿಸಿ ವಾಪಸ್ ಊರಿಗೆ ತೆರಳುತ್ತಿದ್ದ ವೇಳೆ ರಸ್ತೆ ಬದಿ ನಿಂತಿದ್ದ ಟ್ರಾಕ್ಟರ್ ಟ್ರೈಲರ್ ಗೆ ಟಾಟಾ ಏಸ್ ಡಿಕ್ಕಿ ಹೊಡೆದಿದೆ. ಟ್ರಾಕ್ಟರ್ ಟ್ರೈಲರ್ ಹಿಂಬದಿ ಯಾವುದೇ ಲೈಟ್ ಇರದ ಕಾರಣ ಕತ್ತಲಲ್ಲಿ ಬೇಗ ಅದು ಕಾಣಿಸಲ್ಲ. ಪರಿಣಾಮ ವೇಗವಾಗಿ ಬಂದ ಟಾಟಾ ಏಸ್ ರಸ್ತೆ ಬದಿ ನಿಲ್ಲಿಸಲಾಗಿದ್ದ ಟ್ರೈಲರ್ ಗೆ ಗುದ್ದಿದೆ ಎಂದು ತಿಳಿದುಬಂದಿದೆ.

ರಾಣೇಬೆನ್ನೂರುಗ್ರಾಮೀಣಪೊಲೀಸ್ ಠಾಣೆಯಲ್ಲಿಪ್ರಕರಣದಾಖಲಾಗಿದೆ.

## ಶಕ್ತಿ ಯೋಜನೆ ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಸೇರ್ಪಡೆ ನಕಲಿ

ಬೆಂಗಳೂರು:ಅ.17: ರಾಜ್ಯ ಸರ್ಕಾರದ ಶಕ್ತಿ ಯೋಜನೆ ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಸೇರ್ಪಡೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಕ್ಸ್ ನಲ್ಲಿ ಹಂಚಿಕೊಂಡ ಪ್ರಮಾಣಪತ್ರ ಇದೀಗ ಅಪಹಾಸ್ಯಕ್ಕೆ ಕಾರಣವಾಗಿದ್ದು, ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿವೆ.ಇತ್ತೀಚಿಗೆ ಸಿಎಂ ಸಿದ್ದರಾಮಯ್ಯ ಅವರು ಶಕ್ತಿ ಯೋಜನೆ ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಸೇರಿದ ಪ್ರಮಾಣ ಪತ್ರವನ್ನು ಹಂಚಿಕೊಂಡಿದ್ದರು. ಆದರೆ ಇದು ನಕಲಿ ಎಂದು ಬಿಜೆಪಿ ಆರೋಪಿಸಿದ್ದು, ಈ ಬಗ್ಗೆ, ಸಿಎಂ ಕಚೇರಿ(ಸಿಎಂಒ) ಈಗ ಪರಿಶೀಲಿಸುತ್ತಿದೆ.ಮೂರು ದಿನಗಳ ಹಿಂದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ವಾಸಿಸುವ ಎಲ್ಲಾ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣವನ್ನು ಸುಗಮಗೊಳಿಸುವ ತಮ್ಮ ಸರ್ಕಾರದ 'ಶಕ್ತಿ' ಯೋಜನೆಯ ಮೂಲಕ ಅತಿ ಹೆಚ್ಚು ಮಹಿಳೆಯರು ಉಚಿತ ಬಸ್ ಪ್ರಯಾಣಕ್ಕಾಗಿ 'ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್' ಸೇರಿದೆ ಎಂದು ಪ್ರಮಾಣ ಪತ್ರ ಹಂಚಿಕೊಂಡಿದ್ದರು.

ಬಿಜೆಪಿ ಎಂಎಲ್ಸಿ ಮತ್ತು ಮಾಜಿ ಸಚಿವ ಸಿ ಟಿ ರವಿ ಹೇಳಿದಂತೆ ಈ ಪ್ರಮಾಣಪತ್ರವು ನಕಲಿ ಎಂದು ಈಗ ತಿಳಿದುಬಂದಿದೆ.ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಲಿಮಿಟೆಡ್ ಅನ್ನು ಜುಲೈ 15, 2025 ರಂದು ಮುಚ್ಚಲಾಯಿತು ಎಂದು ಜೆಡಿ(ಎಸ್) ಹೇಳಿಕೊಂಡಿದೆ.ಈ ಪ್ರಮಾಣಪತ್ರ ನಕಲಿ ಮಾತ್ರವಲ್ಲ. ಅದರ ದರಪಟ್ಟಿಯೂ ಇದೆ! ನೀವು ಎಷ್ಟು ಕೆಳಮಟ್ಟಕ್ಕೆ ಹೋಗಿ ಜನರನ್ನು ಮರುಳು ಮಾಡಲು ಈ ಅಗ್ಗದ ತಂತ್ರಗಳನ್ನು ಮಾಡುತ್ತೀದಿರಿ ಎಂದು ಸಿಟಿರವಿ ಅವರು ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.ಉದಾಹರಣೆಗೆ, ಪ್ರಮಾಣಪತ್ರ, ಪದಕ, ಟ್ರೋಫಿಯನ್ನು ಹೊಂದಿರುವ 4,000 ರೂ.ಗಳ 'ಕ್ಲಾಸಿಕ್ ಯೋಜನೆ'ಯನ್ನು ಕೊರಿಯರ್ ಮೂಲಕ ಕಳುಹಿಸಲಾಗುತ್ತದೆ. ಪ್ಲಾಟಿನಂ ಪ್ಯಾಕೇಜ್ ಬೆಲೆ 10,000 ರೂ. ಎಂದು ಹೇಳಿದ್ದಾರೆ.

### ಜೈವಿಕ ಇಂಧನ ಉದ್ಯಾನವನಕ್ಕೆ ಅಧ್ಯಕ್ಷ ಎಸ್ ಇ ಸುಧೀಂದ್ರ ಭೇಟಿ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರುಅ17:ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯಅಧ್ಯಕ್ಷರಾದಎಸ್ಇ ಸುಧೀಂದ್ರ ಅವರು ಅಕ್ಟೋಬರ್ 17ರಂದುತಿಂಥಣಿಹತ್ತಿರದಜೈವಿಕ ಇಂಧನ ಉದ್ಯಾನವನಕ್ಕೆ ಭೇಟಿ ನೀಡಿದರು.

ಜೈವಿಕ ಇಂಧನ ಉತ್ಪಾದನೆ ಹಾಗೂಬಳಕೆಬಗ್ಗೆರೈತರುಹಾಗೂ ಅಧಿಕಾರಿಗಳೊಂದಿಗೆಅವರುಇದೆ ವೇಳೆ ಚರ್ಚಿಸಿದರು.

ಜೈವಿಕ ಇಂಧನ ಉದ್ಯಾನದ ಸಂಯೋಜಕರಾದಡಾ.ಶ್ಯಾಮರಾವ್ ಕುಲಕರ್ಣಿಅವರುಉದ್ಯಾನದಲ್ಲಿನ ಕಾರ್ಯ ಚಟುವಟಿಕೆಗಳ ಬಗ್ಗೆ ಅಧ್ಯಕ್ಷರಿಗೆ ವಿವರಿಸಿದರು.

ಹಾಲುಒಕ್ಕೂಟದಮೂಲಕಹಾಲು ಸಂಗ್ರಹಣೆಮಾಡುವರೀತಿಯಲ್ಲಿ ಹೊಂಗೆಬೀಜಗಳನ್ನುಸಹಸಂಗ್ರಹ ಮಾಡಿದಲ್ಲಿ ಜೈವಿಕ ಇಂಧನದ ಉತ್ಪಾದನೆಯ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಬಹುದಾಗಿದೆ ಎಂದು ಪ್ರಗತಿಪರ ರೈತರಾದ ದೇವರೆಡ್ಡಿ ಅವರು ಇದೆ ವೇಳೆ ಸಲಹೆ ಮಾಡಿದರು.

ಜೈವಿಕಇಂಧನಉದ್ಯಾನದಲ್ಲಿನ ಸಿಬ್ಬಂದಿಯುಇನ್ನೂಹೆಚ್ಚಿನರೀತಿಯಲ್ಲಿ ಹಳ್ಳಿಹಳ್ಳಿಗಳಿಗೆ ಸಂಚರಿಸಿ ಜೈವಿಕ ಇಂಧನ ಮಹತ್ವದ ಬಗ್ಗೆ ತಿಳಿವಳಿಕೆ ಮೂಡಿಸುವಕಾರ್ಯಮಾಡಬೇಕು. ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯಿಂದ ಇನ್ನು ಹೆಚ್ಚಿನ ಅನುದಾನ ದೊರಕಿದಲ್ಲಿ ಉದ್ಯಾನದಲ್ಲಿಹೆಚ್ಚಿನಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲುಅನುಕೂವಾಗುತ್ತದೆ ಎಂದು ಮತ್ತೊಬ್ಬ ಪ್ರಗತಿಪರ ರೈತರಾದ ಗಂಗಾಧರ ನಾಯಕ್ ಅವರು ಸಲಹೆ ಮಾಡಿದರು.

ಈಸಂದರ್ಭದಲ್ಲಿಎಂ.ಡಿ.ಆಸಾದ್, ಸೋಮರಾಯಡಿ.,ಜಿಹನುಮಂತರಾಯ ಬಿರಾದಾರ, ಚನ್ನಾರೆಡ್ಡಿ, ರತ್ನರಾಜ್ ಸಾಲಿಮಾನಿ, ಸೋಮಣ್ಣಹಾಲಭಾವಿ, ಬಸವರಾಜರಾಮದುರ್ಗ, ವೆಂಕಟೇಶ್ ಹಾವಿನಾಳ, ಭೀಮಣ್ಣಹುನಸಿಹೋಲಿ, ದವಳಸಾಬ ಇದ್ದರು.

## ಅಂಗನವಾಡಿಗೆ ಜವಳಿ ಇಲಾಖೆಯಿಂದ ಸೀರೆ

### ಮುಖ್ಯಮಂತ್ರಿಗಳಿಗೆ ಜವಳಿ ಸಚಿವ ಶಿವಾನಂದ ಪಾಟೀಲ ಮನವಿ

ಬೆಂಗಳೂರು,ಅ17:ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕರಿಯರಿಗೆಸೀರೆಪೂರೈಕೆ ಮಾಡುವಆದೇಶವನ್ನುಕರ್ನಾಟಕ ಕೈಮಗ್ಗಅಭಿವೃದ್ಧಿನಿಗಮಕ್ಕೆನೀಡಬೇಕು ಎಂದು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವಶಿವಾನಂದಪಾಟೀಲಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಮಹಿಳಾಮತ್ತುಮಕ್ಕಳಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕಸಬಲೀಕರಣಇಲಾಖೆಯಿಂದ ಅಂಗನವಾಡಿಕಾರ್ಯಕರ್ತೆಯರು, ಸಹಾಯಕಿಯರಿಗೆ ತಲಾ ಎರಡು ಸೀರೆಗಳಂತೆ ಒಟ್ಟು 2,79,668 ಸೀರೆಗಳನ್ನು ಐಸಿಡಿಎಸ್ ಯೋಜನೆ ಅಡಿಕೆಟಿಪಿಪಿನಿಯಮಗಳಅನ್ವಯ ಖರೀದಿಸಲುಉದ್ದೇಶಿಸಿರುವುದಾಗಿ ತಿಳಿದು ಬಂದಿದೆ.

ಈಸೀರೆಗಳಪೂರೈಕೆಆದೇಶವನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೀಡಿದರೆ ನೇಕಾರರಿಗೆ ಉದ್ಯೋಗ ದೊರಕಿಸುವುದರ ಜೊತೆಗೆ ನಷ್ಟದಲ್ಲಿರುವ ನಿಗಮದ ಪುನಶ್ಚೇತನಕ್ಕೂ ನೆರವಾಗಲಿದೆ ಎಂದು ಸಚಿವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆಬರೆದಿರುವ ಪತ್ರದಲ್ಲಿ ವಿನಂತಿ ಮಾಡಿದ್ದಾರೆ.

ಸರ್ಕಾರದವಿವಿಧಇಲಾಖೆಗಳಿಗೆ ಅಗತ್ಯವಾದಬಟ್ಟೆಮತ್ತುಸೀರೆಗಳನ್ನು ಕೈಮಗ್ಗ ಮತ್ತು ಜವಳಿ ಇಲಾಖೆ ಅಡಿಯಲ್ಲಿಕಾರ್ಯನಿರ್ವಹಿಸುತ್ತಿರುವ ನಿಗಮಗಳಿಂದ ಖರೀದಿ ಮಾಡಲು ಈ ಹಿಂದೆ ಆದೇಶ ಮಾಡಲಾಗಿದೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಈಗಾಗಲೇ ವಿನಾಯಿತಿ ನೀಡಿಆದೇಶಿಸಿರುವುದರಿಂದಮತ್ತು ಕೆಎ???ಡಿಸಿಬಲವರ್ಧನೆಹಾಗೂ ನೇಕಾರರಹಿತದೃಷ್ಟಿಯಿಂದರಾಜ್ಯ ಸರ್ಕಾರದ ಎಲ್ಲ ಇಲಾಖೆಗಳಿಗೆ

ಬೇಡಿಕೆಯ ಪ್ರತಿಶತ

75ರಷ್ಟು ಸಮವಸ್ತ್ರಗಳನ್ನು ಕಡ್ಡಾಯವಾಗಿಕರ್ನಾಟಕಕೈಮಗ್ಗ ಅಭಿವೃದ್ಧಿ ನಿಗಮದಿಂದ ಪೂರೈಕೆ ಮಾಡಲು ಆದೇಶ ಹೊರಡಿಸಿವೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

## ಮಾದಿಗ ಸಂಘಟನೆಗಳ ಒಕ್ಕೂಟ ಸಮಿತಿ ವತಿಯಿಂದ ಬೃಹತ್ ಪ್ರತಿಭಟನೆ




ಮಲ್ಲಮ್ಮ ನುಡಿ ವಾರ್ತೆ

ಶಹಾಪುರ್ :ಅ.17: ಮಾದಿಗ ಸಂಘಟನೆಯ ಒಕ್ಕೂಟ ಸಮಿತಿ ಶಹಪುರ್ ವತಿಯಿಂದ ಇಂದು ವಾಲ್ಮೀಕಿ ವೃತ್ತದಿಂದ ಬಸವೇಶ್ವರ ವೃತ್ತದವರೆಗೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಯಿತು.

ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳಾಗಿರುವ ಬಿ ಆರ್ ಗವಾಯಿ ಅವರ ಮೇಲೆ ಸನಾತನಿವಕೀಲಹಾಗೂಅವಿವೇಕಿ ವಕೀಲರಾಗಿರುವಕಿಶೋರ್ ಅವರು ಅವಮಾನಮಾಡಿರುವತೀವ್ರವಾಗಿ ಖಂಡಿಸುತ್ತೇವೆ ಎಂದು ರುದ್ರಪ್ಪ ಹುಲಿಮನಿಕಾರವಾಗಿಹೇಳಿದರು. ಇದು ಪ್ರಜಾಪ್ರಭುತ್ವಸಂವಿಧಾನಹಾಗೂ ಭಾರತ ನ್ಯಾಯಾಂಗ ವ್ಯವಸ್ಥೆಯ ಮೇಲೆ ನಡೆದ ಅತ್ಯಂತ ಹೀನಾಯ ಘಟನೆಯಾಗಿದೆ. ದಲಿತಸಮುದಾಯ ಸೇರಿದ ನ್ಯಾಯಮೂರ್ತಿಗಳಾದ ಗವಾಯಿ ಅವರು ಸಂವಿಧಾನದ ತತ್ವಗಳ ಆಧಾರದ ಮೇಲೆ ಅತ್ಯಂತ ಘನತೆ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ನ್ಯಾಯಾಧೀಶರ ಮೇಲೆ ಸನಾತನಿ ಮನಸ್ಥಿತಿಯವಕೀಲನೊಬ್ಬ ಅಸಹನೆ ಹಿಂದೂಧರ್ಮದಒಳಗಿನಅಸ್ಪೃಶ್ಯತೆ ಜಾತೀಯತೆತಾರತಮ್ಯ ಸ್ವಾತಂತ್ರ್ಯ ನಂತರ75 ವರ್ಷಗಳನಂತರವೂ ಈ ರೀತಿಮನವಾದಉಳಿದುಕೊಂಡಿರುವುದು ವಿಪರ್ಯಾಸ. ನ್ಯಾಯಮೂರ್ತಿ ಗವಾಯಿಯವರು ಸಂವಿಧಾನದ ಆಸೆಯಂತೆಬದುಕುತ್ತಿರುವಅಪ್ಪಟ ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೇಲೆ ಗೌರವ ಇಟ್ಟುಕೊಂಡಿರುವ ಮಹಾನ್ ವ್ಯಕ್ತಿ ಇವರಾಗಿದ್ದು ಈರೀತಿ ಮಾಡ್ತಾ ಇರುವಮನುವಾದಿಗಳಿಗೆ ಯಾವಶಿಕ್ಷೆನೀಡಿದರುಕಡಿಮೆಎಂದು ಖ್ಯಾತನ್ಯಾಯವಾದಿಗಳಾದವಾಸುದೇವ್ ಕಟ್ಟಿಮನಿ ಮಾತನಾಡಿದರು. ಸದಾ ಸಮಾನತೆಮತ್ತು ತಾರತಮ್ಯವನ್ನು ಉಸಿರಾಡುವ ಕೋಮವಾದಿ ಸನಾತನಿಮನಸುಗಳಿಗೆಇಂಥನಿಷ್ಠರ ನ್ಯಾಯಾಧೀಶರಮೇಲೆದ್ವೇಷಕಾರುವ ಮನಸಿನವಕೀಲನೆಗೆಸರಿಯಾಗಿ ಶಿಕ್ಷೆ ನೀಡಬೇಕು ಇಲ್ಲವಾದರೆ ರಾಷ್ಟ್ರದ ಉಗ್ರವಾದಹೋರಾಟಮಾಡುವುದಾಗಿ ಶಿವಕುಮಾರ್ ದೊಡ್ಡಮನಿತಿಳಿಸಿದರು.

ಸ್ವತಂತ್ರ ಸಿಕ್ಕು ಇಲ್ಲಿವರೆಗೂ ಮನೆವಾದಿಗಳುನಮ್ಮ ಮೇಲೆದಾಳಿ ಮಾಡುತ್ತಲೇಬರುತ್ತಿದ್ದಾರೆಇಂಥವರ ವಿರುದ್ಧ ಗಡಿಪಾರು ಮಾಡುವುದು ಬಹಳ ಅವಶ್ಯವಾಗಿದೆಸಮಾಜದಲ್ಲಿ ಅಶಾಂತಿ ಉಂಟುಮಾಡಿ ಹೋಮೆ ಗಲಭೆಗಳನ್ನು ಎಬ್ಬಿಸುತ್ತಿರುವ ಇಂಥ ನಾಲಾಯಕರಿಗೆ ಕಠಿಣ ಶಿಕ್ಷೆ ನೀಡಿ ಗಡಿಪಾರುಮಾಡುವಂತೆಆಗ್ರಹಿಸಿದರು ಮಾನಪ್ಪವತಾರಸಮಾಜದಹಿರಿಯ ಮುಖಂಡರುಕಾರ್ಯಕ್ರಮದಲ್ಲಿ ಉಪಸ್ಥಿತರು

ಶಾಂತಪ್ಪ ಕಟ್ಟಿಮನಿ. ವೆಂಕಟೇಶ್ ಆಲೂರು. ಸೋಪಣ್ಣದರಿಯಾಪುರ್. ಮಲ್ಲಪ್ಪ ಉಳಗೇರಿ. ಸಿದ್ದಪ್ಪ ದೇವರಗೋನಾಲ್. ಶಿವರೆಡ್ಡಿ ಗುಂಡಗುರ್ತಿ. ವಿಜಯಕುಮಾರ್ ಎದುರುಮನೆ. ಬಸವರಾಜ್ ನಾಯ್ಕಲ್. ಪರಶುರಾಮ್ ಮಹಲ್ ರೋಜಾ. ಭೀಮರಾಯಕರ್ಕಳ್ಳಿ. ರವಿಚಂದ್ರ ಕಾಂಗ್ರೆಸ್. ಈರಪ್ಪಗುತ್ತಿಪೇಟ್. ಶಿವು ದೊಡ್ಡಮನಿಶಿರ್ವಾಳ. ಮಲ್ಲಿಕಾರ್ಜುನ್ ಉಮ್ಮರದೊಡ್ಡಿ. ಮಾನಪ್ಪಮದ್ರ್ಕಿ. ಮೋಹನ್ ರಾಜ್ ಗೌಡ ಕನ್ಯ ಕೊಲ್ಲೂರ್. ಖಂಡಪ್ಪ ಕಂಚನ ಕವಿ. ಧರ್ಮರಾಜ್ ನಾಟೇಕರ್. ಅಯ್ಯಪ್ಪ ಕದರಾಪುರ್. ಲಕ್ಷ್ಮಣ ಇಂದ್ರನಗರ. ಭೀಮರಾಯಗೋಗಿ ಗ್ರಾಮಪಂಚಾಯತಿಉಪಾಧ್ಯಕ್ಷರು.

ಚಂದಪ್ಪ ಹಲ್ಗಿ. ಭೀಮರಾಯ ಕಾಂಗ್ರೆಸ್. ಪ್ರದೀಪ್ ಅಣಬಿ. ಹನುಮಂತದೋರನಹಳ್ಳಿ. ಚಂದ್ರು ಕಟ್ಟಿಮನಿ. ಪರಶುರಾಮ್

ಸಗರ್. ಹೀಗೆ ಹಲವಾರು ಉಪಸ್ಥಿತರಿದ್ದರು.

## ಡಿ.1 ರೊಳಗೆ 33,000 ಕೋಟಿ ರೂ ಬಾಕಿ ಪಾವತಿಸದಿದ್ದರೆ ಎಲ್ಲಾ ಕಾಮಗಾರಿ ಸ್ಥಗಿತ: ರಾಜ್ಯ ಗುತ್ತಿಗೆದಾರರ ಸಂಘ

ಬೆಂಗಳೂರು:ಅ.17ರಾಜ್ಯಸರ್ಕಾರ ಡಿ. 1 ರೊಳಗೆ ರೂ. 33,000 ಕೋಟಿ ಮೊತ್ತದ ಬಾಕಿ ಮೊತ್ತವನ್ನು ಪಾವತಿಸಲುರಾಜ್ಯಗುತ್ತಿಗೆದಾರರಸಂಘ ಗಡುವನ್ನುನೀಡಿದೆ. ಇಲ್ಲದಿದ್ದರೆಎಲ್ಲಾ ಕಾಮಗಾರಿಗಳನ್ನು ನಿಲ್ಲಿಸುವುದಾಗಿ ಸಂಘ ಬೆದರಿಕೆ ಹಾಕಿದೆ.




ಇನ್ನೂ 44 ದಿನ ಕಾಯುತ್ತೇವೆ: ಈ ಕುರಿತುಮುಖ್ಯಮಂತ್ರಿಸಿದ್ದರಾಮಯ್ಯ ಅವರನ್ನು ಭೇಟಿಮಾಡಿದ್ದು, ಮನವಿ ಸಲ್ಲಿಸಲಾಗಿತ್ತು. ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಸಿಎಂ ಭರವಸೆ ನೀಡಿದ್ದರು. ನಾವು ಎರಡೂವರೆ ವರ್ಷದಿಂದಕಾಯುತ್ತಿದ್ದೇವೆ. ಇನ್ನೂ 44 ದಿನ ಕಾಯುತ್ತೇವೆ. ಆ ನಂತರ ನಾವುಕಾಮಗಾರಿಸ್ಥಗಿತಗೊಳಿಸುವುದು ಮಾತ್ರವಲ್ಲದೇ ರಾಹುಲ್ ಗಾಂಧಿ, ಎಐಸಿಸಿಅಧ್ಯಕ್ಷಮಲ್ಲಿಕಾರ್ಜುನಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರ ಮಧ್ಯಸ್ಥಿಕೆಗೆ ಮನವಿ ಮಾಡುತ್ತೇವೆ ಎಂದುರಾಜ್ಯಗುತ್ತಿಗೆದಾರರಸಂಘದ ಅಧ್ಯಕ್ಷ ಮಂಜುನಾಥ್ ಹೇಳಿದ್ದಾರೆ.

**ಡಿಸೆಂಬರ್ ನಲ್ಲಿ ರಾಜ್ಯಪಾಲರಿಗೆ ದೂರು:**

ಗೌರಿ-ಗಣೇಶಹಬ್ಬ, ದಸರಾಮತ್ತು ದೀಪಾವಳಿಸಂದರ್ಭದಲ್ಲಿಕಾರ್ಮಿಕರು ತಮ್ಮ ಬಾಕಿಹಣಹಾಗೂಬೋನಸ್‌ಗೆ ಬೇಡಿಕೆಇಡುವುದರಿಂದಗುತ್ತಿಗೆದಾರರು ತಮ್ಮ ಫೋನ್‌ಗಳನ್ನು ಸ್ವಿಚ್ ಆಫ್ ಮಾಡುವಷ್ಟುಪರಿಸ್ಥಿತಿಭೀಕರವಾಗಿದೆ ಎಂದುಸಂಘಹೇಳಿಕೊಂಡಿದೆ. ಹಬ್ಬದ ನಂತರಸಭೆನಡೆಸುತ್ತೇವೆಎಂದುಹೇಳಿದ್ದ ಸಿಎಂ ಸಿದ್ದರಾಮಯ್ಯ, ಸಭೆ ಕರೆದು ಸಮಸ್ಯೆ ಬಗೆಹರಿಸಬೇಕು. ಇಲ್ಲದಿದ್ದರೆ ಡಿಸೆಂಬರ್‌ನಲ್ಲಿರಾಜ್ಯಪಾಲರಿಗೆದೂರು ನೀಡುತ್ತೇವೆ ಎಂದು ಮಂಜುನಾಥ್ ಎಚ್ಚರಿಸಿದ್ದಾರೆ. ಭ್ರಷ್ಟಾಚಾರ ಇನ್ನೂ ಮುಂದುವರಿದಿದೆ. ಆದರೆ ತಮ್ಮ ಮುಖ್ಯಗಮನವು ಬಾಕಿ ಉಳಿದಿರುವ ಬಾಕಿಗಳನ್ನು ಬಗೆಹರಿಸುವುದಾಗಿದೆ ಎಂದು ಸಂಘ ಹೇಳಿದೆ.

ಹಣ ಬಿಡುಗಡೆ ವಿಚಾರದಲ್ಲಿ ಕಮಿಷನ್ ದುಪ್ಪಟ್ಟಾಗಿದೆ ಎಂದು ಪತ್ರದಲ್ಲಿ ಹೇಳಿದ್ದೇನೆ, ಶೇ. 40, ಶೇ. 60, ಶೇ. 80 ಅಂತಾ ಹೇಳಿಲ್ಲ. ಸಣ್ಣ ಗುತ್ತಿಗೆದಾರರುವಿಷಕುಡಿಯುವಸ್ಥಿತಿಗೆ ಬಂದಿದ್ದಾರೆ. ಕಾಂಗ್ರೆಸ್ ಸರ್ಕಾರದಲ್ಲಿ ಲಂಚವಿಲ್ಲಎಂದುನಾನುಹೇಳುತ್ತಿಲ್ಲ, ಎಲ್ಲಾ ವಿಚಾರಗಳನ್ನು ಡಿಸೆಂಬರ್ ನಲ್ಲಿ ಬಹಿರಂಗಪಡಿಸುತ್ತೇವೆ ಎಂದು ಮಂಜುನಾಥ್ ಹೇಳಿದ್ದಾರೆ.

ಐದರಿಂದಆರುಬಾರಿಸಿಎಂಅವರನ್ನು ಭೇಟಿಮಾಡಿದ್ದೇವೆ. ಸಚಿವಸಂಪುಟದ ಪ್ರತಿಸಚಿವರನ್ನು ಭೇಟಿಮಾಡಿದ್ದೇವೆ, ಆದರೆಬಾಕಿಉಳಿದಿರುವಸಮಸ್ಯೆಯನ್ನು ಪರಿಹರಿಸಲಾಗಿಲ್ಲ. 'ಪಿಡಬ್ಲ್ಯುಡಿ ಇಲಾಖೆಯಲ್ಲಿ ? 9,000 ಕೋಟಿ ಬಾಕಿ ಇದೆ. ಸೀನಿಯರಿಟಿ ಆಧಾರದ ಮೇಲೆಹಣನೀಡುತ್ತಿದ್ದಾರೆ. ಉಳಿದ ಇಲಾಖೆಗಳಲ್ಲಿಆಗುತ್ತಿಲ್ಲ, ನೀರಾವರಿ ಇಲಾಖೆಯಿಂದ ? 12,000 ಕೋಟಿ ಬಾಕಿಇದೆ. ಒಟ್ಟಾರೆ ? 33,000 ಕೋಟಿ ಬಾಕಿ ಇದೆ. ಲೋಕೋಪಯೋಗಿ ಇಲಾಖೆ ಹೊರತುಪಡಿಸಿದರೆ ಬೇರೆ ಯಾವುದೇಇಲಾಖೆಯಿಂದಬಾಕಿಹಣ ಬಿಡುಗಡೆಯಾಗಿಲ್ಲ. ಇದನ್ನು ಸಿಎಂ ಮತ್ತು ಸಚಿವರಗಮನಕ್ಕೆತರಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಗ್ರಾಮೀಣಾಭಿವೃದ್ಧಿಮತ್ತುಪಂಚಾಯತ್ ರಾಜ್ (ಆರ್‌ಡಿಪಿಆರ್) ಇಲಾಖೆಯು ಗುರುವಾರದಿಂದಹಂತಹಂತವಾಗಿಬಾಕಿ ಬಿಡುಗಡೆಯನ್ನು ಪ್ರಾರಂಭಿಸಿದೆಎಂದು ಸಚಿವಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. 50 ಕೋಟಿ ಮೊತ್ತದ ಒಂದು ಬಿಲ್ ಅನ್ನು ಸಿಎಂ ಕ್ಲಿಯರ್ ಮಾಡಬೇಕಿದೆ ಎಂದು ಮಂಜುನಾಥ್ ತಿಳಿಸಿದರು. ಲೋಕಾಯುಕ್ತದಿಂದ ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ನಿವೃತ್ತ ಅಧಿಕಾರಿಬಾಲರಾಜ್ ಅವರನ್ನು ವಸತಿ ಇಲಾಖೆಗೆ ನೇಮಕ ಮಾಡಲಾಗಿದೆ ಎಂದು ಸಂಘ ಆರೋಪಿಸಿದೆ. ಭ್ರಷ್ಟ ಅಧಿಕಾರಿಯನ್ನು ವಜಾಗೊಳಿಸುವಂತೆ ಸಚಿವ ಜಮೀರ್ ಅಹಮದ್ ಖಾನ್ ಅವರಿಗೆಮನವಿಮಾಡಿದ್ದರೂಇನ್ನೂ ಕ್ರಮ ಕೈಗೊಂಡಿಲ್ಲ ಎಂದು ಸಂಘ ದೂರಿದೆ. ಪಕ್ಷಬೇಧವಿಲ್ಲದೆಸುಮಾರು 70ಶಾಸಕರುಸಿವಿಲ್‌ಕಾಮಗಾರಿಗುತ್ತಿಗೆಗೆ ಕಡಿವಾಣಹಾಕಲು ಅಧಿಕಾರಿಗಳನ್ನು ಬಳಸಿಕೊಳ್ಳುತ್ತಿದ್ದಾರೆ' ಎಂದುಸಂಘದ ಗೌರವಾಧ್ಯಕ್ಷ ಜಗನ್ನಾಥ ಸೇಠಜಿ ಗಂಭೀರ ಆರೋಪ ಮಾಡಿದರು. ಕಲ್ಯಾಣ ಕರ್ನಾಟಕದಲ್ಲಿ ಪ್ಯಾಕೇಜ್ ಒಪ್ಪಂದಗಳಲ್ಲಿ ಶೇ. 15, ಶೇ. 20 ರಷ್ಟು ಕಮಿಷನ್ ಒಳಗೊಂಡಿರುವ ಭ್ರಷ್ಟಾಚಾರವಿದೆ. ಯಾವುದೇಸಚಿವರು ಭಾಗಿಯಾಗಿಲ್ಲ, ಮತ್ತು ಎಲ್ಲಾ ಶಾಸಕರು ಅದರ ಭಾಗವಾಗಿಲ್ಲ. ಹೈಕಮಾಂಡ್ ಗೆ ಪತ್ರ ಬರೆದಾಗ ಆ ಎಲ್ಲಾ ಶಾಸಕರ ಹೆಸರನ್ನು ನಾವು ಉಲ್ಲೇಖಿಸುತ್ತೇವೆ. ಗುತ್ತಿಗೆದಾರರನ್ನು ಒಳಗೊಂಡಗಂಭೀರ ಅಕ್ರಮಗಳಿವೆಮತ್ತುಗುಲ್ಬರ್ಗ ಡಿಎಂಎ ಪ್ಯಾಕೇಜ್ ಸೇರಿದಂತೆಎಲ್ಲಾನಾಲ್ಕು ಪ್ಯಾಕೇಜ್ ಯೋಜನೆಗಳನ್ನು

ಸರ್ಕಾರ ತನಿಖೆ ಮಾಡಬೇಕು ಎಂದು ಅವರು ಹೇಳಿದರು.

# ಯುವಜನೋತ್ಸವ ಯುವ ಪ್ರತಿಭೆ ಗುರುತಿಸಲು ಉತ್ತಮ ವೇದಿಕೆಯಾಗಿದೆ : ಹಿಟ್ನಾಳ್



ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ : ಅ.17:ನಮ್ಮ ರಾಜ್ಯ ಸರ್ಕಾರ ಯುವಸಬಲೀಕರಣಕ್ಕಾಗಿ ಯುವಜನೋತ್ಸವ ದಂತಹ ಕಾರ್ಯಕ್ರಮಗಳನ್ನುಹಮ್ಮಿಕೊಳ್ಳುತ್ತಿದೆ. ಯುವಜನರಲ್ಲಿರುವಜನಪದಕಲೆ, ಸಾಹಿತ್ಯ ಮತ್ತುಕ್ರೀಡೆಯಂತಹಪ್ರತಿಭೆಗಳನ್ನು ಗುರುತಿಸಲುಯುವಜನೋತ್ಸವ ಕಾರ್ಯಕ್ರಮವುಒಂದುಉತ್ತಮ ವೇದಿಕೆಯಾಗಿದೆ ಎಂದು ಕೊಪ್ಪಳ ಶಾಸಕರಾದಕೆ.ರಾಘವೇಂದ್ರಹಿಟ್ನಾಳ್ ಹೇಳಿದರು.

ಅವರುಶುಕ್ರವಾರಕೊಪ್ಪಳನಗರದ ಸಾಹಿತ್ಯಭವನದಲ್ಲಿಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ ಹಾಗೂ ರಾಜ್ಯ ಯುವ ಸಂಘಗಳ ಒಕ್ಕೂಟ (ರಿ), ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಕೊಪ್ಪಳ ಜಿಲ್ಲಾಮಟ್ಟದಯುವಜನೋತ್ಸವ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು.

ಯುವಜನತೆಯಲ್ಲಿರುವಪ್ರತಿಭೆಯನ್ನು ಪ್ರದರ್ಶನಮಾಡಲುಅವಕಾಶಗಳನ್ನು ಕಲ್ಪಿಸಿ, ಅವರಿಗೆರಾಜ್ಯ, ರಾಷ್ಟ್ರಮಟ್ಟದಲ್ಲಿ ತಮ್ಮ ಕಲೆಯ ನೈಪುಣ್ಯತೆಯನ್ನು ಪ್ರದರ್ಶನ ಮಾಡುವುದಕ್ಕಾಗಿ ಯುವಜನೋತ್ಸವದಂತಹ ಕಾರ್ಯಕ್ರಮಗಳನ್ನುಆಯೋಜಿಸಲಾಗುತ್ತಿದೆ. ಯುವಜನತೆಇಂತಹಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮಲ್ಲಿಅಡಗಿರುವಪ್ರತಿಭೆಯನ್ನು ಪ್ರದರ್ಶಿಸಬೇಕುಎಂದುತಿಳಿಸಿದರು.

ದೇಶದ ಅತ್ಯುನ್ನತ ಪ್ರಶಸ್ತಿಗಳಲ್ಲೊಂದಾದ ಪದ್ಮಶ್ರೀ ಪ್ರಶಸ್ತಿ ಪಡೆದ ಬೀಮವ್ವ ಶಿಳ್ಳೇಕ್ಯಾತರ್ ಅವರುನಮ್ಮ ಜಿಲ್ಲೆಯ ಹೆಮ್ಮೆಯಾಗಿದ್ದಾರೆ. ಅವರಲ್ಲಿರುವ ಪ್ರತಿಭೆಯು ಅವರನ್ನು ಹಳ್ಳಿಯಿಂದ ರಾಷ್ಟ್ರಮಟ್ಟದಲ್ಲಿ ಗುರುತಿಸುವಂತೆ ಮಾಡಿದೆ. ಪದ್ಮಶ್ರೀಪುರಸ್ಕೃತರಾದ ಬೀಮವ್ವಶಿಳ್ಳೇಕ್ಯಾತರ್ ಅವರು103 ವರ್ಷದತಮ್ಮ ಇಳಿವಯಸ್ಸಿ ನಲ್ಲೂ ತಮ್ಮಲ್ಲಿನಕಲೆಯನ್ನುಯಾವರೀತಿಯಲ್ಲಿ ಪ್ರದರ್ಶಿಸುತ್ತಿದ್ದಾರೆ. ಅವರನ್ನು ನಾವೆಲ್ಲರೂಸ್ಪೂರ್ತಿಯಾಗಿಸಿಕೊಳ್ಳಬೇಕು. ವಿಶೇಷವಾಗಿನಮ್ಮ ಯುವಜನರು ಯಾವುದೇ ರೀತಿಯಲ್ಲಿ ಹಿಂಜರಿತ ತೋರದೆಸ್ಪರ್ಧೆಗಳಲ್ಲಿಭಾಗವಹಿಸಿತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ, ನಮ್ಮ ಜಿಲ್ಲೆ, ರಾಜ್ಯ ಮತ್ತು ದೇಶಕ್ಕೆಉತ್ತಮ ಹೆಸರು ತರುವರಂತವರಾಗಬೇಕು ಎಂದರು.

ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ಅವರುಮಾತನಾಡಿ, ಯುವಕರುಸಹ ನಮ್ಮ ದೇಶದ ಬೆನ್ನೆಲುಬು ಮತ್ತು ಭವ್ಯ ಪ್ರಜೆಗಳಾಗಿದ್ದಾರೆ. ನಮ್ಮ ರಾಜ್ಯ ಸರ್ಕಾರವು ಯುವಕರು ಮತ್ತು ಮಹಿಳೆಯರಿಗಾಗಿ ಅನೇಕ ಯೋಜನೆಗಳನ್ನು ಜಾರಿಗೆತಂದಿದೆ. ದೇಶದಯುವಜನತೆಯಶಕ್ತಿಹಾಗೂ ಅವರಪ್ರತಿಭೆಯನ್ನುಪ್ರದರ್ಶಿಸಲು ಈಯುವಜನೋತ್ಸವಕಾರ್ಯಕ್ರಮ ಒಂದುಉತ್ತಮವೇದಿಕೆಯಾಗಿದೆ. ನಮ್ಮ ಜಿಲ್ಲೆಯಯುವಪ್ರತಿಭೆಗಳು ವಿವಿಧಸಾಂಸ್ಕೃತಿಕಮತ್ತುಕಲಾತ್ಮಕ ಸ್ಪರ್ಧೆಯಲ್ಲಿಭಾಗವಹಿಸಿರಾಜ್ಯಹಾಗೂ ರಾಷ್ಟ್ರಮಟ್ಟದಲ್ಲಿನಮ್ಮ ಜಿಲ್ಲೆಯ ಹೆಸರು ತರುವಂತೆ ಮಾಡಬೇಕು ಎಂದು ಹೇಳಿದರು.

ಕೊಪ್ಪಳ ಜಿಲ್ಲಾ ಗ್ಯಾರಂಟಿ ಯೋಜನೆಗಳಅನುಷ್ಠಾನಪ್ರಾಧಿಕಾರದ ಅಧ್ಯಕ್ಷರಾದರೆಡ್ಡಿಶ್ರೀನಿವಾಸಅವರು ಮಾತನಾಡಿ, ಯುವಜನೋತ್ಸವ ಕಾರ್ಯಕ್ರಮದಲ್ಲಿ ಯುವ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನುಪ್ರದರ್ಶಿಸಬೇಕು. ಯುವಕರಲ್ಲಿಹೆಚ್ಚಿನಪ್ರೋತ್ಸಾಹ ನೀಡುವ ಉದ್ದೇಶದಿಂದ ನಮ್ಮ ಸರ್ಕಾರ ಯುವನಿಧಿ ಯೋಜನೆ ಜಾರಿ ಮಾಡಿದೆ. ನಮ್ಮ ಜಿಲ್ಲೆಯ ಸುಮಾರು 10 ಸಾವಿರಕ್ಕೂ ಅಧಿಕ ನಿರುದ್ಯೋಗಿ ವಿದ್ಯಾವಂತರು ಈ ಯೋಜನೆಯಡಿನೋಂದಾಯಿಸಿಕೊಂಡು, ಯುವನಿಧಿಯಲಾಭಪಡೆಯುತ್ತಿದ್ದಾರೆ. ಅರ್ಹ ಯುವಜನತೆ ಯುವನಿಧಿ ಯೋಜನೆಯ ಸದುಪಯೋಗ ಪಡಿಸಿಕೊಳ್ಳಬೇಕುಎಂದುಹೇಳಿದರು.

ಹೊಲಿಗೆ ಯಂತ್ರ ವಿತರಣೆ: ಮಹಿಳೆಯರಸ್ವಾವಲಂಬನೆಬದುಕನ್ನು ಕಟ್ಟುವನಿಟ್ಟಿನಲ್ಲಿರಾಜ್ಯಸರ್ಕಾರದ ಡಿ. ದೇವರಾಜ್ ಅರಸು ಅಭಿವೃದ್ಧಿ ನಿಗಮವತಿಯಿಂದಅರ್ಹಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ಇದೇಸಂದರ್ಭದಲ್ಲಿ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿಕರ್ನಾಟಕ ರಾಜ್ಯಯುವಸಂಘಗಳಒಕ್ಕೂಟಹಾಗೂ ಕನ್ನಡ ಜಾನಪದ ಪರಿಷತ್ತಿನ ರಾಜ್ಯ ಅಧ್ಯಕ್ಷರಾದಡಾ.ಎಸ್.ಬಾಲಾಜಿ, ರಾಜ್ಯ ಯುವಪ್ರಶಸ್ತಿಹಾಗೂರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದಶರಣಪ್ಪವಡಿಗೇರಿ, ಯುವಸಬಲೀಕರಣಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕವಿಠ್ಠಲ್‌ಬಿ.ಜಾಬಗೌಡರ, ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದಜಿಲ್ಲಾಅಧ್ಯಕ್ಷರಾದ ಮಂಜುನಾಥಜಿ. ಗೊಂಡಬಾಳ, ತಾಲ್ಲೂಕುಕ್ರೀಡಾಧಿಕಾರಿಶರಬಸಪ್ಪ ಬಂಡಿಹಾಳ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಸಹಾಯಕ ಕ್ರೀಡಾಧಿಕಾರಿಗಳು, ರಾಜ್ಯ ಮತ್ತು ಜಿಲ್ಲಾಯುವಪ್ರಶಸ್ತಿಪುರಸ್ಕೃತರು, ಯುವ ಸಂಘಗಳ ಒಕ್ಕೂಟಗಳು

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGA NO. 120927
(RNINO:KARKAN/2011/48371)